

ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 29 | ಜುಲೈ 13– 19, 2020 | ಪುಟ 16 | ರೂ. 10

Web : www.janashakthi.co.in e-mail : js_we[illegible]yahoo.com

‘ಆತ್ಮ ನಿರ್ಭರ್’ಗೆ ಜನತೆಯ ಆಸ್ತಿ ಮೈಶುಗರ್ ಬಲಿ



ಮೋದಿಯ ‘ಕೋವಿಡ್’ ಗೋಜಲು

‘ಸಾಂಕ್ರಾಮಿಕದ ನೆರಳು’ ಕೌಟುಂಬಿಕ ಹಿಂಸೆ







ಮನರೇಗಾದ ಸಾಮರ್ಥ್ಯ

‘ಎಲ್ಲರಿಗೂ ಕೋವಿಡ್-19 ಅಂದ್ರೆ ಇಷ್ಟ’

ಅಂಗವಿಕಲರ ಹಕ್ಕುಗಳ ಮೇಲೂ ಕೆಂಗಣ್ಣು!

ಪಿಎಂಕೇರ್ಸ್ ನಿಧಿಯನ್ನು ಪಾರದರ್ಶಕ, ಜವಾಬುದಾರಗೊಳಿಸಬೇಕು –ತಕ್ಷಣವೇ ಅದನ್ನು ರಾಜ್ಯ ಸರಕಾರಗಳಿಗೆ ವರ್ಗಾಯಿಸಬೇಕು

ಪ್ರಧಾನ ಮಂತ್ರಿಗಳ ಕಚೇರಿ ಪಿಎಂಕೇರ್ಸ್ ನಿಧಿಯ ವಿವರಗಳನ್ನು ಬಹಿರಂಗ ಪಡಿಸಲು ಸತತವಾಗಿ ನಿರಾಕರಿಸತ್ತಲೇ ಬರುತ್ತಿರುವುದು ಅತ್ಯಂತ ಕಳವಳಕಾರಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿರುವ, ಮತ್ತು ರಕ್ಷಣಾ, ಗೃಹ ಹಾಗೂ ಹಣಕಾಸು ಮಂತ್ರಿಗಳು ಟ್ರಸ್ಟಿಗಳಾಗಿರುವ ಒಂದು ಖಾಸಗಿ ಟ್ರಸ್ಟ್ ರಚಿಸಿರುವ ನಿಧಿ ಎಂದು ಘೋಷಿಸಲಾಗಿದೆ. ಇದು ಒಂದು ಖಾಸಗಿ ಟ್ರಸ್ಟ್ ಆಗಿರುವುದರಿಂದ ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪ್ರಶ್ನೆಗಳಿಗೆ ಒಳಪಡುವುದಿಲ್ಲ, ಮತ್ತು ಯಾವುದೇ ಸರಕಾರೀ ಲೆಕ್ಕ ಪರಿಶೋಧಕರ ಪರಿಶೋಧನೆಗೂ ಒಳಪಡುವುದಿಲ್ಲ ಎಂದೂ ಹೇಳಲಾಗಿದೆ. ಒಟ್ಟಿನಲ್ಲಿ ಈ ನಿಧಿಯಲ್ಲಿ ಪಾರದರ್ಶಕತೆಯಿಲ್ಲ, ಜವಾಬುದಾರಿಕೆಯೂ ಇಲ್ಲ ಎಂಬುದು ಸ್ಪಷ್ಟ.

ಮಾರ್ಚ್ ತಿಂಗಳಲ್ಲಿ ಸಂಸತ್ತಿನ ಅಧಿವೇಶನ ಮುಂದೂಡಲ್ಪಡುತ್ತಿದ್ದಂತೆ ಈ ನಿಧಿಯ ರಚನೆಯನ್ನು ಪ್ರಕಟಿಸಲಾಯಿತು. ಕೊವಿಡ್ ಮಹಾಮಾರಿಯನ್ನು ಎದುರಿಸುವ ಗುರಿಯ ಹೆಸರಿನಲ್ಲಿ ಈ ನಿಧಿಗೆ ಉದಾರ ವಂತಿಗೆಗಳನ್ನು ನೀಡಬೇಕು ಎಂದು ಸಾರ್ವಜನಿಕ ಮನವಿಯನ್ನು ಮಾಡಲಾಯಿತು. ಸರಕಾರೀ ನೌಕರರು ಮತ್ತು ವೃತ್ತಿಪರರು ಕಡ್ಡಾಯವಾಗಿ ಒಂದು ದಿನದ ಸಂಬಳವನ್ನು ವಂತಿಗೆ ಕೊಡುವಂತೆ ಮಾಡಲಾಯಿತು. ಸಂಸದ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ(ಎಂ.ಪಿ.ಎಲ್.ಎ.ಡಿ.) ನಿಧಿಯ ಎರಡು ವರ್ಷಗಳ ಮೊತ್ತವನ್ನು ಇದರತ್ತ ತಿರುಗಿಸಲಾಯಿತು. ಈ ಖಾಸಗಿ ಟ್ರಸ್ಟ್ ನ ನಿಧಿಗೆ ವಂತಿಗೆಗಳನ್ನು 'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ'(ಸಿ.ಎಸ್ ಆರ್)ಗೆ ಅರ್ಹವಾದ ವಂತಿಗೆಯೆಂದು ಪರಿಗಣಿಸಲು ಸಾಧ್ಯವಾಗುವಂತೆ ಕಂಪನಿ ಕಾಯ್ದೆ ,2013ನ್ನು ತಿದ್ದುಪಡಿ ಮಾಡಲಾಯಿತು. ಈ ನಿಧಿ ರಾಷ್ಟ್ರೀಯ ಲಾಂಛನವನ್ನು, ಪ್ರಧಾನಿಗಳ ಭಾವಚಿತ್ರವನ್ನು ಉದಾರವಾಗಿ ಬಳಸುತ್ತದೆ, ಸಾರ್ವಜನಿಕ ಉದ್ದಿಮೆಗಳ ನೌಕರರು ಇದಕ್ಕೆ ವಂತಿಗೆ ನೀಡುವಂತೆ ಅಧಿಕೃತ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಈ ನಿಧಿಗೆ ವಂತಿಗೆಗಳಿಗೆ ತೆರಿಗೆ ವಿನಾಯ್ತಿಯನ್ನೂ ಒದಗಿಸಲಾಗಿದೆ.

ಈಗಾಗಲೇ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ ಎಂಬೊಂದು ಪಾರದರ್ಶಕ, ಜವಾಬುದಾರ ಮತ್ತು ಸಿ.ಎ.ಜಿ. ಲೆಕ್ಕ ಪರಿಶೋಧನೆ ಮಾಡುವ ನಿಧಿ ದೇಶ ಸ್ವತಂತ್ರವಾದಾಗಿನಿಂದಲೇ ಇರುವಾಗ ಇಂತಹದೊಂದು ಪ್ರತ್ಯೇಕ ಖಾಸಗಿ ಟ್ರಸ್ಟ್ ನಿಧಿಯ ಅಗತ್ಯವಾದರೂ ಏನು ಎಂಬ ಪ್ರಶ್ನೆಗೆ ಪ್ರಧಾನ ಮಂತ್ರಿಗಳ ಕಚೇರಿ ಇನ್ನೂ ಉತ್ತರ ಕೊಟ್ಟಿಲ್ಲ.

ಈಗಾಗಲೇ ಈ ಪಿಎಂಕೇರ್ಸ್ ನಿಧಿಯಲ್ಲಿ ಸುಮಾರು 10,000 ಕೋಟಿ ರೂ.ಗಳು ಸಂಗ್ರಹವಾಗಿವೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ಇದರಲ್ಲಿ 4,000 ಕೋಟಿ ರೂ.ಗಳು ಸರಕಾರೀ ಸಂಸ್ಥೆಗಳು ಮತ್ತು ನೌಕರರಿಂದಲೇ ಬಂದಿವೆ. ಇದು ಸಾಧ್ಯವಾಗಿರುವುದು ಸರಕಾರದ ಅಧಿಕಾರ ಮತ್ತು ಮಂಜೂರಾತಿಯಿಂದಲೇ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ನಿಧಿಗಳನ್ನು ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಿ ಕೊರೊನ ವೈರಸ್‌ನ ತಪಾಸಣೆಗೆ ಮೂಲರಚನೆಯಲ್ಲಿ ಕಂಡು ಬಂದಿರುವ ಕೊರತೆಗಳನ್ನು ನಿವಾರಿಸಲು ಮತ್ತು ವೈರಸ್‌ನಿಂದ ಪೀಡಿತರಾಗಿರುವ ರೋಗಿಗಳ ಶುಶ್ರೂಷೆಗೆ ಬಿಡುಗಡೆ ಮಾಡಬೇಕು ಎಂದು ಕೇಳಿದೆ.

ಈ ನಿಧಿಯಿಂದ ಯಾವುದೇ ಬಹಿರಂಗ ಟೆಂಡರ್ ಪ್ರಕ್ರಿಯೆಯಿಲ್ಲದೆ ಖರೀದಿಸಿದ ವೆಂಟಿಲೇಟರುಗಳನ್ನು ಕುರಿತಂತೆ ಗಂಭೀರ ಆಪಾದನೆಗಳು ಮತ್ತು ವಿವಾದಗಳು ಬಯಲಿಗೆ ಬಂದಿವೆ. ಈ ಎಲ್ಲ ಕಾರಣಗಳಿಂದಾಗಿ ಈ ನಿಧಿಯನ್ನು ಪಾರದರ್ಶಕ ಮತ್ತು ಉತ್ತರದಾಯಿಯಾಗಿ ಮಾಡಬೇಕು ಎಂಬುದು ತನ್ನ ದೃಢ ಅಭಿಪ್ರಾಯ, ಮತ್ತು ಈ ನಿಧಿಯನ್ನು ಮಹಾಮಾರಿಯ ವಿರುದ್ಧ ಸಮರದ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ತಕ್ಷಣವೇ ವರ್ಗಾಯಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ನಿಧಿಯ ವಿವರಗಳನ್ನು ಸಾರ್ವಜನಿಕಗೊಳಿಸಬೇಕು ಹಾಗೂ ಇದನ್ನು ಸಾರ್ವಜನಿಕ ಪರಿಶೋಧನೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದೆ.

ವೈರಸ್ ನಿರೋಧಕ 'ರೆಮ್ಡೆಸಿವಿರ್' ಪೇಟೆಂಟ್ ಏಕಸ್ವಾಮ್ಯ ಮುರಿಯಿರಿ ಭಾರತದಲ್ಲೇ ಜೆನೆರಿಕ್ ಉತ್ಪಾದನೆಗೆ 'ಕಡ್ಡಾಯ ಲೈಸೆನ್ಸ್' ಕೊಡಿ

ಕೊವಿಡ್-19 ಶುಶ್ರೂಷೆಯಲ್ಲಿ ಪರಿಣಾಮಕಾರಿಯೆಂದು ಕಂಡು ಬಂದಿರುವ, ಪೇಟೆಂಟ್ ಗುತ್ತೇದಾರಿಕೆಯಿಂದಾಗಿ ವಿಪರೀತ ತುಟ್ಟಿಯಾಗಿರುವ ರೆಮ್ಡೆಸಿವಿರ್ ಔಷಧಿಯನ್ನು ಭಾರತದಲ್ಲಿ ಜೆನೆರಿಕ್ ಔಷಧಿಯಾಗಿ ತಯಾರಿಸಲು ಭಾರತದ ಪೇಟೆಂಟ್ ಕಾಯ್ದೆಯ ಅಡಿಯಲ್ಲಿ ಅವಕಾಶವಿದೆ. ಇದನ್ನು ಬಳಸಿಕೊಂಡು ಕೇಂದ್ರ ಸರಕಾರ ಜೀವಗಳನ್ನು ಉಳಿಸಲು ಅತ್ಯಗತ್ಯವಾದ ಮತ್ತು ಮಹಾಮಾರಿಯನ್ನು ಎದುರಿಸುವಲ್ಲಿ ಪರಿಣಾಮಕಾರಿಯಾದ ಈ ಔಷಧಿಯ ಜೆನೆರಿಕ್ ಆವೃತ್ತಿಯನ್ನು ಜನಗಳಿಗೆ ಕೈಗೆಟಕುವ ಬೆಲೆಯಲ್ಲಿ ತಯಾರಿಸಲು ಕಡ್ಡಾಯ ಲೈಸೆನ್ಸ್ ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಗಿಲಿಯೆಡ್ ಸೈನ್ಸೆಸ್ ಕಂಪನಿಯ ಈ ವೈರಸ್ ನಿರೋಧಕ ಔಷಧಿ ಕೊವಿಡ್-19 ರೋಗಿಗಳ ಶುಶ್ರೂಷೆಯಲ್ಲಿ ಪರಿಣಾಮಕಾರಿ ಎಂದು ಕಂಡು ಬಂದಿದೆ. **ಕೊವಿಡ್ ಮಹಾಮಾರಿಯನ್ನು ಎದುರಿಸುವಲ್ಲಿ ಉಪಯೋಗಿ ಎಂದು ಕಂಡು ಬರುವ ಎಲ್ಲ ಔಷಧಿಗಳನ್ನು ಅಮೆರಿಕ ಕಳ್ಳದಾಸ್ತಾನು ಮಾಡುತ್ತಿದೆ ಎಂದು ಮಾಧ್ಯಮ ವರದಿಗಳು ಸೂಚಿಸುತ್ತಿದ್ದು, ಅದು ಗಿಲಿಯಡ್ ಕಂಪನಿಯಿಂದ ಮುಂದಿನ ಮೂರು ತಿಂಗಳಿಗೆ ರೆಮ್ಡೆಸಿವಿರ್ ಔಷಧಿಯ ಎಲ್ಲ ದಾಸ್ತಾನನ್ನು ಖರೀದಿಸಿಟ್ಟಿದೆ. ಆದ್ದರಿಂದ ಅದು ಜಗತ್ತಿನ ಇತರ ದೇಶಗಳಿಗೆ ಲಭ್ಯವಾಗುವುದಿಲ್ಲ.**

ಈ ಔಷಧಿಯನ್ನು 5 ದಿನ ಕೊಡಬೇಕಾಗಿದ್ದು, ಇದರ ಒಟ್ಟು ಬೆಲೆ ಅಮೆರಿಕದಲ್ಲಿ 3000 ಡಾಲರ್, ಅಂದರೆ 2.25ಲಕ್ಷ ರೂ. ಭಾರತದ 5 ಕಂಪನಿಗಳು ಗಿಲಿಯಡ್‌ನ ಲೈಸೆನ್ಸ್ ಪಡೆದು ಇದನ್ನು ಉತ್ಪಾದಿಸುವ ಬಗ್ಗೆ ಮಾತುಕತೆಗಳನ್ನು ನಡೆಸುತ್ತಿವೆ. ಭಾರತದಲ್ಲಿ ಇದನ್ನು ತಯಾರಿಸಿದ ನಂತರ ಇಲ್ಲಿ ಅದರ ರಿಯಾಯ್ತಿ ಬೆಲೆ ಅದೇ 5 ದಿನಗಳಿಗೆ ಒಟ್ಟು 400 ಡಾಲರ್ ಅಥವ 30,000–35,000 ರೂ.ಗಳಾಗುತ್ತದೆ. ಇದನ್ನು ಉತ್ಪಾದಿಸುವ ವೆಚ್ಚ, ಪರಿಣಿತರು ಮಾಡಿರುವ ಲೆಕ್ಕಾಚಾರದ ಪ್ರಕಾರ ಅಮೆರಿಕಾದಲ್ಲಿ 10 ಡಾಲರ್ ಅಥವ 750ರೂ., ಭಾರತದಲ್ಲಿ 100ರೂ. ಗಿಲಿಯಡ್ ಕಂಪನಿ ತಾನು ಪಡೆದಿರುವ ಪೇಟೆಂಟ್ ಗುತ್ತೇದಾರಿಕೆಯಿಂದಾಗಿ ಅದರ ವೆಚ್ಚದ ನೂರು ಪಟ್ಟು ವಸೂಲಿ ಮಾಡಿ ಜಗತ್ತನ್ನು ಸುಲಿಯುತ್ತಿದೆ.

ಭಾರತದ ಔಷಧಿ ಮಹಾ ನಿಯಂತ್ರಕರು (ಡಿ.ಸಿ.ಜಿ.ಐ.) ಭಾರತದಲ್ಲಿ ಕೊವಿಡ್-19 ರೋಗಿಗಳಿಗೆ ರೆಮ್ಡೆಸಿವಿರ್ ಬಳಸಲು ಮಂಜೂರಾತಿ ನೀಡಿದ್ದಾರೆ. ಆದರೆ **ಒಂದೆಡೆಯಲ್ಲಿ ಅಮೆರಿಕಾ ಸಮಸ್ತ ದಾಸ್ತಾನನ್ನು ಖರೀದಿಸಿ ಬಿಟ್ಟಿದೆ. ಇನ್ನೊಂದೆಡೆಯಲ್ಲಿ ಪೇಟೆಂಟ್ ಗುತ್ತೇದಾರಿಕೆಯಿಂದಾಗಿ ಅದರ ಬೆಲೆ ವಿಪರೀತ ಮಟ್ಟದಲ್ಲಿದೆ. ಇದರಿಂದಾಗಿ ಭಾರತೀಯ ರೋಗಿಗಳಿಗೆ ಅದು ಲಭ್ಯವಾಗುಗುವುದಿಲ್ಲ, ಇಲ್ಲವೇ ವಿಪರೀತ ಬೆಲೆಯಿಂದಾಗಿ ಕೊಳ್ಳಲಾಗುವುದಿಲ್ಲ.**

ಆದರೆ ಈ ಪೇಟೆಂಟ್ ಗುತ್ತೇದಾರಿಕೆಯನ್ನು ಮುರಿಯಲು ಭಾರತದ ಪೇಟೆಂಟ್ ಕಾಯ್ದೆಯಲ್ಲಿ ಅವಕಾಶವಿದೆ. ಇದನ್ನು ರೂಪಿಸುವಲ್ಲಿ ಎಡಪಕ್ಷಗಳು ಒಂದು ಕೇಂದ್ರ ಪಾತ್ರ ವಹಿಸಿದ್ದವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಕಾಯ್ದೆಯ ಪರಿಚ್ಛೇದ 92ರ ಅಡಿಯಲ್ಲಿ ಈ ಔಷಧಿಯನ್ನು ಭಾರತದಲ್ಲಿ ತಯಾರಿಸಲು ಒಂದು ಕಡ್ಡಾಯ ಲೈಸೆನ್ಸ್ ನೀಡುವ ಹಕ್ಕು ಭಾರತಕ್ಕಿದೆ. ಮತ್ತು ಭಾರತದ ಔಷಧಿ ತಯಾರಕರು ಇದನ್ನು ಒಂದು ಜೆನೆರಿಕ್ ಔಷಧಿಯಾಗಿ ತಯಾರಿಸಲು ಶಕ್ತರಾಗಿದ್ದಾರೆ ಹಾಗೂ ಅಂತಹ ಇಚ್ಛಾಶಕ್ತಿಯೂ ಕೂಡ ಇದೆ. ಪೇಟೆಂಟ್ ಕಾಯ್ದೆಯ ಪರಿಚ್ಛೇದ 92ಎ ಅಡಿಯಲ್ಲಿ ಈ ಔಷಧಿಯ ಅಗತ್ಯವಿರುವ, ಆದರೆ ಅದನ್ನು ಉತ್ಪಾದಿಸಲಾರದ ದೇಶಗಳಿಗೆ ರಫ್ತು ಮಾಡಲು ಕೂಡ ಕಡ್ಡಾಯ ಲೈಸೆನ್ಸ್ ಕೊಡಲು ಸಾಧ್ಯವಿದೆ.

ಗಿಲಿಯಡ್ ಕಂಪನಿ ರೆಮ್ಡೆಸಿವಿರ್ ಗೆ ಸುಲಿಗೆಕೋರ ಬೆಲೆ ವಿಧಿಸಿರುವುದರಿಂದ ಸರಕಾರ ಕೂಡಲೇ ಕೆಲವು ಭಾರತೀಯ ತಯಾರಕರಿಗೆ ಇದನ್ನು ತಯಾರಿಸಲು ಕಡ್ಡಾಯ ಲೈಸೆನ್ಸ್ ಕೊಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಭಾರತ ಜಗತ್ತಿನಲ್ಲಿ ಜೆನೆರಿಕ್ ಔಷಧಿಗಳ ಅತ್ಯಂತ ದೊಡ್ಡ ಉತ್ಪಾದಕರಲ್ಲಿ ಒಂದು ಆಗಿರುವುದರಿಂದ ಭಾರತೀಯ ಜನತೆಗೆ ಈ ಔಷಧಿಯನ್ನು ತ್ವರಿತವಾಗಿ ಮತ್ತು ಕೈಗೆಟಕುವ ಬೆಲೆಯಲ್ಲಿ ಲಭ್ಯಗೊಳಿಸದಿರಲು ಕಾರಣಗಳೇನೂ ಇಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ **ಕೇಂದ್ರ ಸರಕಾರ ತಕ್ಷಣವೇ ಪೇಟೆಂಟ್ ಕಾಯ್ದೆಯ ಪರಿಚ್ಛೇದ 92ನ್ನು ಬಳಸಿಕೊಂಡು ಜೀವಗಳನ್ನು ಉಳಿಸಲು ಅತ್ಯಗತ್ಯವಾದ ಮತ್ತು ಮಹಾಮಾರಿಯನ್ನು ಎದುರಿಸುವಲ್ಲಿ ಪರಿಣಾಮಕಾರಿಯಾದ ಈ ಔಷಧಿಯ ಜೆನೆರಿಕ್ ಆವೃತ್ತಿಯನ್ನು ತಯಾರಿಸಲು ಕಡ್ಡಾಯ ಲೈಸೆನ್ಸ್ ನೀಡಬೇಕು** ಎಂದು ಕರೆ ನೀಡಿದೆ.

'ವ್ಯಾಪಾರ ಸುಗಮತೆ'ಗಾಗಿ ಅಂಗವಿಕಲರ ಹಕ್ಕುಗಳ ಕಾಯ್ದೆಗೂ ತಿದ್ದುಪಡಿ ತರುತ್ತಿರುವ ಸರಕಾರ

ವಿಕಲತೆಗಳಿರುವ ವ್ಯಕ್ತಿಗಳ ಹಕ್ಕುಗಳ ಕಾಯ್ದೆ (Rights of Persons with Disabilities Act), 2016 ರ ಕೆಲವು ಅಂಶಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ನಡೆಸ ಲಾಗುತ್ತಿದೆ. ಈ ಕಾಯ್ದೆಯ ಅಡಿಯಲ್ಲಿರುವ ಕೆಲವು ಅಪರಾಧಗಳನ್ನು 'ಕ್ರಿಮಿನಲ್' ಅಲ್ಲ ಎನ್ನುವ, ಇನ್ನು ಕೆಲವನ್ನು 'ಅಮುಖ್ಯ"(ಮೈನರ್) ಎಂದು ಪಟ್ಟಿ ಮಾಡುವ, ಹಾಗೂ ಮತ್ತೆ ಕೆಲವನ್ನು ಒಟ್ಟು ಸೇರಿಸಿ ದುರ್ಬಲಗೊಳಿಸುವ ತಿದ್ದುಪಡಿಗಳನ್ನು ಸರಕಾರ ಸೂಚಿಸಿದೆ. ಇದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ. ಏಕೆಂದರೆ ಇವು ಈ ಕಾಯ್ದೆಯ ಸ್ವರೂಪವನ್ನೇ ತೀವ್ರ ರೀತಿಯಲ್ಲಿ ಬದಲಿಸುತ್ತವೆ ಎಂದು ಅದು ಅಭಿಪ್ರಾಯ ಪಟ್ಟಿದೆ. ಹಿಂದೆ ಇದ್ದ 1995ರ 'ವಿಕಲತೆಗಳಿರುವ ವ್ಯಕ್ತಿಗಳ (PwD) ಕಾಯ್ದೆ'ಯನ್ನು ರದ್ದು ಮಾಡಿ ತಂದಿರುವ ಈ RPD ಕಾಯ್ದೆಯ ಒಂದು ಪ್ರಗತಿಪರ ಅಂಶವೆಂದರೆ, ಕಾಯ್ದೆಯನ್ನು ಅನುಸರಿಸದೇ ಇರುವುದಕ್ಕೆ ಮತ್ತು ಉಲ್ಲಂಘನೆಗೆ ದಂಡನೆಯ ಪರಿಚ್ಛೇದಗಳು ಇದರಲ್ಲೇ ಅಡಕವಾಗಿವೆ ಎಂಬುದು.

ಈ ತಿದ್ದುಪಡಿಗಳಿಗೆ ಸರಕಾರ ಹಾಸ್ಯಾಸ್ಪದ ನೆವಗಳನ್ನು ಕೊಟ್ಟಿದೆ. ಇಂತಹ ಅಂಶಗಳು "ಅಡ್ಡಿಗಳಾಗಿ ಪರಿಣಮಿಸಿವೆ ಮತ್ತು ದೇಶೀ ಮತ್ತು ವಿದೇಶೀ ಹೂಡಿಕೆದಾರರು ಇಬ್ಬರಿಂದಲೂ ಹೂಡಿಕೆಗಳ ಮೇಲೆ ಪರಿಣಾಮ ಬೀರುವ ಪ್ರಮುಖ ಕಾರಣಗಳಲ್ಲಿ ಒಂದು ಎಂದು ಕಾಣಲಾಗುತ್ತಿದೆ" ಎಂದು ಅದು ಹೇಳುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. 'ವ್ಯಾಪಾರ ಸುಗಮತೆ' ಎಂಬುದು ದೀರ್ಘ ಹೋರಾಟಗಳ ಮೂಲಕ ಗೆದ್ದುಕೊಂಡಿರುವ ಆಧಾರಭೂತ ಮಾನವ ಹಕ್ಕುಗಳನ್ನು ಬಲಿಗೊಟ್ಟು ಸಾಧ್ಯವಿಲ್ಲ. RPD ಕಾಯ್ದೆಯಲ್ಲಿ ಈ ಅಂಶಗಳನ್ನು ಸೇರಿಸಿರುವ ಉದ್ದೇಶವೆಂದರೆ, ನಮ್ಮ ಸಮಾಜದಲ್ಲಿ ವಿವಿಧ ಪದರುಗಳ ತಾರತಮ್ಯವನ್ನು ಎದುರಿಸಬೇಕಾಗಿರುವ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗವೊಂದಕ್ಕೆ ಸಂಸತ್ತು ಪಾಸು ಮಾಡಿದ ಒಂದು ಕಾನೂನಿನ ಪಾಲನೆಯಾಗಬೇಕು ಮತ್ತು ಜವಾಬುದಾರಿಕೆಯನ್ನು ಖಾತ್ರಿಪಡಿಸಬೇಕು ಎಂಬುದೇ ಆಗಿದೆ.

ಈ ಪ್ರಸ್ತಾವಿತ ತಿದ್ದುಪಡಿಗಳ ನಿಜವಾದ ಉದ್ದೇಶವೇನೆಂಬುದನ್ನು ಸರಕಾರವೇ ಒಪ್ಪಿಕೊಂಡಿದೆ. ಇದು ಮಹಾಮಾರಿಯ ಪರಿಸ್ಥಿತಿಯನ್ನು ಬಳಸಿಕೊಂಡು ದೇಶದ ಅರ್ಥವ್ಯವಸ್ಥೆಯನ್ನು ದೇಶಿ–ವಿದೇಶಿ ಬಂಡವಾಳದ ಲೂಟಿಗೆ ಇನ್ನಷ್ಟು ತೆರೆದುಕೊಡುವ ಮೋದಿ ಸರಕಾರದ ಪ್ರಯತ್ನಗಳಿಗೆ ಅನುಸಾರವಾಗಿಯೇ ಇದೆ. ಹೋರಾಟಗಳ ಗಳಿಕೆಗಳನ್ನು ಈ ರೀತಿಯಲ್ಲಿ ನಿರಾಕರಿಸುವ ಪ್ರಯತ್ನಗಳು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿಗಳು, ಭಿನ್ನಮತದ ದಮನ, ಕಾರ್ಮಿಕ ಕಾನೂನುಗಳ ತಿದ್ದುಪಡಿ ಇತ್ಯಾದಿಗಳಿಗೆ ಅನುಗುಣವಾಗಿಯೇ ಇದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನ್ಯೂನತೆಗಳಿರುವವರ ಹಕ್ಕುಗಳ ಸಂಘಟನೆಗಳು ಮತ್ತು ಸಕ್ರಿಯ ಕಾರ್ಯಕರ್ತರಿಗೆ ಸಮಾನತೆ, ನ್ಯಾಯ ಮತ್ತು ತಾರತಮ್ಯ–ರಹಿತತೆಯ ಆಧಾರಭೂತ ನೀತಿಗಳಿಗೆ ವಿರುದ್ಧ ಹೋಗುವ ಈ ಪ್ರತಿಗಾಮಿ ತಿದ್ದುಪಡಿಗಳನ್ನು ಮಾಡಲಾಗದಂತೆ ಸರಕಾರವನ್ನು ತಡೆಯುವ ಅವರ ಹೋರಾಟದಲ್ಲಿ ಸೌಹಾರ್ದತೆ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದೆ.

ಐಕ್ಯ ಪ್ರತಿಭಟನೆಗೆ ಮಣಿದ ಸರಕಾರ

"**ನಮಗೆ ದಿವ್ಯಾಂಗರು ಎನ್ನುತ್ತ ದೊಡ್ಡಸ್ತಿಕೆ ತೋರಿಸುವ ಮಾತುಗಳು ಬೇಡ, ನಮ್ಮ ಹಕ್ಕುಗಳ ಗ್ಯಾರಂಟಿ ಬೇಕು**" ಎಂದು ಜುಲೈ 4 ರಂದು ಹಲವಾರು ವಿಕಲಚೇತನರ ಸಂಘಟನೆಗಳು ಜಂಟಿಯಾಗಿ ಸರಕಾರದ ಕ್ರಮವನ್ನು ಬಲವಾಗಿ ಪ್ರತಿಭಟಿಸಿದ್ದವು. ಈ ಐಕ್ಯ ವಿರೋಧದಿಂದಾಗಿ ಸರಕಾರ ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳುವುದೇ ಸೂಕ್ತ ಎಂದು ಯೋಚಿಸಿ ಈ ಕುರಿತ ಸಮಾಲೋಚನಾ ಪ್ರಕ್ರಿಯೆಯನ್ನು ಮುಚ್ಚಿದೆ ಎಂದು ನ್ಯಾಷನಲ್ ಪ್ಲಾಟ್‌ಫಾರ್ಮ್ ಫಾರ್ ರೈಟ್ಸ್ ಆಫ್ ಡಿಸೇಬಲ್ಡ್ (ಎನ್.ಪಿ.ಆರ್.ಡಿ.–ವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ) ತಿಳಿಸಿದೆ. ಈ ಮೂಲಕ ಈ ಕಾಯ್ದೆಯನ್ನು ತಿದ್ದುಪಡಿ ಮಾಡುವ ಪಿತೂರಿಗಳನ್ನು ಐಕ್ಯತೆಯಿಂದ ಸೋಲಿಸಿರು ವುದಕ್ಕಾಗಿ ಇಡೀ ಸಮುದಾಯವನ್ನು ಅದು ಜುಲೈ 8ರಂದು ನೀಡಿರುವ ಹೇಳಿಕೆಯಲ್ಲಿ ಅಭಿನಂದಿಸಿದೆ.

ನಮ್ಮ ಸಮಾಜದಲ್ಲಿ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಲ್ಲಿ ಒಂದಾಗಿರುವ ಈ ಸಮುದಾಯದ ವಿರೋಧಕ್ಕೆ ಸೌಹಾರ್ದ ವ್ಯಕ್ತಪಡಿಸಿದ ಎಲ್ಲ ಜನಾಂದೋಲನಗಳು, ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳಿಗೆ ಎನ್‌ಪಿಆರ್‌ಡಿ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ.

ಸರಕಾರ ಈ ತಿದ್ದುಪಡಿಗಳನ್ನು ತರಲು ಸಾಧ್ಯವಾಗಿದ್ದರೆ ಈ ಕಾಯ್ದೆ ಕೂಡ 1995ರ ಕಾಯ್ದೆಯಂತೆ ಹಲ್ಲಿಲ್ಲದ ಕಾನೂನು ಆಗಿ ಬಿಡುತ್ತಿತ್ತು. ಎಂದು ಎನ್‌ಪಿಆರ್‌ಡಿ ಹೇಳಿದೆ.

ಸಂಪಾದಕೀಯ

ಕೊರೊನಾ ರಾಜ್ಯದಲ್ಲಿ ಅಂಗವಿಕಲರ ಗೋಳು ಕೇಳುವವರ್‍ಯಾರು?

ಕಣ್ಣು ಕಾಣದ ಶ್ರವಣದೋಷ ಇರುವ ಸುಮಾರು ಮೂರು ವರ್ಷದ ಹೆಣ್ಣು ಮಗುವೊಂದನ್ನು ದಾವಣಗೆರೆ ಹೈಸ್ಕೂಲ್ ಮೈದಾನದ ಬಳಿಯ ಖಾಸಗಿ ಬಸ್ ನಿಲ್ದಾಣದಲ್ಲಿ ಯಾರೋ ಬಿಟ್ಟು ಬಿಟ್ಟು ಹೋಗಿದ್ದಾರೆಂಬ ದಾರುಣ ಪ್ರಕರಣ ವರದಿಯಾಗಿದೆ. ದಾವಣಗೆರೆಯಲ್ಲಿ ಕೊರೋನಾ ಸೋಂಕು ವ್ಯಾಪಿಸುತ್ತಿರುವ ಸಂದರ್ಭದಲ್ಲೇ ಇಂತಹ ಮನಕುಲುಕುವ ಘಟನೆ ನಡೆದದ್ದು ಬೆಳಕಿಗೆ ಬಂದಿದೆ.

ಮಗುವಿನ ಹೆತ್ತವರೇ ಮಗುವನ್ನು ಬಿಟ್ಟು ಹೋಗಿರಬೇಕು ಎಂಬ ಅನುಮಾನ ಸಹಜವಾಗಿ ಉದ್ಭವಿಸುತ್ತವೆ. ಬಟ್ಟೆ, ನೀರಿನ ಬಾಟಲಿ, ಬಿಸ್ಕೆಟ್, ಚಿಪ್ಸ್ ನೀಡಿ ಮಗುವನ್ನು ಕಲ್ಲಿನ ಬೆಂಚ್ ಮೇಲೆ ಕೂರಿಸಿ ಹೋಗಿದ್ದಾರೆ. ಈ ಬಗ್ಗೆ ಯಾರೋ ಮಕ್ಕಳ ರಕ್ಷಣಾ ಘಟಕಕ್ಕೆ ಕರೆ ಮಾಡಿದ್ದಾರೆ. ಸಿಬ್ಬಂದಿಯವರು ಬಂದು ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ್ದಾರೆ. ಸಮಿತಿಯು ಮಗುವನ್ನು ಮಕ್ಕಳ ರಕ್ಷಣಾ ಘಟಕಕ್ಕೆ ಕರೆ ಮಾಡಿದ್ದಾರೆ. ಸಿಬ್ಬಂದಿಯವರು ಬಂದು ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ್ದಾರೆ. ಸಮಿತಿಯು ಮಗುವನ್ನು ಮಕ್ಕಳ ರಕ್ಷಣಾ ಘಟಕದ ವಶಕ್ಕೆ ನೀಡಿದೆ.

ಮುಂಜಾಗ್ರತಾ ಕ್ರಮವಾಗಿ ಕೋವಿಡ್–19ರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ಮಗುವಿನ ಗಂಟಲು ದ್ರವ ಸಂಗ್ರಹಿಸಲಾಗಿದೆ. "ಇದು ವಿಶೇಷ ಆರೈಕೆ ಅಗತ್ಯವಿರುವ ಮಗು, ನಮ್ಮಲ್ಲಿ ವಿಶೇಷ ಆರೈಕೆ ಕೇಂದ್ರ ಇಲ್ಲ, ಬೆಂಗಳೂರಿನಲ್ಲಿ ಇದೆ, ಕೊರೋನಾ ಹೆಚ್ಚುತ್ತಿರುವುದರಿಂದ ಅಲ್ಲಿಗೆ ಕಳುಹಿಸುವ ಸ್ಥಿತಿ ಇಲ್ಲ. ಹೀಗಾಗಿ ದಾವಣಗೆರೆಯಲ್ಲಿರುವ ದತ್ತು ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಮಗುವನ್ನು ಇಡಲು ವ್ಯವಸ್ಥೆ ಮಾಡಿಕೊಂಡಿದ್ದೇವೆ. ಇತರ ಮಕ್ಕಳೊಂದಿಗೆ ಬೇರೆಯದಂತೆ ಕ್ರಮ ಕೈಗೊಂಡಿದ್ದೇವೆ. ಮಗುವನ್ನು ಮಗುವನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಿಸುತ್ತೇವೆ" ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹೇಳಿಕೆ ನೀಡಿದ್ದಾರೆ ಮತ್ತು ಆ ಮೂಲಕ ಅತ್ಯಂತ ಅಪರೂಪದ ಮಾನವೀಯತೆಯನ್ನು ಮೆರೆದಿದ್ದಾರೆ.

ವಿಕಲ ಚೇತನರಾದ ಅಂಗವಿಕಲರು ಯಾರಿಗೆ ಬೇಕು ಹೇಳಿ, ಹೆತ್ತವರಿಗೆ ಅವರು ಬೇಕಿಲ್ಲ, ಸಮಾಜಕ್ಕೆ ಅವರು ಬೇಕಿಲ್ಲ, ಸರ್ಕಾರಕ್ಕೂ ಅವರು ಬೇಕಾಗಿಲ್ಲ. ಇನ್ನು ಕಾರೋ ಕೊರೋನಾ ದಂತಹ ಸಾಂಕ್ರಮಿಕ ರೋಗಕ್ಕೆ ತುತ್ತಾದವರನ್ನು ಯಾರಾದರೂ ಇಷ್ಟಪಡಬಲ್ಲರ? ಸೋಂಕಿತರು ಮತ್ತು ಶಂಕಿತರ ನಡುವೆ ಸಮಾಜಿಕ ಅಂತರ ಹೆಚ್ಚಾಗಿದೆ. ಅನುಮಾನ ಸೃಷ್ಟಿಯಾಗಿದೆ. ಪರಸ್ಪರ ನೆರವು, ಸಹಾನುಭೂತಿ ಇಲ್ಲವಾಗಿದೆ. ಬಡವರನ್ನು ದಿನ ದುಡಿಮೆಯ ಕೆಲಸಗಾರರನ್ನು, ಕೂಲಿಕಾರರನ್ನು, ಅಂಗವಿಕಲರನ್ನು, ಕೆಮ್ಮುವವರನ್ನು, ಜ್ವರ ಪೀಡಿತರನ್ನು ಹೀಗೆ ಎಲ್ಲಾ ದುರ್ಬಲರನ್ನು ಸಂಶಯದ ಕಣ್ಣುಗಳಿಂದ ತಿವಿಯುತ್ತಿದ್ದಾರೆ.

ಸರಕಾರ ಇದ್ದು ಸತ್ತಂತಾಗಿದೆ ಕೇಂದ್ರ ಸರ್ಕಾರವೇ ಆಗಲಿ, ರಾಜ್ಯ ಸರ್ಕಾರವೇ ಆಗಲಿ ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ಸಂಪೂರ್ಣ ಸೋತು ಹೋಗಿವೆ ಆಸ್ಪತ್ರೆಗಳಲ್ಲಿ ಬಡವರಿಗೆ ಹಾಸಿಗೆಗಳಿಲ್ಲ. ಸೋಂಕಿತ ಅಂಗವಿಕಲರಿಗೆ ಕಾಳಜಿ ತೋರಿಸುವ ವೈದ್ಯರಿಲ್ಲ. ಸರ್ಕಾರದ ವೈಫಲ್ಯ ಮುಚ್ಚಿ ಹಾಕಲು ಗಡಿಯಲ್ಲಿ ವಿವಾದ ಎಬ್ಬಿಸಲಾಗಿದೆ. ಜನ ವೈದ್ಯಕೀಯ ಆರೈಕೆ ಇಲ್ಲದೆ, ಆಸ್ಪತ್ರೆಗೆ ತಲುಪಲಾಗದೆ ರಸ್ತೆಯಲ್ಲಿ ಬಿದ್ದು ಪ್ರಾಣ ಬಿಡುತ್ತಿರುವಾಗ ಪ್ರಯೋಜನಕ್ಕೆ ಬಾರದ ಗಡಿಗಳೇಕೆ ಬೇಕು? ಬಡ ರೋಗಿಗಳ ಆರೈಕೆ ಮಾಡುವ ಆರೋಗ್ಯ ಕಾರ್ಯಕರ್ತರಿಗೆ ಇಲ್ಲದ ಪಿ.ಪಿ.ಇ (ಪರ್ಸನಲ್ ಪ್ರೊಟೆಕ್ಷನ್ ಇಕ್ವಿಪ್ ಮೆಂಟ್) ಉತ್ಪಾದನೆ ಯಾಕೆ ಬೇಕು?

ಕೋವಿಡ್ 19 ದಾಳಿ ಆರಂಭವಾದ ದಿನದಿಂದಲೂ, ಅಂಗವಿಕಲರು ಸುಲಭವಾಗಿ ಈ ಸಾಂಕ್ರಾಮಿಕ ರೋಗಕ್ಕೆ ಬಲಿಯಾಗುತ್ತಾರೆ ಮತ್ತು ಸಾವನ್ನಪ್ಪುತ್ತಾರೆ ಎಂದು ಹೇಳುತ್ತಾ ಬರಲಾಗಿದೆ. ಲಾಕ್ಡೌನ್ ಅಂತಹ ಕ್ರಮಗಳಿಂದಲೂ ಅತಿ ಹೆಚ್ಚು ಸಂಕಷ್ಟಕ್ಕೆ ಗುರಿಯಾಗುವವರು ಸಹ ಅಂಗವಿಕಲರು ಹಾಗೂ ಇತರ ಕಾಯಿಲೆಗಳಿಂದ ನರಳುತ್ತಿರುವವರು. ಅಂಗವಿಕಲರ ಪರಿಸ್ಥಿತಿ ಇಷ್ಟು ಗಂಭೀರವಾಗಿರುವಾಗ ಅವರ ಆರೈಕೆ ಯಾವ ಪ್ರತ್ಯೇಕ ಯೋಜನೆ ಇಲ್ಲ. ಅವರಿಗಾಗಿ ಆಹಾರ ಔಷಧಿ ಪೂರೈಕೆಗೆ ಯಾವುದೇ ಪ್ಯಾಕೇಜ್ ಇಲ್ಲ.

ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುವಾ ಅಂಗವಿಕಲರ ನೆರವಿಗೆ ಮುಂದಾಗುವ ಬದಲಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಅಂಗವಿಕಲರ ಕಾಯ್ದೆಯ ಸೆಕ್ಷನ್ 89, 92 ಮತ್ತು 93 ತಿದ್ದುಪಡಿ ಮಾಡಲು ಮುಂದಾಗಿದೆ. ಅಂಗವಿಕಲರ ಹೊಂದಿರುವ ವ್ಯಕ್ತಿಗಳ ಕಾಯ್ದೆ (ಆರ್ ಪಿ ಡಿ ಡಬ್ಲ್ಯೂಡಿ) ಅಂಗವಿಕಲರ ಹಕ್ಕುಗಳನ್ನು ಮಾನ್ಯ ಮಾಡುವ ಕಾಯ್ದೆ. ಇದರ ಪ್ರಕಾರ ಅಂಗವಿಕಲರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶಗಳನ್ನು ಒದಗಿಸತಕ್ಕದ್ದು. ತಾರತಮ್ಯ ಮಾಡುವುದು ಶಿಕ್ಷಾರ್ಹ ಅಪರಾಧ. ಅಂಗವಿಕಲರನ್ನು ಅವಮಾನಿಸುವುದು, ಅವರ ಮೇಲೆ ಹಲ್ಲೆ ಮಾಡುವುದು 10,000 ರೂಪಾಯಿ ದಿಂದ 1 ಲಕ್ಷ ವರೆಗೆ ದಂಡ ವಿಧಿಸಬಹುದಾದ ಹಾಗೂ 6 ತಿಂಗಳಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು ಕ್ರಿಮಿನಲ್ ಅಪರಾಧವಾಗಿದೆ. ಆದರೆ ಸರ್ಕಾರ ಈ ಕಾಯ್ದೆಯನ್ನು ಸಡಿಲುಗಳಿಸಿ ಅಂಗವಿಕಲರ ಹಕ್ಕುಗಳ ಅಲ್ಪಸ್ವಲ್ಪ ರಕ್ಷಣೆಯನ್ನು ಕಿತ್ತುಕೊಳ್ಳಲು ಹೊರಟಿದೆ.

ಕರೋನಾ ಲಾಕ್ಡೌನ್ ಸಂದರ್ಭದಲ್ಲಿಯೂ ಅಂಗವಿಕಲರಿಗೆ ಯಾವುದೇ ವಿಶೇಷ ನೆರವು ಸಿಗಲಿಲ್ಲ. ಈ ಅವಧಿಯಲ್ಲಿ ಅವರು ತಮ್ಮ ಉದ್ಯೋಗ ಮತ್ತು ಜೀವನೋಪಾಯವನ್ನು ಕಳೆದುಕೊಂಡಿದ್ದಾರೆ. ಅವರಿಗೆ ದೊರೆಯಬೇಕಾಗಿದ್ದ ಮಾಸಾಶನವೂ ಸರಿಯಾಗಿ ಸಂದಾಯವಾಗಿಲ್ಲ. ರಾಜ್ಯದ ಅಂಗವಿಕಲ ಬಂಧುಗಳು ಅನೇಕ ಪ್ರತಿಭಟನೆಗಳನ್ನು ಮಾಡಿ ಸರ್ಕಾರದ ಗಮನ ಸೆಳೆಯಲು ಪ್ರಯತ್ನ ಪಟ್ಟಿದ್ದಾರೆ. ಆದರೆ ಕಳೆದ ಮೂರು ನಲ್ಕು ತಿಂಗಳುಗಳಿಂದ ಅವರಿಗೆ ಮಾಸಾಶನ ಪಾವತಿಯಾಗಿಲ್ಲ. ಅಂಗವಿಕಲರಿರುವ ಕುಟುಂಬಗಳಿಗೆ ಉಚಿತ ಆಹಾರ ಧಾನ್ಯ ಪೂರೈಕೆ ಮಾಡಬೇಕು. ತಿಂಗಳಿಗೆ ಕನಿಷ್ಟ 7500 ರೂಪಾಯಿ ಹೆಚ್ಚುವರಿ ನೆರವು ನೀಡಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಉದ್ಯೋಗ ನೀಡಬೇಕು. ಅಂಗವಿಕಾಲರಿಗೆ ಉದ್ಯೋಗ ನಿರಾಕರಿಸುವ ಅಧಿಕಾರಿಗಳ ವಿರುದ್ಧ ಕ್ರಮ ಜರಗಿಸಬೇಕು. ಉದ್ಯೋಗ ಕೊಡಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕು. ಉದ್ಯೋಗ ಖಾತ್ರಿ ಕೆಲಸದ ದಿನಗಳನ್ನು 200 ಕ್ಕೆ ಏರಿಸಬೇಕು. ವೇತನವನ್ನು ಹೆಚ್ಚಿಸಬೇಕು. ನಗರ ಪ್ರವೇಶಕ್ಕೂ ವಿಸ್ತರಿಸಬೇಕು.

ಕೋವಿಡ್ – 19 ನಿಯಂತ್ರಣದ ಉಪಕರಣಗಳ ಖರೀದಿಯಲ್ಲಿನ ಭ್ರಷ್ಟಾಚಾರವನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೆ ವಹಿಸಿರಿ ಮತ್ತು ಕೋವಿಡ್ – 19 ರ ಪರಿಣಾಮಕಾರಿ ಕ್ರಮಕ್ಕೆ ಯೋಜನೆ ಹಾಗೂ ಪ್ಯಾಕೇಜ್ ಘೋಷಿಸಿ

ಮಾನ್ಯ ಮುಖ್ಯ ಮಂತ್ರಿಗಳು,

ಕರ್ನಾಟಕ ಸರ್ಕಾರ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೋವಿಡ್ – 19 ರ ಹರಡುವಿಕೆಯನ್ನು ತಡೆಯಲು, ಸಮರ್ಪಕ ಹಾಗೂ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳದೇ ಹೋದುದರಿಂದ, ದೇಶದಲ್ಲಿ ಮತ್ತು ರಾಜ್ಯದಲ್ಲಿ ನಾಗರೀಕರು ಅನಾಥರಾಗಿ ಸಾಯುವಂತಹ ಮತ್ತು ಗಂಭೀರ ಆತಂಕದಲ್ಲಿ ಬದುಕುವಂತಹ ಪರಿಸ್ಥಿತಿ ಉಂಟಾಗಿದೆ. ಮಿತಿಯ ತಪಾಸಣೆಯ ನಡುವೆಯೂ, ಇದುವರೆಗೆ ರಾಜ್ಯದಲ್ಲಿ ಸುಮಾರು 20 ಸಾವಿರ ಸೋಂಕಿತರನ್ನು ಗುರುತಿಸಲಾಗಿದೆ. ಇದರಲ್ಲಿ ಈಗಲೂ 10,000 ಕ್ಕೂ ಅಧಿಕ ಸಂಖ್ಯೆಯ ಸಕ್ರಿಯ ಕೇಸ್ ಗಳಿವೆ. ಸುಮಾರು 300 ಜನರು ಮರಣ ಹೊಂದಿದ್ದಾರೆ. ಸೋಂಕಿತರು ಚಿಕಿತ್ಸೆಗಾಗಿ, ವೆಂಟಿಲೇಟರಗಳಿಗಾಗಿ, ಬೆಡ್ ಗಳಿಗಾಗಿ, ಸೂಕ್ತ ಆಹಾರಕ್ಕಾಗಿ ಪರದಾಡುತ್ತಿದ್ದಾರೆ. ಮರಣ ಹೊಂದಿದವರ ಅಂತ್ಯ ಕ್ರಿಯೆ ಹಾಗೂ ವಾರಿಯರ್ಸ ಗಳ ತೊಂದರೆಗಳು, ಖಾಸಗೀ ಆಸ್ಪತ್ರೆಯ ದುಬಾರಿ ಶುಲ್ಕಗಳು, ಎಲ್ಲವೂ ಜನತೆಯನ್ನು ಚಿಕಿತ್ಸೆಗಾಗಿ, ಆಸ್ಪತ್ರೆಗಳ ಕಡೆ ನೋಡದಂತೆ ಭಯ ಭೀತಿಗೊಳಪಡಿಸಿವೆ. ಇಂತಹದೊಂದು ಕೆಟ್ಟ ಪರಿಸ್ಥಿತಿಯ ಹೊಣೆಗಾರರು ಕೇಂದ್ರ ಹಾಗೂ ರಾಜ್ಯ ಸರಕಾರಗಳೇ ಆಗಿವೆ.

ಈಗಲಾದರೂ, ನಾಗರೀಕರ ಸಂರಕ್ಷಣೆಗೆ ಅಗತ್ಯ ತುರ್ತು ಕ್ರಮವಹಿಸುವಂತೆ, ಭಾರತ ಕಮ್ಯುನಿಷ್ಠ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಪುನಃ ಒತ್ತಾಯಿಸುತ್ತದೆ.

1) ಜನತೆಯನ್ನು ಕೋವಿಡ್ ನಿಂದ ಕಾಪಾಡಲು ಎಲ್ಲಾ ರೀತಿಯ ಸಂರಕ್ಷಣಾ ಕ್ರಮ ವಹಿಸಿ, ಹಾಟ್‌ಸ್ಪಾಟ್ ಗುರುತಿಸಿ ಹಾಗೂ ಕಂಟೇನ್ಮೆಂಟ್ ವಲಯಗಳನ್ನು ಹೆಚ್ಚಿಸಿರಿ :

ರಾಜ್ಯದಾದ್ಯಂತ ಕೋವಿಡ್– 19 ಸೋಂಕಿನ ಪ್ರಕರಣಗಳು ಪ್ರತಿದಿನವೂ 1,500 ಕ್ಕೂ ಹೆಚ್ಚು ವರದಿಯಾಗುತ್ತಲೇ ಇವೆ. ಅವು ಮತ್ತಷ್ಟು ವ್ಯಾಪಕವಾಗಿ ಹೆಚ್ಚುವ ಸಂಭವಗಳಿರುವುದನ್ನು ಮತ್ತು ಅದಾಗಲೇ, ಸಮುದಾಯಕ್ಕೆ ಹರಡಿರುವುದನ್ನು ತಜ್ಞರು ಸ್ಪಷ್ಠ ಪಡಿಸುತ್ತಿರುವಾಗ, ಇದಕ್ಕಾಗಿ ಹಲವಾರು ಜಿಲ್ಲೆಗಳಲ್ಲಿ ನಾಗರೀಕರೇ ಸ್ವಯಂ ಪ್ರೇರಿತ ಲಾಕ್ ಡೌನ್ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ರಾಜ್ಯ ಸರಕಾರ ಹಿರಿಯ ನಾಗರೀಕರನ್ನು ಮತ್ತು ಚಿಕ್ಕ ಮಕ್ಕಳನ್ನು ರಕ್ಷಿಸಲು ಸೂಕ್ತ ಕ್ರಮವಹಿಸಬೇಕು ಹಾಗೂ ಇವರಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳಿಂದ ಹಾಗೂ ತೀವ್ರ ಖಾಯಿಲೆಗಳಿಂದ ಬಳಲುತ್ತಿರುವವರನ್ನು ವಿಶೇಷ ಗಮನ ಹರಿಸಿ ಉನ್ನತ ಆರೋಗ್ಯ ಕೇಂದ್ರಗಳಲ್ಲಿರಿಸಿ ಸೂಕ್ತ ಚಿಕಿತ್ಸೆಗೆ ಕ್ರಮವಹಿಸಬೇಕು. ಅದೇ ರೀತಿ, ರಾಜ್ಯದಾದ್ಯಂತ ಕೋವಿಡ್ –19 ಹೆಚ್ಚುತ್ತಿರುವ ಪ್ರದೇಶಗಳನ್ನು, ಪ್ರದೇಶವಾರು ಹಾಟ್ ಸ್ಪಾಟ್ ಗಳೆಂದು ಗುರುತಿಸಿ ಕಂಟೇನ್ ಮೆಂಟ್ ವಲಯಗಳನ್ನು ಹೆಚ್ಚಿಸಬೇಕು. ಆ ವಲಯದಲ್ಲಿನ ಜನತೆಗೆ ಎಲ್ಲ ರೀತಿಯ ಆರೋಗ್ಯ ಸುರಕ್ಷತಾ ಕ್ರಮಗಳನ್ನು ಒದಗಿಸಲು ವಿಶೇಷ ಗಮನ ಹರಿಸಬೇಕು.

2) ಕೋವಿಡ್–19 ರಿಂದ ಬಾಧಿತರಾದ ರಾಜ್ಯದ ಜನತೆಗೆ ಅಗತ್ಯ ಪರಿಹಾರ ನೀಡಿರಿ:

ಅ) ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೆ ಮಾಸಿಕ 7,500 ರೂಗಳ ನೆರವನ್ನು ಮತ್ತು ತಲಾ ವ್ಯಕ್ತಿಗೆ ಮಾಸಿಕ 10 ಕೇಜಿ ಆಹಾರ ಹಾಗೂ ಅಗತ್ಯ ಆರೋಗ್ಯ ಸುರಕ್ಷಾ (ಸುರಕ್ಷಿತ ಮಾಸ್ಕ ಹಾಗೂ ಸ್ಯಾನಿಟೈಸರ್, ಸ್ಯಾನಿಟರಿ ಪ್ಯಾಡ್ ಮುಂತಾಗಿ) ಸಾಮಗ್ರಿಗಳನ್ನು ಉಚಿತವಾಗಿ ಒದಗಿಸಲು ತಕ್ಷಣ ಕ್ರಮವಹಿಸಬೇಕು. ಎಲ್ಲಾ ಇಂದಿರಾ ಕ್ಯಾಂಟೀನ್ ಗಳಲ್ಲಿ ದುರ್ಬಲರಿಗೆ ಉಚಿತ ಊಟ ಹಾಗೂ ತಿಂಡಿಯ ವ್ಯವಸ್ಥೆ ಮಾಡಬೇಕು.

ಆ) ಹಾಟ್‌ಸ್ಪಾಟ್ ಹಾಗೂ ಕಂಟೈನ್ ಮೆಂಟ್ ವಲಯದಲ್ಲಿನ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ಈ ವೇತನ ಸಹಿತ ರಜೆ ನೀಡುವಂತೆ ಕ್ರಮವಹಿಸಬೇಕು. ಲಾಕ್ ಡೌನ್ ಅವಧಿಯ ವೇತನವು ದೊರೆಯದ ಎಲ್ಲಾ ಕಾರ್ಮಿಕರಿಗೆ ದೊರೆಯುವಂತೆ ಅಗತ್ಯ ಕ್ರಮವಹಿಸಬೇಕು. ಕೈಗಾರಿಕೆಗಳು ಕಾರ್ಯ ನಿರ್ವಹಿಸುವ ಕಾರ್ಮಿಕರ ಆರೋಗ್ಯದ ಸುರಕ್ಷತೆಗೆ ಅಗತ್ಯ ಗಮನ ಹರಿಸುವಂತೆ ಬಿಗಿಯಾದ ಕ್ರಮವಹಿಸಬೇಕು. ಕಾರ್ಮಿಕರಿಗೆ ಅಗತ್ಯ ಮಾಸ್ಕ್, ಸ್ಯಾನಿಟೈಸರ್ ಹಾಗೂ ಸುರಕ್ಷಿತ ಟಾಯ್ಲೆಟ್ ಗಳು ಮತ್ತು ಸುರಕ್ಷಿತ ಸಾರಿಗೆ ಒದಗಿಸಬೇಕು. ಅದೇ ರೀತಿ, ದೈಹಿಕ ಅಂತರವಿದ್ದು ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಕಾರ್ಮಿಕರ ದಟ್ಟಣೆಯನ್ನು ಕಡಿತಗೊಳಿಸಬೇಕು.

ರೈತರು ಹಾಗೂ ಗುಡಿ ಮತ್ತು ಸಣ್ಣ ಕೈಗಾರಿಕೆಗಳ ಎಲ್ಲ ಉತ್ಪನ್ನಗಳನ್ನು ಸರಕಾರವೇ ಖರೀದಿಸಿ ಮಾರಾಟ ಮಾಡಲು ಕ್ರಮ ವಹಿಸಬೇಕು.

ಇ) ಅದೇ ರೀತಿ, ಈ ಅವಧಿಯಲ್ಲಿ ರಾಜ್ಯದಾದ್ಯಂತ ಎಲ್ಲ ಕುಟುಂಬಗಳ ಕಡ್ಡಾಯ ಆರೋಗ್ಯ ತಪಾಸಣೆಗೆ ಕ್ರಮ ವಹಿಸಬೇಕು. ಇದಕ್ಕಾಗಿ ಕನಿಷ್ಠ ಮುವ್ವರು ಇರುವ ಮೂರು ಲಕ್ಷ ಆರೋಗ್ಯ ತಪಾಸಕರ ತಂಡಗಳನ್ನು ರಚಿಸಬೇಕು. ಅವರಿಗೆ, ಸುರಕ್ಷಾ ಕ್ರಮಗಳು ಹಾಗೂ ಅಗತ್ಯ ತರಬೇತಿ ನೀಡಬೇಕು. ಕನಿಷ್ಟ ದೈಹಿಕ ಉಷ್ಣಾಂಶ ಮತ್ತು ಆಮ್ಲಜನಕ ಪಡೆಯುವ ಪ್ರಮಾಣಗಳನ್ನ ಗುರುತಿಸಲು ಸರಕಾರಗಳು ಅಗತ್ಯ ಸಾಧನಗಳನ್ನು ಪ್ರತಿಯೊಂದು ತಂಡಕ್ಕೂ ಒದಗಿಸಬೇಕು. ಇವುಗಳ ಜೊತೆ ಪ್ರತಿ ಕುಟುಂಬದ ಪ್ರಮುಖ ಆರೋಗ್ಯ ಮಾಹಿತಿ ದಾಖಲಿಸಿಕೊಳ್ಳಲು ತಿಳಿಸಬೇಕು. ಇದನ್ನು ಹದಿನೈದು ದಿನಗಳ ಕಾಲ ಮಿತಿಯೊಳಗೆ ಕೈಗೊಳ್ಳ ಬೇಕು. ಕೋವಿಡ್ ದತ್ತಾಂಶಗಳನ್ನೊಳಗೊಂಡ ಮಾಹಿತಿಯಿರುವ ವರದಿಯನ್ನು ಜನತೆಗೆ ಒದಗಿಸಬೇಕು.

ಈ) ಎಲ್ಲಾ ಖಾಸಗೀ ಆಸ್ಪತ್ರೆಗಳನ್ನು ಕೋವಿಡ್ ಸಾಂಕ್ರಾಮಿಕ ಪರಿಹಾರವಾಗುವವರೆಗೆ ಸರಕಾರವೇ ನಡೆಸಬೇಕು ಮತ್ತು ರಾಜ್ಯದ

ಪುಟ 4 ಕ್ಕೆ

ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಜಿ.ವಿ. ಶ್ರೀರಾಮರೆಡ್ಡಿ ಉಚ್ಚಾಟನೆ:

ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸ್‌ವಾದಿ) ದ ಚಿಕ್ಕ ಬಳ್ಳಾಪುರ ಜಿಲ್ಲಾ ಸಮಿತಿಯು ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿದೆ.

ಇದಕ್ಕೆ ಪೂರ್ವ, ಅವರ ಪ್ರಾಥಮಿಕ ಸದಸ್ಯತ್ವವನ್ನು ಅಮಾನತಿನಲ್ಲಿಟ್ಟು ಅವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು. ಒಂದು ವಾರದೊಳಗೆ ಅವರ ಮೇಲಿರುವ ಆರೋಪಗಳಿಗೆ ಉತ್ತರಿಸಬೇಕಿತ್ತು. ಆದರೆ ಅವರು ಉತ್ತರಿಸಲಿಲ್ಲ. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿಲ್ಲಾ ಸಮಿತಿ ಸಭೆಗೆ ಖುದ್ದು ಹಾಜರಿದ್ದು ವಿವರಿಸುವಂತೆ ಆಹ್ವಾನಿಸಿದ್ದರೂ, ಅಂತಹ ಅವಕಾಶವನ್ನು ಬಳಸಿಕೊಂಡು ತಮ್ಮ ನಿಲುಮ ಮತ್ತು ಕ್ರಮಗಳನ್ನು ಪ್ರತಿಪಾದಿಸಲು ಮುಂದಾಗಲಿಲ್ಲ.

ಅವರು, ಈಚೆಗೆ ಬಾಗೇಪಲ್ಲಿ ಎಪಿಎಂಸಿ ಅಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ಅಧಿಕೃತ ರಾಜಕೀಯ ನಿಲುಮೆಗೆ ವಿರುದ್ಧವಾಗಿ, ಕೋಮುವಾದಿ ಬಿಜೆಪಿ ಜೊತೆ ಕೈ ಜೋಡಿಸಿದ್ದರಲ್ಲದೇ, ಸಿಪಿಎಂ ಪಕ್ಷದ ಬೆಂಬಲದಿಂದ ಆಯ್ಕೆಯಾಗಿದ್ದ ಸೋಮಶೇಖರ ರೆಡ್ಡಿಯವರನ್ನು ಕೋಮುವಾದಿ ಬಿಜೆಪಿ ಪಕ್ಷಕ್ಕೆ ಸೇರಿಸಿ, ಅದರ ಪರವಾಗಿ ಎಪಿಎಂಸಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯನ್ನಾಗಿಸಿದ್ದರು. ಮಾತ್ರವಲ್ಲಾ, ಅವರಿಗೆ ಉಳಿದಿಬ್ಬರು ಸಿಪಿಐಎಂ ಬೆಂಬಲಿತ ಎಪಿಎಂಸಿ ಸದಸ್ಯರಿಂದ ಬೆಂಬಲಕೊಡಿಸಿ ಪಕ್ಷ ವಿರೋಧಿ ಚಟುವಟಿಕೆಗೆ ನೇತೃತ್ವ ನೀಡಿದ್ದರು.

ಕಳೆದ ಡಿಸೆಂಬರ್ 2018 ರಲ್ಲಿ ಪಕ್ಷದ ಕೇಂದ್ರ ಸಮಿತಿಯು ಪಕ್ಷದ ಸಂಘಟನಾ ಶಿಸ್ತು ಉಲ್ಲಂಘನೆ ಮತ್ತು ನೈತಿಕ ದಿವಾಳಿತನದ ಆಧಾರದಲ್ಲಿ, ಪಕ್ಷದ, ಕೇಂದ್ರ ಸಮಿತಿ ಸದಸ್ಯತ್ವದಿಂದ ಹಾಗೂ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಎಲ್ಲಾ ಹಂತಗಳ ಚುನಾಯಿತ ಸ್ಥಾನಗಳಿಂದ ತೆಗೆದು ಹಾಕಿತ್ತು.

ಕೇಂದ್ರ ಸಮಿತಿಯ ಮುಂದೆ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಪಕ್ಷದ ನಿರ್ದೇಶನ ಹಾಗೂ ಶಿಸ್ತಿಗನುಸಾರ ನಡೆದುಕೊಳ್ಳುವುದಾಗಿ ಹೇಳಿ, ಕೇಂದ್ರ ಸಮಿತಿ ಅನುಮತಿಯಿಂದ ಅವರು ತಮ್ಮ ಸಾಮಾನ್ಯ ಸದಸ್ಯತ್ವ ಉಳಿಸಿಕೊಂಡಿದ್ದರು.

ಅದೇ ರೀತಿ, ಅವರ ಹಿಂದಿನ ಕೆಲಸ ಕಾರ್ಯಗಳನ್ನು ಗಮನಿಸಿ ಈಚೆಗೆ ಪಕ್ಷದ ಜಿಲ್ಲಾ ಸಮಿತಿಯು, ಅವರನ್ನು ಜಿಲ್ಲಾ ಸಮಿತಿ ಸದಸ್ಯರನ್ನಾಗಿ ಸೇರ್ಪಡೆ ಮಾಡಿತ್ತು.

ಆದರೇ, ಅಲ್ಲಿಂದ ಇಲ್ಲಿಯವರೆಗೆ ಪಕ್ಷದ ಕೇಂದ್ರ ಸಮಿತಿ ಹಾಗೂ ರಾಜ್ಯ ಮತ್ತು ಜಿಲ್ಲಾ ಸಮಿತಿಗಳ ನಿರ್ಣಯಗಳನ್ನು ಜಾರಿಗೊಳಿಸದೇ, ತೀವ್ರವಾಗಿ ಉಲ್ಲಂಘಿಸುತ್ತಿದ್ದರು.

ಲಾಕ್ ಡೌನ್ ಸಂಧರ್ಭದಲ್ಲಿ ವಲಸೆ ಕಾರ್ಮಿಕರನ್ನು ನಡೆಸಿಕೊಂಡ ರೀತಿ ತೀರಾ ಅಮಾನವೀಯ



ಕೊರೊನಾ ವೈರಸ್ ನಿಂದ ತತ್ತರಿಸಿದ ನಮ್ಮ ದೇಶದಲ್ಲಿ ಕಳೆದ 3 ತಿಂಗಳಿನಿಂದ ಉಂಟಾದ ಲಾಕ್ ಡೌನ್ ನಿಂದಾಗಿ ದೇಶದ ಜನತೆ ತೀರಾ ಸಂಕಷ್ಟಕ್ಕೀಡಾಗಿದ್ದಾರೆ. ಹೊಟ್ಟೆಪಾಡಿಗಾಗಿ ಸಂಸಾರ ಸಮೇತ ದೂರದ ಊರಿಗೆ ಆಗಮಿಸಿ ದುಡಿಮೆ ಮಾಡಿದ ವಲಸೆ ಕಾರ್ಮಿಕರು ಅನುಭವಿಸಿದ ಯಾತನಾಮಯ ಬದುಕು ನಿಜಕ್ಕೂ ದುಃಖದಾಯಕವಾಗಿದೆ. ಅತ್ತ ದುಡಿಸಿಕೊಂಡ ಮಾಲೀಕನೂ ಇಲ್ಲ, ಇತ್ತ ಕೇಳಬೇಕಾದ ಸರಕಾರನೂ ಇಲ್ಲ. ಕೊನೆಗೆ ವಿಧಿಯಿಲ್ಲದೆ ತನ್ನೂರಿಗೆ ಹೋಗಬೇಕೆಂಬ ನಿಶ್ಚಯಿಸಿದ ವಲಸೆ ಕಾರ್ಮಿಕರು ಸುಮಾರು 1500 ಕಿ.ಮೀ ನಷ್ಟು ನಡೆದಿರುವುದು, ಅದರಲ್ಲೂ 1000 ದಷ್ಟು ಕಾರ್ಮಿಕರು ಅಸುನೀಗಿದ್ದು, 35 ರಷ್ಟು ಮಹಿಳಾ ಕಾರ್ಮಿಕರು ದಾರಿ ಮಧ್ಯೆದಲ್ಲೇ ಮಗುವಿಗೆ ಜನ್ಮ ನೀಡಿರುವುದು ನಿಜಕ್ಕೂ ಶೋಚನೀಯವಾಗಿದೆ. ಬಣ್ಣ ಬಣ್ಣದ ಘೋಷಣೆಗಳ ಮೂಲಕ ಜನರಿಗೆ ಮಂಕುಬೂದಿ ಎರಚಿದ ಕೇಂದ್ರದ ನರೇಂದ್ರ ಮೋದಿ ಸರಕಾರ ವಲಸೆ ಕಾರ್ಮಿಕರನ್ನು ನಡೆಸಿಕೊಂಡ ರೀತಿ ತೀರಾ ಅಮಾನವೀಯವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿ ಯವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಅವರು ಸಿಪಿಐ(ಎಂ) ನೇತೃತ್ವದಲ್ಲಿ ದ.ಕ. ಜಿಲ್ಲೆಯಾದ್ಯಂತ ನಡೆಯುತ್ತಿರುವ ವಾರಾಚರಣೆ ಕಾರ್ಯಕ್ರಮದ ಭಾಗವಾಗಿ ಬೋಳಾರದಲ್ಲಿ ಜರುಗಿದ ಬಿತ್ತಿಚಿತ್ರ ಪ್ರದರ್ಶನ ಹಾಗೂ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾ ಈ ಮಾತುಗಳನ್ನು ಹೇಳಿದರು.

ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ರವರು ಮಾತನಾಡುತ್ತಾ, ಕೊರೋನಾ ವೈರಸ್‌ನ್ನು ನಿಗ್ರಹಿಸುವಲ್ಲಿ ದ.ಕ. ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದ್ದು,ಇಂತಹ ಸಂಕಷ್ಟದ ಕಾಲದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸುವ ಬದಲು ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ.ಈ ಸಂದರ್ಭದಲ್ಲಿ ಜನರಿಗೆ ಧೈರ್ಯ ತುಂಬುವ ಬದಲು ಜನರಲ್ಲಿ ಭಯಭೀತಿಯನ್ನು ಸೃಷ್ಟಿಸಿ, ಕೋಮು ಉನ್ಮಾದವನ್ನು ಬೆಳೆಸಿ,ಕೊರೋನಾ ವೈರಸ್ ಹರಡಲು ನಿರ್ದಿಷ್ಟ ಸಮುದಾಯ ಹಾಗೂ ನೆರೆಯ ರಾಜ್ಯ ಕಾರಣವೆಂಬ ಅಪಪ್ರಚಾರ ನಡೆಸಿ,ಧರ್ಮದ ಅಮಲನ್ನು ಹಾಗೂ ಪ್ರಾದೇಶಿಕತೆಯನ್ನು ಬಿತ್ತರಿಸುವಲ್ಲಿ ಇಲ್ಲಿನ ಸಂಸದರು, ಶಾಸಕರು ತೆರೆಯ ಮರೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು ಮಾಡಿದ ತಪ್ಪನ್ನು ಜಿಲ್ಲೆಯ ಜನತೆ ಈಗಲೂ ಅನುಭವಿಸುತ್ತಿದ್ದಾರೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ, ಎಸ್ಎಫ್ಐ ದ.ಕ. ಜಿಲ್ಲಾಧ್ಯಕ್ಷರಾದ ಮಾಧುರಿ ಬೋಳಾರ, ಸಿಪಿಐ(ಎಂ) ಬೋಳಾರ ಶಾಖಾ ಕಾರ್ಯದರ್ಶಿ ನಾಗೇಶ್ ಕೋಟ್ಯಾನ್, ಪಕ್ಷದ ಹಿರಿಯ ಸದಸ್ಯರಾದ ಜಯರಾಮ ಮಣಿಯಾಣಿ, ಜೆಸಿಂತ ಡಿಸೋಜ, ಸುಕನ್ಯಾ, ಚಂದ್ರಾವತಿ ಮುಂತಾದವರಿದ್ದರು.

ಕೋವಿಡ್– 19 ನಿರೋಧಕ ರೆಮ್ಡಿಸಿವರ್ ಔಷಧಿಯನ್ನು ಭಾರತದಲ್ಲಿ ಜನರಿಕ್ ಔಷಧಿಯಾಗಿ ಉತ್ಪಾದಿಸಲು ಸಿಪಿಐಎಂ ಒತ್ತಾಯ

ಕೋವಿಡ–19 ವೈರಾಣು ನಿರೋಧಕ ರೆಮ್ಡಿಸಿವರ್ ಔಷಧಿಯನ್ನು ಅತ್ಯಂತ ಕಡಿಮೆ ಬೆಲೆಗೆ ಸಿಗುವ ಜನರಿಕ್ ಔಷಧಿಯಾಗಿ ಉತ್ಪಾದಿಸಲು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಸಮಿತಿಯು, ಕೇಂದ್ರ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ ಮತ್ತು ಆ ಮೂಲಕ ದೇಶದ ಜನತೆಯನ್ನು ಔಷಧಿ ಕಂಪನಿಗಳ ಹಾಗೂ ಕೃತಕವಾಗಿ ಅಭಾವ ಸೃಷ್ಟಿಸಿ ಲೂಟಿ ಮಾಡುವ ಕಾಳಸಂತೆ ಕೋರತನದಿಂದ ರಕ್ಷಿಸಲು ಕ್ರಮವಹಿಸುವಂತೆ ಅಗ್ರಹಿಸುತ್ತದೆ.

ಗಿಲಿಯಡ್ ಕಂಪನಿ ರೆಮ್ಡಿಸಿವರ್ ಔಷದಿಗೆ ಪೇಟೆಂಟ್ ಪಡೆದಿದ್ದು ಅದಕ್ಕೆ ತೀವ್ರ ಸುಲಿಗೆಕೋರ ಬೆಲೆ ನಿಗದಿಸಿದೆ. ಐದು ದಿನಗಳ ಕಾಲ ನೀಡಬೇಕಾದ ಈ ಔಷಧಿಗೆ ಅಮೇರಿಕಾದಲ್ಲಿನ ಬೆಲೆ 2.25 ಲಕ್ಷ ರೂ. ಗಳೆನ್ನಲಾಗಿದೆ. ಭಾರತದಲ್ಲಿ ಇದರ ಉತ್ಪಾದನೆಗೆ ಅನುಮತಿ ಪಡೆಯುವ ಮಾತುಕತೆಗಳನ್ನು ಐದು ಕಂಪನಿಗಳು ನಡೆಸಿವೆ ಎನ್ನಲಾಗಿದ್ದು, ಅವು ಭಾರತದಲ್ಲಿ ಉತ್ಪಾದಿಸುವಾಗ, ಐದು ದಿನಗಳ ಈ ಔಷಧಿಗೆ ಅದರ ರಿಯಾಯಿತಿ ದರ ಸುಮಾರು 30 ರಿಂದ 35 ಸಾವಿರವಾಗಬಹುದು ಎನ್ನಲಾಗಿದೆ.

ಪರಿಣಿತರ ಲೆಕ್ಕಾಚಾರದ ಪ್ರಕಾರ ಭಾರತದಲ್ಲಿ 100 ರೂಪಾಯಿಗಳಿಗೆ ಉತ್ಪಾದಿಸುವುದು ಸಾಧ್ಯವಿದೆ ಎನ್ನುವಾಗ, ಔಷಧಿ ಕಂಪನಿಗಳ ಲೂಟಿಯನ್ನು ತಡೆಯುವುದು ಸಾಧ್ಯವಿದೆ. ಅದಾಗಲೇ, ಭಾರತದ ಔಷಧಿ ಮಹಾ ನಿಯಂತ್ರಕರು(ಡಿಸಿಜಿಐ) ಭಾರತದಲ್ಲಿ ಗಿಲಿಯಡ್ ಕಂಪನಿಯ ರೆಮ್ಡಿಸಿವರ್ ಔಷಧಿ ಬಳಸಲು ಅನುಮತಿ ನೀಡಿದೆ.

ಆದ್ದರಿಂದ, ಕೇಂದ್ರ ಸರಕಾರ ಅತ್ಯಂತ ತುರ್ತು ಕ್ರಮವಹಿಸಿ, ಕಡಿಮೆ ಬೆಲೆಗೆ ದೊರೆಯುವ ಇದರ ಜೆನರಿಕ್ ಔಷಧಿ ತಯಾರಿಸಬೇಕು ಹಾಗೂ ಜನತೆಯ ಲೂಟಿ ತಡೆದು ನೆರವಾಗಬೇಕು ಎಂದು ಸಿಪಿಐಎಂ ಒತ್ತಾಯಿಸುತ್ತದೆ.

ಯು. ಬಸವರಾಜ ಕಾರ್ಯದರ್ಶಿ
(07-07-2020)

ಕೋವಿಡ್ – 19 ನಿಯಂತ್ರಣದ ಉಪಕರಣಗಳ ಖರೀದಿಯಲ್ಲಿನ ಭ್ರಷ್ಟಾಚಾರವನ್ನು ಸ್ವತಂತ್ರ...... ಪುಟ 3 ರಿಂದ

ಎಲ್ಲಾ ಲಾಡ್ಜಗಳನ್ನು, ಕಲ್ಯಾಣಮಂಟಪ ಹಾಗೂ ಕ್ರೀಡಾಂಗಣಗಳನ್ನು ಚಿಕಿತ್ಸಾಲಯಗಳಾಗಿ ಬಳಸಲು ಕ್ರಮವಹಿಸಬೇಕು. ಎಲ್ಲರಿಗೂ ಉಚಿತ ಚಿಕಿತ್ಸೆ ಒದಗಿಸಬೇಕು.

ಉ) ಗುತ್ತಿಗೆ ಆಧಾರದ ಎಲ್ಲಾ ಆರೋಗ್ಯ ಸಿಬ್ಬಂದಿಗೆ ಮತ್ತು ವೈದ್ಯರಿಗೆ, ಸರಕಾರಿ ಸಿಬ್ಬಂದಿಗೆ ನೀಡುವ ವೇತನವನ್ನು ನೀಡಬೇಕು.ಇವರು ಮತ್ತು ಯಾರೆಲ್ಲಾ ಕೋವಿಡ್– 19 ರ ವಿರುದ್ದ ಹೋರಾಡುವ ವಾರಿಯರ್ಸ್ ಗಳಾಗಿದ್ದಾರೆ ಅವರ ಎಲ್ಲಾ ಕುಟುಂಬಗಳ ಸದಸ್ಯರನ್ನು ಕೋವಿಡ್ – 19 ರ ವಿಮಾ ವ್ಯಾಪ್ತಿಗೆ ತರಬೇಕು.

ಊ) ಕನಿಷ್ಠ 5,000 ವೆಂಟಿಲೇಟರ್ ಗಳನ್ನು ತಕ್ಷಣವೇ ಖರೀಧಿಸಬೇಕು. ಅಗತ್ಯ ಪಿಪಿಇ ಹಾಗೂ ಟೆಸ್ಟಿಂಗ್ ಕಿಟ್ ಗಳನ್ನು ಕೊರತೆಯಾಗದಂತೆ ಖರೀದಿಸ ಬೇಕು.

ಋ) ಇದಕ್ಕೆ ಬೇಕಾದ ಯೋಜನೆ ಹಾಗೂ ಪ್ಯಾಕೇಜ್ ಘೋಷಿಸಬೇಕು.

ಎ) ವಿರೋಧ ಪಕ್ಷಗಳು, ಸ್ಥಳೀಯ ಆಡಳಿತ, ಸಂಘ ಸಂಸ್ಥೆಗಳನ್ನು ಜೊತೆ ಸೇರಿಸಿಕೊಂಡು, ರಾಜ್ಯದಾದ್ಯಂತ ಐಕ್ಯತೆಯಿಂದ ಕೋವಿಡ್ – 19 ನ್ನು ಪರಿಣಾಮ ಕಾರಿಯಾಗಿ ಎದುರಿಸಲು ಕ್ರಮವಹಿಸಬೇಕು.

3) ಸ್ವತಂತ್ರ ನ್ಯಾಯಾಂಗ ತನಿಖೆಗೆ ಮತ್ತು ಶ್ವೇತ ಪತ್ರ ಬಿಡುಗಡೆಗೆ ಕ್ರಮ ವಹಿಸಿರಿ.

ಅದಾಗಲೇ ಕೋವಿಡ್ –19 ರ ನಿರ್ವಹಣೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಒಂದು ಪತ್ರ ಬರೆದು ತಮ್ಮನ್ನು ಒತ್ತಾಯಿಸಿದ್ದೇವೆ. ಆದರೇ ತಮ್ಮ ಸರಕಾರ ಈ ಕುರಿತು ಯಾವುದೇ ಕ್ರಮಗಳನ್ನು ವಹಿಸಿಲ್ಲದಿರುವುದು ವಿಷಾಧಕರವಾಗಿದೆ. ಅದೇ ರೀತಿ, ಸಧನ ಸಮಿತಿ ತನಿಖೆ ಕೈಗೊಳ್ಳದಂತೆ ಕ್ರಮವಹಿಸಿರುವುದು ಮತ್ತಷ್ಟು ಸಂಶಯಕ್ಕೆಡೆ ಮಾಡುತ್ತದೆ. ಕೋವಿಡ್ – 19 ರ ನಿರ್ವಹಣೆಯ ಉಪಕರಣಗಳ ಖರೀದಿಯಲ್ಲಿ ಸುಮಾರು 3,000 ಕೋಟಿ ರೂಗಳಷ್ಟು ಭ್ರಷ್ಟಾಚಾರ ನಡೆದಿದೆಯೆಂದು ಪತ್ರಿಕೆಗಳು ವರದಿ ಮಾಡಿವೆ. ವಿರೋಧ ಪಕ್ಷಗಳು ಒತ್ತಾಯಿಸಿವೆ.

ಇದರಿಂದ, ಕೋವಿಡ್ – 19 ರ ಸಂಕಷ್ಟದಲ್ಲಿರುವ ನಾಗರೀಕರು ಆತಂಕಿತರಾಗಿದ್ದಾರೆ. ಕೋವಿಡ್ –19 ರ ನಿರ್ವಹಣೆಯಲ್ಲಿ ಸರಕಾರದ ಪಾತ್ರವನ್ನು ಸಂಶಯಿಸುವಂತಾಗಿದೆ. ಆದ್ದರಿಂದ ತಾವುಗಳು,

ಅ) ಈ ಕೂಡಲೇ, ಈ ಪ್ರಕರಣವನ್ನು ಸ್ವತಂತ್ರ ಉನ್ನತ ನ್ಯಾಯಾಂಗ ತನಿಖೆಗೊಳಪಡಿಸಿ ಸತ್ಯವೇನೆಂಬುದನ್ನು ಜನತೆಯ ಮುಂದಿಡಲು ಕ್ರಮವಹಿಸಬೇಕು. ಹಾಗೂ, ಇಲಾಖೆಯ ಮಂತ್ರಿಗಳ ರಾಜಿನಾಮೆ ಪಡೆಯ ಬೇಕು. ಉನ್ನತ ಅಧಿಕಾರಿಗಳನ್ನು ಅಮಾನತಿನಲ್ಲಿಡಬೇಕು.

ಆ) ತಕ್ಷಣವೇ ಈ ವಿಚಾರವಾಗಿ ಶ್ವೇತ ಪತ್ರವನ್ನು ಬಿಡುಗಡೆ ಮಾಡಬೇಕು.

4) ಮರಣ ಹೊಂದಿದ ಕುಟುಂಬದವರಿಗೆ ತಲಾ ಕನಿಷ್ಟ 25 ಲಕ್ಷ ರೂಗಳ ಪರಿಹಾರ ಘೋಷಿಸಿರಿ:

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಅಸಮರ್ಪಕ ಹಾಗೂ ಅವೈಜ್ಞಾನಿಕ ಮತ್ತು ಯೋಜನಾ ರಹಿತ ಕ್ರಮಗಳಿಂದಾಗಿ ರಾಜ್ಯದ ನಾಗರೀಕರ ನಡುವೆ ಕೋವಿಡ್ – 19 ವ್ಯಾಪಕವಾಗಿ ಹರಡುವಂತಾಗಿದೆ. ಕೋವಿಡ್ – 19 ಸೋಂಕಿತರಿಗೆ ಅಗತ್ಯ ಚಿಕಿತ್ಸೆ ಸಮಯಕ್ಕೆ ದೊರೆಯದಂತಾಗಿ ಇದುವರೆಗೆ ಸುಮಾರು 300 ಜನರು ಅನಾಥರಂತೆ ಮರಣ ಹೊಂದುವಂತಾಗಿದೆ. ಇವರ ಈ ತೆರನಾದ ಸಾವುಗಳಿಂದ ಈ ಕುಟುಂಬಗಳು ಸಾಕಷ್ಟು ತೊಂದರೆಗಳನ್ನು ಅನುಭವಿಸುವಂತಾಗಿದೆ. ಅವರಿಗೆ ಯಾವುದೇ ನೆರವನ್ನು ಸರಕಾರ ಘೋಷಿಸಿಲ್ಲ.

ತಕ್ಷಣವೇ, ಈ ಸಾಂಕ್ರಾಮಿಕ ದಿಂದ ಮರಣ ಹೊಂದಿದ ಎಲ್ಲರಿಗೂ ತಲಾ 25 ಲಕ್ಷ ರೂ ಪರಿಹಾರವನ್ನು ಕೂಡಲೇ ನೀಡಬೇಕು. ಅದೇ ರೀತಿ, ಕೋವಿಡ್ – 19 ಸಾಂಕ್ರಾಮಿಕದ ಸಾವಿಗೆ ವಿಮಾ ಯೋಜನೆಯನ್ನು ಪ್ರಕಟಿಸಬೇಕು. ಕೊರಂಟೈನ್ ಹಾಗೂ ಕೋವಿಡ್ – 19 ಚಿಕಿತ್ಸಾ ಅವಧಿಗೆ ಪರಿಹಾರವನ್ನು ರೂಪಿಸಬೇಕು.

5) ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯ ನೀಡಿರಿ, ವಿದ್ಯುತ್ ಬಾಕಿ ಹಾಗೂ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ!

ಅದೇ ರೀತಿ, ಮುಂಬರುವ ಅವಧಿಯಲ್ಲಿ ಗ್ರಾಮೀಣ ಹಾಗೂ ನಗರದ ಉದ್ಯೋಗ ಖಾತ್ರಿಯಲ್ಲಿ ದುಡಿಯಲು ತಯಾರಿರುವ ಎಲ್ಲಾ ಕುಟುಂಬಗಳ ಸದಸ್ಯರಿಗೆ ತಲಾ 100 ದಿನಗಳ ಉದ್ಯೋಗ ಒದಗಿಸಲು ಮತ್ತು ಕೂಲಿಯನ್ನು 600 ರೂಗಳಿಗೆ ಹೆಚ್ಚಿಸಲು ಕ್ರಮ ವಹಿಸಬೇಕು. ವಿದ್ಯಾವಂತ ನಿರುದ್ಯೋಗಿಗಳು ಮತ್ತು ಉದ್ಯೋಗ ಕಳೆದುಕೊಂಡ ಎಲ್ಲರಿಗೂ ಮಾಸಿಕ 10,000 ರೂಗಳ ನಿರುದ್ಯೋಗ ಭತ್ಯ ಘೋಷಿಸಬೇಕು.

ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳ ಗೃಹ ಬಳಕೆ ಹಾಗೂ ವ್ಯಾಪಾರ ವಹಿವಾಟುಗಳ, ಸಣ್ಣ ಕೈಗಾರಿಕೆಗಳ ವಿದ್ಯುತ್ ಬಿಲ್ ಹಾಗೂ ಇವರು ಪಡೆದ ಎಲ್ಲಾ ರೀತಿಯ ಸಾಲದ ಮೇಲಿನ ಬಡ್ಡಿ ಮನ್ನಾ ಘೋಷಿಸಬೇಕು.

6) ಕೇಂದ್ರ ಸರಕಾರದಿಂದ ಬರಬೇಕಾದ ಬಾಕಿ ಮತ್ತು ಪ್ಯಾಕೇಜ್ ಪಡೆಯಿರಿ:

ಇದಕ್ಕಾಗಿ ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕಾಗಿ ಇದುವರೆಗೆ ಬರಬೇಕಾದ ಎಲ್ಲಾ ರೀತಿಯ ಬಾಕಿಯನ್ನು ತಕ್ಷಣವೇ ಪಡೆಯಲು ಹಾಗೂ ಕೋವಿಡ್ – 19 ರ ವಿಶೇಷ ಪ್ಯಾಕೇಜ್ ಕನಿಷ್ಠ 50,000 ಕೋಟಿ ರೂ ಬಿಡುಗಡೆ ಮಾಡುವಂತೆ ಒತ್ತಾಯಿಸಬೇಕು.

ಯು. ಬಸವರಾಜ ಕಾರ್ಯದರ್ಶಿ
(04-07-2020)

ಸಿಐಟಿಯು ಹಾಗೂ ಸಿಪಿಐ(ಎಂ)ನಿಂದ ಅಲ್ಲಲ್ಲಿ ಪ್ರತಿಭಟನೆಗಳು

ದುಡಿಯುವ ವರ್ಗದ ರಾಜಕೀಯದಿಂದ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ–ಜೆ. ಬಾಲಕ್ರಷ್ಣ ಶೆಟ್ಟಿ

ವರದಿ: ವಾ.ಉ.

ಬಂಡವಾಳಶಾಹಿ ವ್ಯವಸ್ಥೆಯೇ ಅಂತಿಮವೆಂದು ಬೀಗುತ್ತಿರುವ ಜಾಗತಿಕ ಬಂಡವಾಳಶಾಹಿಗಳು ತನ್ನ ಲಾಭಕೋರತನದ ದ್ರಷ್ಟಿಯಿಂದ ಮನುಕುಲದ ರಕ್ತ ಹೀರುತ್ತಿವೆಯೇ ಹೊರತು ಜನಸಾಮಾನ್ಯರ ಸಂಕಷ್ಟಗಳಿಗೆ ಪರಿಹಾರವನ್ನು ಕಂಡಿಲ್ಲ. ಇಡೀ ಜಗತ್ತನ್ನು ತನ್ನ ಕಪಿಮುಷ್ಠಿಯಲ್ಲಿಡಲು ಹವಣಿಸುತ್ತಿರುವ ಬಂಡವಾಳಶಾಹಿಗಳು, ನೆರೆಹೊರೆ ದೇಶಗಳೊಳಗೆ ಯುದ್ದವನ್ನು ನಡೆಸಿ ಬೇಳೆ ಬೇಯಿಸಿಕೊಳ್ಳುತ್ತಿದೆ. ಇಂತಹ ಬಲಪಂಥೀಯ ರಾಜಕೀಯದಿಂದ ಸಮಾಜದ ಅಭಿವೃದ್ಧಿ ಖಂಡಿತಾ ಸಾಧ್ಯವಿಲ್ಲ. ಬದಲಾಗಿ ಎಡಪಂಥೀಯ ವಿಚಾರಧಾರೆಯುಳ್ಳ ದುಡಿಯುವ ವರ್ಗದ ರಾಜಕೀಯದಿಂದ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕ್ರಷ್ಣ ಶೆಟ್ಟಿಯವರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಿಂದಲೇ ದ.ಕ. ಜಿಲ್ಲೆಯ ಕಾರ್ಮಿಕ ಚಳುವಳಿಯಲ್ಲಿ ಮಹತ್ವದ ಛಾಪನ್ನು ಮೂಡಿಸಿದ ಮೈದಾನ ಕಚೇರಿ ಸ್ಥಳಾಂತರ ಗೊಂಡಿದ್ದು, ಅದರ ನೂತನ ಕಚೇರಿಯನ್ನು ಉದ್ಘಾಟಿಸುತ್ತಾ, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ, ಜಾತಿ ಧರ್ಮದ ಹೆಸರಿನಲ್ಲಿ, ಜನತೆಯ ಭಾವನೆಗಳನ್ನು ಕೆರಳಿಸಿ ಸುಳ್ಳಿನ ಸಾಮ್ರಾಜ್ಯವನ್ನು ಕಟ್ಟುವ ಮೂಲಕ ಅಧಿಕಾರದ ಗದ್ದುಗೆಯೇರಿದ ನರೇಂದ್ರ ಮೋದಿ ಸರಕಾರವು, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಂಟಕವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದ ಭಾರತವನ್ನು ಧರ್ಮದ ಆಧಾರದಲ್ಲಿ ವಿಭಜಿಸಲು ಹೊರಟಿದೆ. ಕೋಮುವಾದದ ವಿರಾಟ್ ಸ್ವರೂಪ ತಾಂಡವವಾಡುತ್ತಿದೆ. ಸಮಾಜದ ಪ್ರಧಾನ ಶಕ್ತಿಯಾದ ಕಾರ್ಮಿಕ ವರ್ಗ ಹಾಗೂ ರೈತಾಪಿ ಜನತೆಯ ಮೇಲೆ ಧಾಳಿ ತೀವ್ರಗೊಂಡಿದೆ. ಇವೆಲ್ಲವನ್ನು ಸೋಲಿಸಲು ಬಲಿಷ್ಟವಾದ ಕಾರ್ಮಿಕ ಚಳುವಳಿಯಿಂದ ಮಾತ್ರವೇ ಸಾಧ್ಯ ಎಂದು ಹೇಳಿದರು.





ಪ್ರಾಸ್ತಾವಿಕ ಭಾಷಣ ಮಾಡಿದ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, ಸ್ವಾತಂತ್ರ್ಯ ಪೂರ್ವದಿಂದಲೇ ದುಡಿಯುವ ವರ್ಗದ ಚಳುವಳಿಯ ಕೇಂದ್ರವಾಗಿ ಮೂಡಿ ಬಂದ ಮೈದಾನ ಕಚೇರಿಯು ರೈತ ಕಾರ್ಮಿಕರ ಅನೇಕ ಯಶಸ್ವಿ ಹೋರಾಟಗಳಿಗೆ ಮಾರ್ಗದರ್ಶನ ನೀಡಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಬಲ ಚಳುವಳಿ ಬೆಳೆದು ಬರುವ ಮೂಲಕ ಜಿಲ್ಲೆಯ ಸೌಹಾರ್ದ ಪರಂಪರೆಯನ್ನು ಬೆಳೆಸಬೇಕಾಗಿದೆ.

ಹಾಗೂ ಕರಾವಳಿಯ ರಾಜಕೀಯವನ್ನು ತೀರ್ಮಾನ ಮಾಡುವಲ್ಲಿ ಕಾರ್ಮಿಕ ವರ್ಗ ಮುಂದಡಿ ಇಡಬೇಕಾಗಿದೆ ಎಂದು ಹೇಳಿದರು

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿಯವರು ಮಾತನಾಡುತ್ತಾ, ಅಂದು ರೈತ ಚಳುವಳಿಯ ಮೂಲಕ ಪ್ರಾರಂಭಗೊಂಡ ಮೈದಾನ ಕಚೇರಿ ಇಂದು ಅದಷ್ಟೋ ಕಾರ್ಮಿಕರ ಹೋರಾಟಗಳಿಗೆ ಕೇಂದ್ರವಾಗಿ ಮಿಂಚಿದೆ. ನೂತನ ಕಚೇರಿಯು ಮುಂದಿನ ದಿನಗಳಲ್ಲಿ ಇನ್ನಷ್ಟು ಹೋರಾಟಗಳಿಗೆ ಸ್ಪೂರ್ತಿ ನೀಡುವಂತಾಗಲಿ ಎಂದು ಆಶಿಸಿದರು.

ಈ ಸಂಧರ್ಭದಲ್ಲಿ ಜಿಲ್ಲಾ ರೈತ ನಾಯಕರಾದ ಕ್ರಷ್ಣಪ್ಪ ಸಾಲ್ಯಾನ್, ಸಿಐಟಿಯು ಜಿಲ್ಲಾ ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯಕ್, ಜಯಂತಿ ಶೆಟ್ಟಿ, ಸಿಪಿಐ(ಎಂ) ನಾಯಕರಾದ ಸುರೇಶ್ ಬಜಾಲ್, ಡಿವೈಎಫ್ಐ ನಾಯಕರಾದ ಮುನೀರ್ ಕಾಟಿಪಳ್ಳ, ಬಿ.ಕೆ.ಇಮ್ತಿಯಾಜ್, ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಜೆಎಂಎಸ್ ನಾಯಕರಾದ ಭಾರತಿ ಬೋಳಾರ, ಜಯಲಕ್ಷ್ಮಿ, ಎಸ್ಎಫ್ಐ ಮುಖಂಡರಾದ ಮಾಧುರಿ ಬೋಳಾರ, ವಿಕಾಸ್ ಕುತ್ತಾರ್, ಕಟ್ಟಡ ಕಾರ್ಮಿಕರ ಮುಖಂಡರಾದ ದಿನೇಶ್ ಶೆಟ್ಟಿ, ಅಶೋಕ್ ಸಾಲ್ಯಾನ್, ಬೀದಿಬದಿ ವ್ಯಾಪಾರಸ್ಥರ ಸಂಘದ ಮುಖಂಡರಾದ ಮಹಮ್ಮದ್ ಮುಸ್ತಫಾ, ಸಂತೋಷ್ ಆರ್.ಎಸ್, ಮುಝಾಫರ್, ಹಸೈನಾರ್, ದಲಿತ ಹಕ್ಕುಗಳ ಸಮಿತಿಯ ನಾಯಕರಾದ ಕ್ರಷ್ಣ ತಣ್ಣೀರುಬಾವಿ, ಅಟೋರಿಕ್ಷಾ ಚಾಲಕರ ಸಂಘದ ಮುಖಂಡರಾದ ಸ್ಟಾನ್ಲಿ ನೊರೋನ್ಹಾ, ಮಹಮ್ಮದ್ ಅನ್ಸಾರ್ ಮುಂತಾದವರು ಉಪಸ್ಥಿತರಿದ್ದರು.

ಕಾರ್ಕಳದಲ್ಲಿ ವಿದ್ಯುತ್ ಮೀಟರ್ ರೀಡರ್ ಗುತ್ತಿಗೆ ಕಾರ್ಮಿಕರ ಧರಣಿ

ವಿದ್ಯುತ್ ತಿದ್ದುಪಡಿ ಮಸೂದೆ 2020ನ್ನು ಹಿಂಪಡೆಯುವಂತೆ ಆಗ್ರಹಿಸಿ ಅಖಿಲ ಭಾರತ ವಿದ್ಯುತ್ ನೌಕರರ ಒಕ್ಕೂಟ (ಸಿಐಟಿಯು) ಕಾರ್ಕಳ ಉಪವಿಭಾಗದ ನೇತೃತ್ವದಲ್ಲಿ ಮೀಟರ್ ರೀಡರ್ ಗುತ್ತಿಗೆ ಕಾರ್ಮಿಕರು ಜುಲೈ 3 ರಂದು ಮೆಸ್ಕಾಂ ಕಾರ್ಕಳ ಉಪವಿಭಾಗ ಕಚೇರಿಯ ಮುಂದೆ ಧರಣಿ ನಡೆಸಿದರು.

ಅಲ್ಲದೆ ಗುತ್ತಿಗೆ ವಿದ್ಯುತ್ ಕಾರ್ಮಿಕರಿಗೆ ಸಂಬಂಧಿಸಿದ ಮನವಿಯನ್ನು ಮೆಸ್ಕಾಂ ಮುಖ್ಯ ಕಾರ್ಯ ನಿರ್ವಾಹಕಿ ಇಂಜಿನಿಯರ್ ಅವರಿಗೆ ಸಲ್ಲಿಸಲಾಯಿತು.

ಧರಣಿಯಲ್ಲಿ ರೀಡರ್ ಸೂಪರ್‌ವೈಸರ್ ಪ್ರಸನ್ನ, ಎಇಇ ದಿಲೀಪ್, ಮೀಟರ್ ರೀಡರ್ ಎಸ್.ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೊರೋನಾ ತಡೆಗಟ್ಟಲು ಸರ್ಕಾರಗಳ ವೈಫಲ್ಯವನ್ನು ಪ್ರತಿಭಟಿಸಿ ಬೆಳ್ತಂಗಡಿಯಲ್ಲಿ ವಾರಾಚರಣೆ:

ಕೊರೋನಾ ತಡೆಗಟ್ಟಲು ಕೇಂದ್ರ, ರಾಜ್ಯ ಸರ್ಕಾರಗಳ ವೈಫಲ್ಯವನ್ನು ಪ್ರತಿಭಟಿಸಿ ದ.ಕ. ಜಿಲ್ಲೆಯಲ್ಲಿ ಸಿಪಿಐ(ಎಂ) ವಲಯ ಸಮಿತಿಗಳು ಸ್ಥಳೀಯ ಸಮಿತಿಗಳು ವಾರಾಚಣೆಯನ್ನು ಕೈಗೊಳ್ಳಬೇಕೆಂದು ಜಿಲ್ಲಾ ಸಮಿತಿ ಕೊಟ್ಟ ಕರೆಯ ಮೇರೆಗೆ ಬೆಳ್ತಂಗಡಿ ತಾಲೂಕಿನಲ್ಲಿ ಪಕ್ಷದ ತಾಲೂಕು ಸಮಿತಿ ವಾರಾಚರಣೆಯನ್ನು ಏರ್ಪಡಿಸಿತ್ತು.

ಜುಲೈ 6 ರಂದು ಬೆಳ್ತಂಗಡಿ ಮಿನಿವಿಧಾನ ಸೌಧದ ಮುಂದೆ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ತಾಲೂಕು ಸಮಿತಿ ಕಾರ್ಯದರ್ಶಿ ಶಿವಕುಮಾರ್ ಎಸ್.ಎಂ, ಸಮಿತಿ ಸದಸ್ಯರಾದ ಶೇಖರ ಲಾಯಿಲ, ವಸಂತ ನಡ ಮಾತನಾಡಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ 19 ವೈರಾಣು ಪರೀಕ್ಷೆ ಮತ್ತು ಚಿಕಿತ್ಸೆಯನ್ನು ಉಚಿತವಾಗಿ ನೀಡಬೇಕು ಸೇರಿದಂತೆ 8 ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಬೆಳ್ತಂಗಡಿ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಲಾಯಿತು.

ಅಕ್ಷರದಾಸೋಹ ನೌಕರರ ಸಂಘದ ಅಧ್ಯಕ್ಷೆ ಲಲಿತಾ ಮದ್ದಡ್ಕ, ರೈತ ಸಂಘದ ಮುಖಂಡರಾದ ನೀಲೇಶ್ ಪೆರಿಂಜೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೇಡಿಕೆ ಈಡೇರಿಸಲು ಆಗ್ರಹಿಸಿ ಬೆಳ್ತಂಗಡಿ ಸಿಐಟಿಯು ಪ್ರತಿಭಟನೆ:

ಬೆಳ್ತಂಗಡಿ ತಾಲೂಕು ದ.ಕ. ಜಿಲ್ಲಾ ಕೇಂದ್ರವಾದ ಮಂಗಳೂರಿಗೆ ಸಾಕಷ್ಟು ದೂರದಲ್ಲಿದ್ದು, ಈಗಿನ ಕೋವಿಡ್–19ರ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಸಿಐಟಿಯು ಕಾರ್ಯಕ್ರಮಗಳಲ್ಲಿ ಮಂಗಳೂರಿನಲ್ಲಿ ಭಾಗವಹಿಸಲು ಅವರಿಗೆ ಕಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜುಲೈ 3 ರ ಕಾರ್ಮಿಕರ ಅಖಿಲ ಭಾರತ ಜಂಟಿ ಪ್ರತಿಭಟನೆಯನ್ನು ಬೆಳ್ತಂಗಡಿ ಸಿಐಟಿಯು ತಾಲೂಕು ಜಿಲ್ಲಾ ಸಮಿತಿಯು ಪ್ರತ್ಯೇಕವಾಗಿ ಅಲ್ಲಿನ ಮಿನಿ ವಿಧಾನಸೌಧದ ಎದುರು ನಡೆಸಿತು.

ಕೇಂದ್ರ ರಾಜ್ಯ ಸರಕಾರಗಳು ಕೊರೋನಾ ಸೋಂಕು ವಿರುದ್ಧ ಜೀವದ ಹಂಗು ತೊರೆದು ಹೋರಾಡುತ್ತಿರುವ ಫ್ರಂಟ್‌ಲೈನ್ ಕೋವಿಡ್ ವಾರಿಯರ್‌ಗಳನ್ನು ಜೀತದಾಳುಗಳಾಗಿಸಿ ದುಡಿಸುತ್ತಿದ್ದಾರೆ. ಅವರ ಸೇವೆಗಳನ್ನು ಸರಕಾರ ಖಾಯಂಗೊಳಿಸಬೇಕು ಎಂದು ಸಿಐಟಿಯು ಬೆಳ್ತಂಗಡಿ ತಾಲೂಕು ಅಧ್ಯಕ್ಷ ಶಿವಕುಮಾರ್ ಎಸ್. ಎಂ.ಹೇಳಿದರು.

ಸಿಐಟಿಯು ತಾಲೂಕು ಕಾರ್ಯದರ್ಶಿ ವಸಂತ ನಡ, ಮುಖಂಡರಾದ ಕೃಷ್ಣ ನೆರಿಯ, ನ್ಯಾಯವಾದಿ ಸುಕನ್ಯಾ ರಾವ್, ಸುಧಾ ಕೆ.ರಾವ್, ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಸೆಲಿಮೋನು ಪುದುವೆಟ್ಟು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೊರೊನಾ ನಿಗ್ರಹಿಸುವ ಬದಲು ಭ್ರಷ್ಟಾಚಾರದಲ್ಲಿ ಮುಳುಗಿದ ಬಿಜೆಪಿ ಸರಕಾರ

ಕೊರೊನಾ ವೈರಸ್ ನ ಹರಡುವಿಕೆ ದೇಶದಲ್ಲಿ ಅತ್ಯಂತ ಅಪಾಯದಲ್ಲಿದ್ದು, ಸಾಮುದಾಯಿಕವಾಗಿ ವಿಸ್ತರಿಸುತ್ತಿದೆ.ಈಗ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೈಕಟ್ಟಿ ಕುಳಿತಿದೆ. ಜನರ ಜೀವವನ್ನು ರಕ್ಷಿಸುವ ಬದಲು ವೈದ್ಯಕೀಯ ಉಪಕರಣಗಳನ್ನು ಖರೀದಿಸುವಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಅತ್ತ ಕೇಂದ್ರ ಸರ್ಕಾರವೂ ಇದೇ ಸಂಧರ್ಭವನ್ನು ದುರುಪಯೋಗಪಡಿಸಿ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ಮುಂದಾಗಿದೆ. ಜನರ ಕೈಗೆ ನೇರ ನಗದು ವರ್ಗಾವಣೆ ಮಾಡುವ ಮೂಲಕ ದೇಶದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಬದಲು, ಈಗಾಗಲೇ ಘೋಷಣೆ ಮಾಡಿರುವ 20 ಲಕ್ಷ ಕೋಟಿ ರೂ.ಯ ಪರಿಹಾರದಲ್ಲಿ ಬಹುಪಾಲನ್ನು ದೇಶದ ಕಾರ್ಪೊರೇಟ್ ಕಂಪೆನಿಗಳಿಗೆ ನೀಡುವ ಮೂಲಕ ಜನತೆಯ ಬದುಕನ್ನು ಸರ್ವನಾಶ ಮಾಡಲು ಹೊರಟಿದೆ ಎಂದು ಸಿಪಿಐ(ಎಂ) ಮಂಗಳೂರು ನಗರ ಮುಖಂಡರಾದ ಪ್ರದೀಪ್ ಕುಮಾರ್ ರವರು ಕೇಂದ್ರ, ರಾಜ್ಯ ಸರಕಾರಗಳನ್ನು ತೀವ್ರವಾಗಿ ಟೀಕಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, ಲಾಕ್ ಡೌನ್ ಸಂಧರ್ಭದಲ್ಲಿ ದೇಶದ ಜನತೆ ಅನುಭವಿಸಿದ ಗಂಭೀರವಾದ ಸಂಕಷ್ಟಗಳನ್ನು ಮರೆ ಮಾಚಲು, ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಚೀನಾ ವಿರುದ್ಧ ಯುದ್ಧದ ನಾಟಕವಾಡಿ, ವಿನಾಃ ಕಾರಣ ನಮ್ಮ ದೇಶದ ಸೈನಿಕರನ್ನು ಬಲಿ ಕೊಡಲಾಗಿದೆ. ಪ್ರಧಾನಿ ಹೇಳಿಕೆಯ ಪ್ರಕಾರ ಗಡಿ ಪ್ರದೇಶದಲ್ಲಿ ಚೀನಾ ಅತಿಕ್ರಮಣ ಮಾಡಿಲ್ಲ ವೆಂದಾದರೆ ದೇಶಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿದ ಸೈನಿಕರಿಗೆ ಅವಮಾನ ಮಾಡಿದಂತಾಗುವುದಿಲ್ಲವೇ ಎಂದು ಪ್ರಶ್ನಿಸಿದ ಅವರು, ಅಂದು ಕಾರ್ಗಿಲ್ ಯುದ್ದದಲ್ಲಿ ಮಡಿದ ಸೈನಿಕರ ಶವ ಪೆಟ್ಟಿಗೆಯಲ್ಲಿ ಕೋಟ್ಯಾಂತರ ರೂ. ಹಗರಣ ನಡೆಸಿದವರು, ಇಂದು ಪುಲ್ವಾಮಾ ಧಾಳಿ ಹಾಗೂ ಚೀನಾ ಯುದ್ಧದ ಹೆಸರಿನಲ್ಲಿ ಸೈನಿಕರ ಜೀವಗಳಲ್ಲಿ ಚೆಲ್ಲಾಟ ನಡೆಸುತ್ತಿದ್ದಾರೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಹಿರಿಯ ಸದಸ್ಯರಾದ ಕಿಶೋರ್, ರಘುವೀರ್, ಕಟ್ಟಡ ಕಾರ್ಮಿಕರ ಸಂಘಟನೆಯ ನಾಯಕರಾದ ಮನೋಜ್, ಡಿವೈಎಫ್ಐ ನಾಯಕರಾದ ಪ್ರಶಾಂತ್ ಎಂ.ಬಿ., ನಾಗೇಂದ್ರ, ಸನತ್, ಮಹಿಳಾ ಮುಖಂಡರಾದ ಸರೋಜಿನಿ, ಹರಿಣಾಕ್ಷಿ ಮುಂತಾದವರು ಹಾಜರಿದ್ದರು.

ನಮ್ಮ ದೇಶದಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚ ಅತ್ಯಂತ ಕನಿಷ್ಟ ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ಒಟ್ಟು ರಾಜ್ಯ ಸರ್ಕಾರಗಳ ಆರೋಗ್ಯ ವೆಚ್ಚವು 2017–18ರಲ್ಲಿ ಜಿಡಿಪಿಯ ಶೇ. 0.9 ರಷ್ಟಿದ್ದರೆ ಕೇಂದ್ರದ್ದು ಜಿಡಿಪಿಯ ಶೇ. 0.32 ರಷ್ಟಿದೆ. ನಮ್ಮ ದೇಶದಲ್ಲಿನ ಒಟ್ಟು ಆರೋಗ್ಯ ವೆಚ್ಚದಲ್ಲಿ ರೋಗಗಳ ಚಿಕಿತ್ಸೆಗೆ(ಕ್ಯೂರೆಟಿವ್) ವಿನಿಯೋಗವಾಗುವ ವೆಚ್ಚದ ಪಾಲು ಶೇ.80 ರಷ್ಟಾದರೆ ರೋಗ ನಿರೋಧಕ (ಪ್ರಿವೆಂಟಿವ್)ವೆಚ್ಚದ ಪಾಲು ಕೇವಲ ಶೇ. 7. ರೋಗ ನಿರೋಧಕ ಕ್ರಮಗಳಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಚತೆ, ಉತ್ತಮ ಗಾಳಿ, ಪೌಷ್ಟಿಕ ಆಹಾರ ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಇವುಗಳ ಮೇಲಿನ ವೆಚ್ಚ ನಮ್ಮಲ್ಲಿ ಕಡಿಮೆ. ಆದರೆ ರೋಗ ಚಿಕಿತ್ಸೆಗೆ, ಔಷಧ್ಯೋದ್ಯಮ, ವೈದ್ಯಕೀಯ ಸಲಕರಣೆಗಳು ಮುಂತಾದವುಗಳ ಮೇಲಿನ ವೆಚ್ಚವು ಅಧಿಕ. ಈ ವೆಚ್ಚವು ನಾಡಿನ ಬಲಾಢ್ಯ ವರ್ಗದ ಹಿತಾಸಕ್ತಿಗಳನ್ನು ಕಾಪಿಡಬಲ್ಲವೇ ವಿನಾ ಬಡವರ, ರೈತಾಪಿ ವರ್ಗದ, ಕಾರ್ಮಿಕರ, ಮಹಿಳೆಯರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಸಾಧ್ಯವಿಲ್ಲ. ಕೋವಿಡ್ 19 ನಮಗೆ ಕಲಿಸುತ್ತಿರುವ ಒಂದು ಪಾಠವೆಂದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮಹತ್ವ ಮತ್ತು ಖಾಸಗಿ ಆರೋಗ್ಯ ವ್ಯವಸ್ಥೆಯ ಮಿತಿಗಳು.

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ್

'ಎಲ್ಲರಿಗೂ ಕೊವಿಡ್–19 ಅಂದ್ರೆ ಇಷ್ಟ'

ನಮ್ಮ ದೇಶದ ಮತ್ತು ಕರ್ನಾಟಕದಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಬಗ್ಗೆ ಏನನ್ನೂ ಹೇಳದಿರುವುದೇ ವಾಸಿ. ಉದಾ: ಕೇಂದ್ರ ಸರ್ಕಾರವು ಘೋಷಿಸಿರುವ ರೂ. 20 ಲಕ್ಷ ಕೋಟಿ ಕೋವಿಡ್ ವಿಶೇಷ ಪ್ಯಾಕೇಜಿನಲ್ಲಿ ಆರೋಗ್ಯಕ್ಕೆ ದೊರೆತಿರುವ ಪಾಲು ನಮ್ಮ ಜಿಡಿಪಿಯ ಶೇ. 0.008. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಗೆಗಿನ ನಿರ್ಲಕ್ಷ್ಯಕ್ಕೆ ಇದಕ್ಕಿಂತ ಇನ್ನೇನು ಸಾಕ್ಷಿ ಬೇಕು? ಕರ್ನಾಟಕದಲ್ಲಿ ಈಗ ಕೇಳಿಬರುತ್ತಿರುವ ಆರೋಪದ ಪ್ರಕಾರ ಕೋವಿಡ್ ಎದುರಿಸಲು ಸರ್ಕಾರವು ಕೊಂಡ ಆರೋಗ್ಯ ಉಪಕರಣ(ಕೋವಿಡ್‌ಗೆ ಸಂಬಂಧಿಸಿದ) ಹಗರಣದಲ್ಲಿ ಸಾವಿರಾರು ಕೋಟಿ ಅವ್ಯವಹಾರ ನಡೆದಿದೆ ಎನ್ನಲಾಗಿದೆ. ಈ ಉಪಕರಣಗಳಿಗೆ ಸರ್ಕಾರ ನೀಡಿರುವ ಮೊತ್ತ ರೂ. 3392 ಕೋಟಿ. ಅವುಗಳ ಮಾರುಕಟ್ಟೆ ಬೆಲೆ ರೂ.1163 ಕೋಟಿ. ಈ ಆರೋಪ ಮಾಡುತ್ತಿರುವ ಸಿದ್ದರಾಮಯ್ಯ ಅವರು ಇಲ್ಲಿನ ರೂ. 2200 ಕೋಟಿಗೆ ಲೆಕ್ಕ ಕೊಡಿ ಎಂದು ಕೇಳುತ್ತಿದ್ದಾರೆ. ಬಹಳ ಹಿಂದೆ ಸಾಯಿನಾಥ್ ಬರೆದಿದ್ದ 'ಎವ್ವೆರಿಬಡಿ ಲೌವ್ಸ್ ಎ ಗುಡ್ ಡ್ರಾಟ್' ಎನ್ನುವ ಕೃತಿಯ ಶೀರ್ಷಿಕೆಯು ಇಲ್ಲಿ ಜ್ಞಾಪಕಕ್ಕೆ ಬಂದರೆ ಆಶ್ಚರ್ಯವಿಲ್ಲ. ಇದನ್ನು ನಾವು 'ಎವ್ವೆರಿಬಡಿ ಲೌವ್ಸ್ ಎ ಕೋವಿಡ್ ಪೆಂಡಮಿಕ್' ಎಂದು ಹೇಳಬಹುದು. ಬರಗಾಲ ಕುರಿತಂತೆ ಅಮರ್ತ್ಯ ಸೆನ್ ಒಂದು ಮಾತು ಹೇಳುತ್ತಾರೆ. ಬರಗಾಲದಲ್ಲಿ ಸಮಾಜದ ಎಲ್ಲ ವರ್ಗಗಳು ಸಂಕಷ್ಟ ಅನುಭವಿಸುವುದಿಲ್ಲ. ಕೆಲವು ವರ್ಗಗಳು ಇದರಿಂದ ಲಾಭವನ್ನೂ ಮಾಡಿಕೊಳ್ಳಬಹುದು. ಈ ಮಾತು ಕೊವಿಡ್ ದುರಂತಕ್ಕೂ ಅನ್ವಯಿಸುತ್ತದೆ.

ನಮ್ಮ ಸಂವಿಧಾನದ ಅನುಚ್ಛೇದ 21 ರಲ್ಲಿ ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕನ್ನು ನೀಡಲಾಗಿದೆ. ಬಾಂಬೆ ಉಚ್ಚ ನ್ಯಾಯಾಲಯವು ಕಳೆದ ಮೇ ತಿಂಗಳಲ್ಲಿ ನೀಡಿದ ತೀರ್ಪೊಂದರಲ್ಲಿ ಘನತೆಯಿಂದ ಕೂಡಿದ ಶವ ಸಂಸ್ಕಾರವು ಸಂವಿಧಾನದ ಅನುಚ್ಛೇದ 21ರ ಜೀವಿಸುವ ಹಕ್ಕಿನ ಭಾಗವಾಗಿದೆ ಎಂದು ಹೇಳಿದೆ. ಕರ್ನಾಟಕದಲ್ಲಿಯೇ ಹತ್ತಾರು ಕೋವಿಡ್ ಪೀಡಿತರು ಚಿಕಿತ್ಸೆ ದೊರೆಯದೆ ಸಾವನ್ನಪ್ಪಿದಾಗ ಅವರ ಶವಗಳನ್ನು ಅತ್ಯಂತ ಹೀನಾಯವಾಗಿ ಗುಂಡಿಯಲ್ಲಿ ಎಸೆಯುತ್ತಿರುವುದರ ಬಗ್ಗೆ ವರದಿಗಳಾಗುತ್ತಿವೆ. ಇವುಗಳ ಬಗ್ಗೆ ಪ್ರಶ್ನೆ ಮಾಡಬೇಕಾದ ಸಂವಿಧಾನಿಕ ಜವಾಬ್ದಾರಿ ಹೊತ್ತಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ/ಕರ್ನಾಟಕ ಮಾನವ ಹಕ್ಕು ಆಯೋಗ ಬಾಯಿ ಮುಚ್ಚಿಕೊಂಡು ಮೌನದ ಮೊರೆ ಹೋಗಿದೆ. ಜೀವಿಸಿದ್ದಾಗ ಆರೋಗ್ಯದಿಂದಿರಲು ಸಾಧ್ಯವಾಗದ ಬಡವರಿಗೆ ಸಾವಿನಲ್ಲಿಯೂ ಘನತೆಯ ಶವಸಂಸ್ಕಾರ ದೊರೆಯುತ್ತಿಲ್ಲ. ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಉಂಟಾದ ಸಾವಿನ ಬಗೆಗೆ ಸರ್ಕಾರವೇ ಕ್ಷಮಾಪಣೆ ಕೇಳುತ್ತಿದೆ(ಪ್ರಜಾವಾಣಿ ವರದಿ ಜುಲೈ 5, 2020: 'ಅಂಬುಲೆನ್ಸಗಾಗಿ ಕಾದು ಕುಳಿತು ರಸ್ತೆಯಲ್ಲಿಯೇ ಮೃತಪಟ್ಟ ಹನುಮಂತನಗರದ ಕೊರೊನ ಸೋಂಕಿತ ವ್ಯಕ್ತಿಯ ಮನೆಗೆ ಬಿಬಿಎಂಪಿ ಆಯುಕ್ತ ಬಿ. ಎಚ್. ಅನಿಲ್ ಕುಮಾರ್ ಶನಿವಾರ ಭೇಟಿ ನೀಡಿ ಕುಟುಂಬದವರ ಕ್ಷಮೆಯಾಚಿಸಿದರು. ಈ ಬಗ್ಗೆ ಪತ್ರಿಕೆಯಲ್ಲಿನ ಕೆಲವು ತಲೆಬರಹ: 'ಸಕಾಲಕ್ಕೆ ಚಿಕಿತ್ಸೆ ಸಿಗದೆ ಇಬ್ಬರ ಸಾವು', '12 ಆಸ್ಪತ್ರೆ ಸುತ್ತಿದ ಮಹಿಳೆ–ಕೊನೆಗೆ ಸಾವು', 'ಚಿಕಿತ್ಸೆಗಾಗಿ ಅಂಗಲಾಚಿದ ಪತಿ', 'ಮನೆಯಲ್ಲಿಯೇ ಇದ್ದ ಮೃತದೇಹ: ಒಂದು ದಿನ ಕಳೆದರೂ ಬಾರದ ಬಿಬಿಎಂಪಿ ಶ್ರದ್ಧಾಂಜಲಿ ವಾಹನ'). ಮಾನವ ಹಕ್ಕುಗಳ ಮತ್ತು ಸಂವಿಧಾನದ ಅನುಚ್ಛೇದ 21ರ ಉಲ್ಲಂಘನೆಯ ಸ್ಪಷ್ಟ ನಿದರ್ಶನಗಳಿವು.

ನಮ್ಮ ದೇಶದಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚ ಅತ್ಯಂತ ಕನಿಷ್ಟ ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ಒಟ್ಟು ರಾಜ್ಯ ಸರ್ಕಾರಗಳ ಆರೋಗ್ಯ ವೆಚ್ಚವು 2017–18ರಲ್ಲಿ ಜಿಡಿಪಿಯ ಶೇ. 0.9 ರಷ್ಟಿದ್ದರೆ ಕೇಂದ್ರದ್ದು ಜಿಡಿಪಿಯ ಶೇ. 0.32 ರಷ್ಟಿದೆ. ನಮ್ಮ ದೇಶದಲ್ಲಿನ ಒಟ್ಟು ಆರೋಗ್ಯ ವೆಚ್ಚದಲ್ಲಿ ರೋಗಗಳ ಚಿಕಿತ್ಸೆಗೆ(ಕ್ಯೂರೆಟಿವ್) ವಿನಿಯೋಗವಾಗುವ ವೆಚ್ಚದ ಪಾಲು ಶೇ. 80 ರಷ್ಟಾದರೆ ರೋಗ ನಿರೋಧಕ (ಪ್ರಿವೆಂಟಿವ್)ವೆಚ್ಚದ ಪಾಲು ಕೇವಲ ಶೇ. 7. ರೋಗ ನಿರೋಧಕ ಕ್ರಮಗಳಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಚತೆ, ಉತ್ತಮ ಗಾಳಿ, ಪೌಷ್ಟಿಕ ಆಹಾರ ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಇವುಗಳ ಮೇಲಿನ ವೆಚ್ಚ ನಮ್ಮಲ್ಲಿ ಕಡಿಮೆ. ಆದರೆ ರೋಗ ಚಿಕಿತ್ಸೆಗೆ, ಔಷಧ್ಯೋದ್ಯಮ, ವೈದ್ಯಕೀಯ ಸಲಕರಣೆಗಳು ಮುಂತಾದವುಗಳ ಮೇಲಿನ ವೆಚ್ಚವು ಅಧಿಕ. ಈ ವೆಚ್ಚವು ನಾಡಿನ ಬಲಾಢ್ಯ ವರ್ಗದ ಹಿತಾಸಕ್ತಿಗಳನ್ನು ಕಾಪಿಡಬಲ್ಲವೇ ವಿನಾ ಬಡವರ, ರೈತಾಪಿ ವರ್ಗದ, ಕಾರ್ಮಿಕರ, ಮಹಿಳೆಯರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಸಾಧ್ಯವಿಲ್ಲ.

ಕೋವಿಡ್ 19 ನಮಗೆ ಕಲಿಸುತ್ತಿರುವ ಒಂದು ಪಾಠವೆಂದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮಹತ್ವ ಮತ್ತು ಖಾಸಗಿ ಆರೋಗ್ಯ ವ್ಯವಸ್ಥೆಯ ಮಿತಿಗಳು. ಕೊವಿಡ್ 19 ಹಾಹಾಕಾರವನ್ನು ಯಾವ ವ್ಯವಸ್ಥೆಯು ನಿರ್ವಹಿಸುತ್ತಿದೆ ಎಂಬ ಸಣ್ಣ ಪ್ರಶ್ನೆಯನ್ನು ನಾವು ಕೇಳಿಕೊಂಡರೆ ಇದರ ಮಥಿತಾರ್ಥವು ತಿಳಿಯುತ್ತದೆ. ದೇಶದಲ್ಲಿನ ಒಟ್ಟು ಕೊವಿಡ್ ಸೋಂಕಿತ ರೋಗಿಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಪ್ರಮಾಣ ಶೇ. 10. ಉಳಿದ ಶೇ. 90 ರಷ್ಟು ಕೊವಿಡ್ ರೋಗಿಗಳು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಖಾಸಗಿ ಕಾರ್ಪೋರೇಟ್ ವಲಯವು ಆರೋಗ್ಯ ಬಿಕ್ಕಟ್ಟು ನಿರ್ವಹಿಸುವುದು ಸಾಧ್ಯವಿಲ್ಲ. ಇಂದು ಬೆಂಗಳೂರಿನಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿನ ನೂರಾರು ವೈದ್ಯರು ಕೆಲಸಕ್ಕೆ ಹಾಜರಾಗುತ್ತಿಲ್ಲ ಎಂದುಹೇಳಲಾಗಿದೆ. ಆದರೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರು ಸೋಂಕನ್ನು ಎದುರಿಸುತ್ತಲೇ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ನರ್ಸುಗಳು ಕೋವಿಡ್ ಸಂಬಂಧಿ ಸಾರ್ವಜನಿಕ ಆರೋಗ್ಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇದೆಲ್ಲ ಖಾಸಗಿ ಕಾರ್ಪೋರೆಟ್ ಆರೋಗ್ಯ ವಲಯದಿಂದ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈಗಲಾದರೂ ನಮ್ಮ ಸರ್ಕಾರಗಳು ಪಾಠ ಕಲಿಯಬೇಕು. ಖಾಸಗೀಕರಣದ ವೈಭವೀಕರಣವನ್ನು–ಕಾರ್ಪೋರೇಟೀಕರಣದ ಆರಾಧನೆಯನ್ನು ನಿಲ್ಲಿಸಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಆದ್ಯತೆಯನ್ನು ನೀಡಬೇಕು.

ನಮ್ಮಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ತೀವ್ರ ಕೊರತೆಗಳಿಂದ ಕೂಡಿದೆ. ಈ ಕಾರಣದಿಂದಾಗಿ ಇಂದು ಕೋವಿಡ್ ಮರಣ ಪ್ರಮಾಣ ಶೇ. 2.95ರಷ್ಟಿದೆ. ನಮಗಿಂತ ಬಡ ದೇಶಗಳಾದ ನೇಪಾಳ, ಶ್ರೀಲಂಕಾ, ಬಂಗ್ಲಾದೇಶ, ಭೂತಾನ್ ದೇಶಗಳಲ್ಲಿ ಇದು ಶೇ. 1 ಕ್ಕಿಂತ ಕಡಿಮೆಯಿದೆ(ಕೋವಿಡ್ ಮರಣ ಪ್ರಮಾಣ ಎಂದರೆ ಪ್ರತಿ 100 ಕೊವಿಡ್ ಸೋಂಕಿತ ರೋಗಿಗಳಲ್ಲಿ ಸಾವಿಗೀಡಾಗುವರ ಸಂಖ್ಯೆ). ರಾಷ್ಟ್ರೀಯ ಆರೋಗ್ಯ ಪ್ರೊಫೈಲ್ ವರದಿ 2019ರ ಪ್ರಕಾರ ನಮ್ಮಲ್ಲಿ ಪ್ರತಿ 1000 ಜನರಿಗಿರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ 0.55. ಕರ್ನಾಟಕದಲ್ಲಿ ಇದರ ಪ್ರಮಾಣ ಶೇ. 1.4.

ಸಾರ್ವಜನಿಕ ವಲಯದ ಮಹತ್ವ ಎನ್ನುವುದು ಕೇವಲ ಆರೋಗ್ಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಕೊವಿಡ್ ಪೆಂಡಮಿಕ್‌ನಿಂದಾಗಿ ನಮ್ಮ ಶಿಕ್ಷಣ ಕ್ಷೇತ್ರವೂ ಬಿಕ್ಕಟ್ಟು ಎದುರಿಸುತ್ತದೆ. ಅಲ್ಲಿಯೂ ಕೂಡ ಸಾರ್ವಜನಿಕ ವಲಯದ ಪಾತ್ರ ಮಹತ್ವವಾದುದಾಗಿದೆ. ಇದು ಉದ್ಯೋಗ–ಉದ್ದಿಮೆ ಕ್ಷೇತ್ರಗಳಿಗೂ ಅನ್ವಯವಾಗುವ ಕ್ರಮವಾಗಿದೆ. ಲಾಕ್‌ಡೌನ್‌ನಿಂದ ಬೆವರು–ಕಣ್ಣೀರು ಮತ್ತು ರಕ್ತ ಹರಿಸಿ ದುಡಿಮೆ ಮಾಡುತ್ತಿದ್ದ ಕಾರ್ಮಿಕ ವರ್ಗ ಯಾವ ಬಗೆಯ ಸಂಕಷ್ಟ ಅನುಭವಿಸಿದರು – ಅನುಭವಿಸುತ್ತಿದ್ದಾರೆ ಎಂಬುದು ಜಗಜ್ಜಾಹೀರಾಗಿದೆ. ಇದಕ್ಕೆ ಖಾಸಗೀಕರಣ ಮದ್ದಲ್ಲ ಎಂದು ಕೊನೆಗೆ ಜ್ಞಾನೋದಯವಾಗಿ ಕೇಂದ್ರ ಸರ್ಕಾರವು 2020–21ನೆಯ ಸಾಲಿಗೆ ಮನರೇಗಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುತ್ತಿದೆ. ನ್ಯಾಯ ಬೆಲೆ ಅಂಗಡಿಗಳ ಮತ್ತು ಅನ್ನಭಾಗ್ಯದಂತಹ ಕಾರ್ಯಕ್ರಮಗಳ ಮಹತ್ವ ಅರಿವಿಗೆ ಬರುತ್ತಿದೆ.

ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ನಡುವಿನ ಅನುಪಾತದ ಬಗ್ಗೆ ನಾವು ವಿವೇಕಯುತವಾಗಿ ಚಿಂತಿಸಬೇಕು. ನಮ್ಮ ಪ್ರಧಾನಮಂತ್ರಿ ಇತ್ತಿಚೆಗೆ ಘೋಷಿಸಿರುವ 'ಆತ್ಮ ನಿರ್ಭರತೆ ಅಭಿಯಾನ' ಎನ್ನುವುದು ಸಾರ್ವಜನಿಕ ವಲಯದಿಂದ ಮಾತ್ರ ಸಾಧ್ಯ. ಸಾರ್ವಜನಿಕ ವಲಯದ ಮೂಲಕ ಫೈವ್‌ಸ್ಟಾರ್ ಹೋಟೆಲುಗಳನ್ನು ನಡೆಸುವ ಅಗತ್ಯವಿಲ್ಲ. ಆದರೆ ರೈಲು ಸಾರಿಗೆ, ವಿದ್ಯುತ್ ಉತ್ಪಾದನೆ–ವಿತರಣೆ, ಪ್ರಾಥಮಿಕ ಶಿಕ್ಷಣ, ದೂರವಾಣಿ, ಜೀವವಿಮೆ, ರಕ್ಷಣಾ ಉದ್ದಿಮೆಗಳು, ಆರೋಗ್ಯ ಕ್ಷೇತ್ರ ಮುಂತಾದವು ಸಾರ್ವಜನಿಕ ವಲಯದಲ್ಲಿದುವುದು ಆರ್ಥಿಕವಾಗಿ ಅಪೇಕ್ಷಣೀಯ. ಕೊವಿಡ್ ನಮಗೆ ಕಲಿಸುತ್ತಿರುವ ಪಾಠ ಇದು. ಇದರಿಂದ ಪಾಠ ಕಲಿಯದಿದ್ದರೆ ನಮ್ಮ ಜನರ ಬದುಕು ಮೂರಾಬಟ್ಟೆಯಾಗುವುದು ಖಚಿತ. ಈ ಮಾತು ಕೃಷಿ ಕ್ಷೇತ್ರಕ್ಕೂ ಅನ್ವಯವಾಗುತ್ತದೆ. ಅಲ್ಲಿಯೂ ನಮ್ಮ ಸರ್ಕಾರಗಳು ಖಾಸಗಿ ವಲಯಕ್ಕೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಅನೇಕ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಿದೆ. ಇದು ಎ.ಪಿ.ಎಮ್.ಸಿ ಕಾಯಿದೆಯ ತಿದ್ದುಪಡಿಯಿರಬಹುದು, ಭೂ ಸುಧಾರಣೆಯಲ್ಲಿನ ತಿದ್ದುಪಡಿಯಿರಬಹುದು, ಎಸ್ಸೆನ್ಸಿಯಲ್ ಕಮಾಡಿಟೀಸ್ ಕಾಯಿದೆಯ ರದ್ದತಿಯಿರಬಹುದು – ಇವೆಲ್ಲವೂ ಖಾಸಗಿ–ಕಾರ್ಪೋರೇಟ್ ವಲಯವನ್ನು ಬಲಪಡಿಸುವ ಮತ್ತು ಸಾರ್ವಜನಿಕ ಕ್ಷೇತ್ರವನ್ನು ದುರ್ಬಲಗೊಳಿಸುವ ಕ್ರಮಗಳಾಗಿವೆ. ಇವೆಲ್ಲವೂ ಉಳ್ಳವರನ್ನು ಗಮನದಲ್ಲಿಟ್ಟುಕೊಂಡು ಜಾರಿ ಮಾಡುತ್ತಿರುವ ಕ್ರಮಗಳಾಗಿವೆ ಜಾಗತೀಕರಣವು ನಮ್ಮಲ್ಲಿ ಅಸಮಾನತೆಯನ್ನು ತೀವ್ರಗೊಳಿಸಿದೆ. ಸರ್ಕಾರಗಳು ಇಂದು ಅನುಸರಿಸುತ್ತಿರುವ ಕ್ರಮಗಳು ಅಸಮಾನತೆಯನ್ನು ಉಲ್ಬಣಗೊಳಿಸುತ್ತವೆ. ಅಸಮಾನತೆಯ ಆರ್ಥಿಕತೆಯಲ್ಲಿ ಆತ್ಮ ನಿರ್ಭರತೆಯು ಸಾಧ್ಯವಿಲ್ಲ. ಏಕೆಂದರೆ ಖಾಸಗಿ ವಲಯಕ್ಕೆ ಗಡಿ ರೇಖೆಗಳಿರುವುದಿಲ್ಲ. ಜಗತ್ತೇ ಅದಕ್ಕೆ ಮಾರುಕಟ್ಟೆ. ನಿಜಕ್ಕೂ ನಾವು 'ಆತ್ಮ ನಿರ್ಭರ ಆರ್ಥಿಕತೆ'ಯನ್ನು ಕಟ್ಟುವುದಾದರೆ ಆರೋಗ್ಯ, ಶಿಕ್ಷಣ, ಉದ್ಯೋಗ, ಆಹಾರ, ವಿದ್ಯುತ್, ರೈಲುಸಾರಿಗೆ ಮುಂತಾದ ಕ್ಷೇತ್ರಗಳು ಸಾರ್ವಜನಿಕ ವಲಯದಲ್ಲಿರಬೇಕು. ●



ಕೃಪೆ: ಪಿ. ಮಹಮ್ಮದ್, ವಾ.ಭಾ.



ಜಗತ್ತಿನಲ್ಲಿ ಅತಿ ಹೆಚ್ಚು ಕೊವಿಡ್ ಸೋಂಕಿತರನ್ನು ಹೊಂದಿರುವ ದೇಶಗಳಲ್ಲಿ ಭಾರತ ಮೂರನೇ ಸ್ಥಾನಕ್ಕೇರಿದೆ. ಇದು ಈ ಮಹಾಮಾರಿಯನ್ನು ಎದುರಿಸುವಲ್ಲಿ ಮೋದಿ ಸರಕಾರದ ಸರ್ವತೋಮುಖ ವಿಫಲತೆಯತ್ತ ಬೊಟ್ಟು ಮಾಡಿ ತೋರಿಸುತ್ತಿದೆ. ಮಹಾಮಾರಿ ತನ್ನ ಪಾಡಿಗೆ ಹರಡುವುದನ್ನು ನೋಡುತ್ತಿರುವುದನ್ನು ಬಿಟ್ಟು ಬೇರೇನೂ ಮಾಡಲಾಗದು ಎಂದು ಅದು ಭಾವಿಸಿರುವಂತೆ ಕಾಣುತ್ತದೆ. ವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಬದ್ಧತೆಯ ಕೊರತೆಯಿಂದಾಗಿ, ಈ ಹಿಂದುತ್ವ ಆಳರಸರು ಅವೈಜ್ಞಾನಿಕ ವಿಧಾನಗಳಿಗೆ ಮತ್ತು ಒಬ್ಬ ಬಲಿಷ್ಟ ನಾಯಕನ ಪ್ರತಿಷ್ಠೆಯನ್ನು ಹೆಚ್ಚಿಸಬಹುದಾದ ಗಿಮಿಕ್‌ಗಳಿಗೆ ಪಕ್ಕಾಗುತ್ತಾರೆ. ಇಂತಹ ಒಂದು ನಿಲುವು ಜನತೆಯ ಆರೋಗ್ಯ ಮತ್ತು ಕಲ್ಯಾಣಕ್ಕೆ ಖಂಡಿತಾ ಒಳ್ಳೆಯದಲ್ಲ.



ಮೋದಿಯ ಕೊವಿಡ್ ಗೋಜಲು

ಪ್ರಕಾಶ ಕಾರಟ್

ಜುಲೈ 5 ರಂದು ಭಾರತದಲ್ಲಿ ಕೊವಿಡ್ ಮಹಾಮಾರಿ ಒಂದು ಪ್ರಮುಖ ಮೈಲಿಗಲ್ಲನ್ನು ದಾಟಿತು. ಅಂದು ಜಗತ್ತಿನಲ್ಲಿ ಅತಿ ಹೆಚ್ಚು ಕೊವಿಡ್ ಸೋಂಕಿತರನ್ನು ಹಿಂದಿರುವ ದೇಶಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಬ್ರೆಝಿಲ್ ನಂತರ ಭಾರತ ಮೂರನೇ ಸ್ಥಾನಕ್ಕೇರಿತು. ಹೀಗೆ ಈ ವಿಷಯದಲ್ಲಿ ಅತ್ಯಂತ ಮೇಲಿನ ಸ್ಥಾನಗಳಲ್ಲಿರುವ ಮೂರೂ ದೇಶಗಳನ್ನು ಬಲಪಂಥೀಯ ಸರ್ವಾಧಿಕಾರಶಾಹಿ ಮುಖಂಡರು ನಡೆಸುತ್ತಿದ್ದಾರೆ ಎಂಬುದು ಕಾಕತಾಳೀಯವೇನಲ್ಲ. ಭಾರತ ಈಗ ಈ ಎರಡು ದೇಶಗಳೊಂದಿಗೆ ಪ್ರತಿದಿನವೂ ಅತಿ ಹೆಚ್ಚು ಸೋಂಕಿತರನ್ನು ದಾಖಲಿಸುತ್ತಿರುವ ದೇಶವೂ ಆಗಿದೆ. ಈಗ ಪ್ರತಿ ನಾಲ್ಕು–ಐದು ದಿನಗಳಲ್ಲಿ ಸೋಂಕಿತರ ಸಂಖ್ಯೆಯಲ್ಲಿ ಒಂದು ಲಕ್ಷದಂತೆ ಏರಿಕೆಯಾಗುತ್ತಿದೆ.

ಇವೆಲ್ಲವೂ ಈ ಮಹಾಮಾರಿಯನ್ನು ಎದುರಿಸುವಲ್ಲಿ ಮೋದಿ ಸರಕಾರದ ಸರ್ವತೋಮುಖ ವಿಫಲತೆಯತ್ತ ಬೊಟ್ಟು ಮಾಡಿ ತೋರಿಸುತ್ತಿವೆ. ಸರಕಾರದ ಮುಂದೆ ಆಯ್ಕೆಗಳು ಖಾಲಿಯಾಗಿವೆ, ಮಹಾಮಾರಿ ತನ್ನ ಪಾಡಿಗೆ ಹರಡುವುದನ್ನು ನೋಡುತ್ತಿರುವುದನ್ನು ಬಿಟ್ಟು ಬೇರೇನೂ ಮಾಡಲಾಗದು ಎಂದು ಅದು ಭಾವಿಸಿರುವಂತೆ ಕಾಣುತ್ತದೆ. ಆರೋಗ್ಯ ಇಲಾಖೆಯ ದೈನಂದಿನ ಪತ್ರಿಕಾ ಹೇಳಿಕೆಗಳು ಒಂದು ವಾರದಿಂದ ನಿಂತು ಹೋಗಿವೆ. ಕೆಲವು ಕುಂಟು ವಿವರಣೆಗಳನ್ನಷ್ಟೇ ಕೊಡಲಾಗುತ್ತಿದೆ. ಅಂದರೆ ಗುಣಮುಖರಾಗುತ್ತಿರುವವರ ಸಂಖ್ಯೆ ಏರುತ್ತಿದೆ, ಮರಣದ ಪ್ರಮಾಣ ಈಗಲೂ ಬೇರೆ ದೇಶಗಳಿಗೆ ಹೋಲಿಸಿದರೆ ಕಡಿಮೆ ಇತ್ಯಾದಿ ಹೇಳಿಕೆಗಳನ್ನು ನಿರಾಸೆಯಿಂದಲೇ ಹೇಳಲಾಗುತ್ತಿದೆ. ಗುಣಮುಖರಾಗುತ್ತಿರುವವರ ದರ ಏರುತ್ತಿದೆ ಎಂಬುದು ಅರ್ಥಹೀನ. ಏಕೆಂದರೆ ಕೊನೆಗೂ ವೈರಾಣು ಸೋಂಕಿತರಲ್ಲಿ 98–99ಶೇ. ಗುಣಮುಖರಾಗುತ್ತಾರೆ. ಇನ್ನು ಮರಣದರಕ್ಕೆ, ಅಂದರೆ ಪ್ರತಿ ದಶಲಕ್ಷ ಮಂದಿಯಲ್ಲಿ ಎಷ್ಟು ಸಾವುಗಳಾಗಿವೆ ಎಂದು ಜನಸಂಖ್ಯೆಯ ಪ್ರಮಾಣಕ್ಕೆ ಆಧರಿಸಿ ಹೇಳುವುದಾದರೂ ಭಾರತದ ಸಾವುಗಳ ದಾಖಲೆ ಹಲವು ಏಶ್ಯ ಮತ್ತು ಆಫ್ರಿಕಾದ ದೇಶಗಳಿಗಿಂತಲೂ ಕೆಟ್ಟದಾಗಿದೆ.

ಒಟ್ಟಾರೆಯಾಗಿ ಮಹಾಮಾರಿಯನ್ನು ಎದುರಿಸುವ ಧೋರಣೆಗಳು ಮತ್ತು ಅವುಗಳ ಅನುಷ್ಠಾನ ಮೋದಿ ಸರಕಾರ ಉಂಟು ಮಾಡಿರುವ ಅವ್ಯವಸ್ಥೆಯನ್ನು ಎತ್ತಿ ತೋರುತ್ತವೆ. ಲಾಕ್‌ಡೌನ್ ಸೋಂಕಿನ ಹರಡಿಕೆಯ ವೇಗವನ್ನು ನಿಧಾನಗೊಳಿಸಿದ್ದರೆ, ಮತ್ತು ಆ ಸಮಯವನ್ನು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲರಚನೆಗಳನ್ನು ವಿಸ್ತರಿಸಲು ಬಳಸಿದ್ದರೆ, ಆ ಮೂಲಕ ಸಾಕಷ್ಟು ವೈದ್ಯಕೀಯ ಸಲಕರಣೆಗಳು, ಪಿಪಿಇಗಳು ಮತ್ತಿತರ ಪೂರೈಕೆಗಳನ್ನು ಖಾತ್ರಿಪಡಿಸಿದ್ದರೆ ಅದು ಪ್ರಯೋಜನಕಾರಿಯಾಗುತ್ತಿತ್ತು. ಆದರೆ ಆಗಿರುವುದು ತದ್ವಿರುದ್ಧವೇ. ಲಾಕ್‌ಡೌನ್ ಹಾಕಿದ ಎರಡು ವಾರಗಳ ನಂತರ ಸೋಂಕಿನ ದರ ಏರಲಾರಂಭಿಸಿತು. ಮೇ 31ರಂದು ಕಟ್ಟುನಿಟ್ಟಾದ ಲಾಕ್‌ಡೌನ್ ಸಡಿಲಿಸಿದ ನಂತರ ಅದು ವಿಪರೀತವಾಗಿ ಏರುತ್ತಿದೆ.

ಸರಕಾರೀ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಮತ್ತು ವೈದ್ಯಕೀಯ ಸಲಕರಣೆಗಳನ್ನು ವಿಸ್ತರಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಸರಕಾರ ಕೈಗೊಂಡ ಕ್ರಮಗಳು ಸೀಮಿತವಾಗಿದ್ದವು, ಸಂಪೂರ್ಣ ಅಸಮರ್ಪಕವಾಗಿದ್ದವು. ತಥಾಕಥಿತ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜಿನಲ್ಲಿಯೂ ಆರೋಗ್ಯಕ್ಕೆ ನೀಡಿದ್ದು ಕೇವಲ 15 ಸಾವಿರ ಕೋಟಿ ರೂ. ಇದು ಕೂಡ ಹಂತ–ಹಂತವಾಗಿ ಖರ್ಚು ಮಾಡುವಂತದ್ದು. ಸರಕಾರ ಆರಿಸಿದ ಖಾಸಗಿ ಆಸ್ಪತ್ರೆಗಳ ಆಡಳಿತವನ್ನು ವಹಿಸಿಕೊಳ್ಳಲು ನಿರ್ದೇಶನಗಳನ್ನು ಕೊಟ್ಟು ಅವನ್ನು ಕೊವಿಡ್ ಶುಶ್ರೂಷೆಯ ಯೋಜನೆಯ ಭಾಗವಾಗಿ ಮಾಡಬಹುದಿತ್ತು. ಆದರೆ ಇದನ್ನು ಮಾಡಲಿಲ್ಲ.

ಲಾಕ್‌ಡೌನನ್ನು ಜಾರಿಗೊಳಿಸಿದ ರೀತಿ ವೈರಸ್ಸನ್ನು ತಡೆಯುವ ಉದ್ದೇಶವನ್ನೇ ಬುಡಮೇಲು ಮಾಡಿದೆ. ಲಕ್ಷಾಂತರ ಜನಗಳನ್ನು ಸಣ್ಣ ಸ್ಥಳಗಳಲ್ಲಿ, ಕೊಳೆಗೇರಿಗಳಲ್ಲಿ ಕೂಡಿಹಾಕುವಂತಾದ್ದು ಭೌತಿಕ ದೂರವನ್ನು ಅಸಾಧ್ಯಗೊಳಿಸಿತು. ಲಾಕ್‌ಡೌನಿನಿಂದ 10 ಕೋಟಿಗೂ ಹೆಚ್ಚು ವಲಸೆ ಕಾರ್ಮಿಕರ ಜೀವನೋಪಾಯಗಳು ಮತ್ತು ಜೀವನಯಾಪನೆಯ ಮೇಲೆ ಉಂಟಾದ ಕರಾಳ ಪರಿಣಾಮಗಳಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಮರಳಿ ಹಳ್ಳಿಗಳತ್ತ ಅಯೋಜಿತ ಮತ್ತು ಬಲವಂತದ ಗುಳೆ ಮತ್ತು ಅದರೊಂದಿಗೆ ಹೊಸ ಪ್ರದೇಶಗಳಿಗೆ ವೈರಸ್ಸಿನ ಹರಡಿಕೆಗೆ ದಾರಿ ಮಾಡಿಕೊಟ್ಟಿತು.

ಕೇಂದ್ರ ಸರಕಾರ ತನ್ನ ನಿಲುವಿನಲ್ಲಿ ವಿಜ್ಞಾನಕ್ಕೆ ಬದ್ಧವಾಗಲಿಲ್ಲ. ತಪಾಸಣೆ, ಸಂಪರ್ಕಗಳ ಪತ್ತೆ ಮತ್ತು ಸೋಂಕಿತರನ್ನು ಪ್ರತ್ಯೇಕವಾಸದಲ್ಲಿ ಇಡುವುದಕ್ಕೆ ಸಂಬಂಧಪಟ್ಟಂತೆ ಧೋರಣೆಗಳನ್ನು ರೂಪಿಸುವಾಗ ಆರೋಗ್ಯ ಪರಿಣಿತರು ಮತ್ತು ಸಾಂಕ್ರಾಮಿಕಗಳ ತಜ್ಞರನ್ನು ಆಧರಿಸಲಿಲ್ಲ. ಕೊವಿಡ್ ಶುಶ್ರೂಷೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿರುವ ರಾಜ್ಯ ಸರಕಾರಗಳಿಗೆ ಸಾಕಷ್ಟು ನಿಧಿಗಳನ್ನು ಕೊಡಲು ಅದು ನಿರಾಕರಿಸಿದೆ. ಈ ಯೋಜನೆಗಳನ್ನು ಜಾರಿಗೆ ತರಲು ತಪಾಸಣಾ ಸಲಕರಣೆಗಳಿಂದ ಹಿಡಿದು ಸಂಪನ್ಮೂಲಗಳ ಕೊರತೆಯಾಗುತ್ತಿದೆ ಎಂದು ಎಲ್ಲ ರಾಜ್ಯಗಳು ದೂರಿವೆ.

ಪಿಎಂಕೇರ್ಸ್ ನಿಧಿಯನ್ನು ಅಪಾರದರ್ಶಕ ರೀತಿಯಲ್ಲಿ ರಚಿಸಲಾಯಿತು, ಹಾಗೆಯೇ ಅದು ಯಾವುದೇ ಜವಾಬುದಾರಿಕೆಯಿಲ್ಲದೆ ಕೆಲಸ ಮಾಡುತ್ತಿದೆ. ಕಾರ್ಪೊರೇಟ್‌ಗಳಿಂದ ಸಂಗ್ರಹಿಸಿದ ನಿಧಿಗಳನ್ನು ಪ್ರಧಾನ ಮಂತ್ರಿಗಳ ರಾಜಕೀಯ ಹಿತಗಳಿಗೆ ಅನುಗುಣವಾಗಿ ಕೊವಿಡ್ ಮಹಾಮಾರಿಯ ವಿರುದ್ಧ ಹೋರಾಡಲು ಬಳಸಲಾಗುತ್ತಿದೆ.

ಇವೆಲ್ಲವುಗಳ ಫಲಿತಾಂಶವೆಂದರೆ, ಕೊವಿಡ್ ರೋಗಿಗಳನ್ನು ಆಸ್ಪತ್ರೆಗಳಿಗೆ ಸೇರಿಸಲು ಒದ್ದಾಡುತ್ತಿರುವ ಕುಟುಂಬಗಳು, ಕೊವಿಡ್ ತಪಾಸಣೆಗಳನ್ನು ಮಾಡಿಸಲಾಗದ ಚಡಪಡಿಕೆಯ ಹತಾಶೆಯುಂಟು ಮಾಡುವ ದೃಶ್ಯಗಳನ್ನು, ಮುಂಚೂಣಿಯ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿಯ ಸಿಬ್ಬಂದಿ ಪಿಪಿಇಗಳ ತೀವ್ರ ಕೊರತೆಯನ್ನು ಮತ್ತು ಖಾಸಗಿ ಆಸ್ಪತ್ರೆಗಳು ವಿಪರೀತ ಶುಲ್ಕಗಳನ್ನು ವಸೂಲಿ ಮಾಡುವ ಪರಿಸ್ಥಿತಿಗಳನ್ನು ಕಾಣಬೇಕಾಗಿ ಬಂದಿದೆ. ಸಾಕಷ್ಟು ಸುರಕ್ಷಾತ್ಮಕ ಉಡುಗೆಗಳಿಲ್ಲದ ಲಕ್ಷಾಂತರ ಆಶಾ ಕಾರ್ಯಕರ್ತೆಯರು ಮತ್ತು ಶುಚಿತ್ವ ಕಾರ್ಮಿಕರ ಪಾಡು ಕರುಣಾಜನಕವಾಗಿದೆ.

ಮೋದಿ ಸರಕಾರ ಕೊವಿಡ್ ಬಿಕ್ಕಟ್ಟಿನಿಂದ ಕೆಲವು ಅಲ್ಪಕಾಲಿಕ ರಾಜಕೀಯ ಪ್ರಯೋಜನಗಳನ್ನು ಪಡೆಯುವುದರಲ್ಲೇ ಹೆಚ್ಚು ಆಸಕ್ತಿ ತೋರಿಸುವಂತೆ ಕಾಣುತ್ತಿದೆ. ಒಂದು ವಿಜ್ಞಾನ ಆಧಾರಿತ ವಿಧಾನ ಮತ್ತು ಯೋಜನೆಯನ್ನು ರೂಪಿಸಲಾಗದೆ ವಿಫಲವಾದ್ದರಿಂದ, ಅಂತಿಮವಾಗಿ ಈಗ ಗೃಹ ಮಂತ್ರಾಲಯ ಕೊವಿಡ್ ವಿರುದ್ಧ ಸಮರವನ್ನು ನಿರ್ದೇಶಿಸುವಂತಾಗಿದೆ. ಈ ಪ್ರಕ್ರಿಯೆಯಲ್ಲಿ ಐಸಿಎಂಆರ್(ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ) ನಂತಹ ಸಂಸ್ಥೆಗಳನ್ನು ಕೆಳಮಟ್ಟಕ್ಕೆ ಇಳಿಸಲಾಗಿದೆ, ಅವನ್ನು ಸರಕಾರದ ಸಾಧನಗಳಾಗಿ ಬಳಸಲಾಗುತ್ತಿದೆ.

ಐಸಿಎಂಆರ್ ಒಂದು ರಕ್ತಸಾರ(ಸೆರೊಲೊಜಿಕಲ್) ಸರ್ವೆ ನಡೆಸಿತ್ತು, ಮತ್ತು ಎಪ್ರಿಲ್ ಅಂತ್ಯದ ವೇಳೆಗೆ ಜನಸಂಖ್ಯೆಯ 0.73ಶೇ. ವೈರಸ್‌ಗೆ ಒಳಗಾಗಿದ್ದಾರೆ ಎಂದು ವರದಿ ಮಾಡಿತು. ಆದರೆ ಈ ವರದಿಯನ್ನು ಈ ಕ್ಷೇತ್ರದ ಪರಿಣತರ ವಿಮರ್ಶೆಗೆ ಸಲ್ಲಿಸಲಿಲ್ಲ, ಈ ಅಧ್ಯಯನ ಏನು ಸೂಚಿಸುತ್ತದೆ ಎಂದೂ ವಿವರಿಸಲಿಲ್ಲ. ಉದಾಹರಣೆಗೆ, ಜನಸಂಖ್ಯೆಯ 0.73ಶೇ. ಬಾಧಿತರಾಗಿದ್ದಾರೆ ಎಂದಾದರೆ, ಒಬ್ಬ ಪ್ರಸಿದ್ಧ ಸಾಂಕ್ರಾಮಿಕಶಾಸ್ತ್ರಜ್ಞರ ಪ್ರಕಾರ, ಎಪ್ರಿಲ್ ಅಂತ್ಯದ ವೇಳೆಗೆ ಒಂದು ಕೋಟಿ ಮಂದಿ ವೈರಸ್‌ಗೆ ಒಳಗಾಗಿದ್ದರು ಎಂದಾಗುತ್ತದೆ. ಸರ್ವೆಯ ಈ ತೀರ್ಮಾನದೊಂದಿಗೆ ಐಸಿಎಂಆರ್ ನಂತರದ ಮೂರು ತಿಂಗಳಲ್ಲಿ ಸೋಂಕಿನ ಪ್ರಮಾಣ ಎಷ್ಟಾಗಬಹುದು ಎಂದು ಅಂದಾಜು ಮಾಡಿ ಆ ಸವಾಲನ್ನು ಎದುರಿಸಲು ಒಂದು ಯೋಜನೆಯನ್ನು ರೂಪಿಸಬೇಕಾಗಿತ್ತು. ಆದರೆ ಈ ಸಂಸ್ಥೆ ಯಾವುದೇ ಸ್ವತಂತ್ರ ಪಾತ್ರವನ್ನು ಕೈಬಿಟ್ಟಂತೆ ಕಾಣುತ್ತದೆ.

ಐಸಿಎಂಆರ್ ಹೈಡ್ರೊಕ್ಸಿಕ್ಲೊರೊಕ್ವಿನ್‌ನ ಪ್ರಯೋಗಗಳನ್ನು ಮತ್ತು ಅದನ್ನು ಡಾಕ್ಟರುಗಳಿಗೆ ಹಾಗೂ ಮುಂಚೂಣಿಯ ಆರೋಗ್ಯ ಸಿಬ್ಬಂದಿಗೆ ಮುಂಜಾಗ್ರತಾ ಔಷಧಿಯಾಗಿ ಶಿಫಾರಸು ಮಾಡುತ್ತಲೇ ಬಂತು. ಈ ಔಷಧಿ ಯಾವ ಪ್ರಯೋಜನಕಾರೀ ಪರಿಣಾಮಗಳನ್ನು ಹೊಂದಿಲ್ಲ ಎಂಬ ತೀರ್ಮಾನಕ್ಕೆ ಡಬ್ಲ್ಯುಹೆಚ್‌ಒ ಬಂದ ಮೇಲೂ ತನ್ನ ಶಿಫಾರಸಿಗೇ ಅಂಟಿಕೊಂಡಿತು. ಭಾರತದ ಪ್ರಮುಖ ವೈದ್ಯಕೀಯ ಸಂಶೋಧನಾ ಸಂಸ್ಥೆಗೆ ಇಂತಹ ವಿಷಯಗಳಲ್ಲಿ ಟ್ರಂಪ್ ಮಾತ್ರವೇ ಮಾರ್ಗದರ್ಶಕ ಬೆಳಕು ಆಗಿರುವಂತೆ ಕಾಣುತ್ತದೆ. ಇನ್ನು ಮೋದಿ ಸರಕಾರ, ಕೊವಿಡ್ ಶುಶ್ರೂಷೆಯಲ್ಲಿ ಸ್ವಲ್ಪಮಟ್ಟಿನ ಪರಿಣಾಮವನ್ನು ತೋರಿಸಿರುವ, ಆದರೆ ಭಾರತದಲ್ಲಿ ಲಭ್ಯವಿರದ ಔಷಧಿ ರೆಮ್ಡೆಸಿವಿರ್‌ನ್ನು ಉತ್ಪಾದಿಸಲು ಒಂದು ಕಡ್ಡಾಯ ಲೈಸೆನ್ಸ್ ನೀಡಲು ನಿರಾಕರಿಸಿದೆ. ಅದರ ಒಡೆತನ ಒಂದು ಅಮೆರಿಕನ್ ಔಷಧಿ ಕಂಪನಿಯ ಬಳಿಯಿದ್ದು, ಅದು ಅದರ ಪೂರೈಕೆಯನ್ನು ಸಂಪೂರ್ಣವಾಗಿ ಅಮೆರಿಕನ್ ಸರಕಾರಕ್ಕೆ ಒಪ್ಪಿಸಿದೆ. ಭಾರತ ಸರಕಾರ ಕಡ್ಡಾಯ ಲೈಸೆನ್ಸಿಂಗ್‌ನ ದಾರಿ ಅನುಸರಿಸಿದರೆ ಅದನ್ನು ಭಾರತೀಯ ಕಂಪನಿಗಳು ಉತ್ಪಾದಿಸಲು ಅವಕಾಶವಾಗುತ್ತದೆ.

ಇತ್ತೀಚೆಗೆ, ಐಸಿಎಂಆರ್ ಕೊವಿಡ್‌ಗೆ ಲಸಿಕೆಯಾಗಬಹುದಾದ ಕೊವ್ಯಾಕ್ಸಿನ್‌ನ ಔಷಧೀಯ (ಕ್ಲಿನಿಕಲ್) ಪ್ರಯೋಗಗಳನ್ನು ಆಗಸ್ಟ್ 15 ರೊಳಗೆ ಪೂರ್ಣಗೊಳಿಸಬೇಕು ಎಂದು 12 ಆಸ್ಪತ್ರೆಗಳಿಗೆ ನಿರ್ದೇಶನಗಳನ್ನು ಕೊಟ್ಟಿತು. ಮೂರು ಹಂತಗಳ ಪ್ರಯೋಗಗಳನ್ನು ಒಂದೂವರೆ ತಿಂಗಳಲ್ಲಿ ಪೂರ್ಣಗೊಳಿಸಬೇಕು ಎನ್ನುವುದು ಒಂದು ರಾಜಕೀಯ ಗುರಿಯೇ ಹೊರತು ವೈದ್ಯಕೀಯ ಗುರಿಯಾಗಲು ಸಾಧ್ಯವಿಲ್ಲ. ಈ ಐಸಿಎಂಆರ್ ನಿರ್ದೇಶನವನ್ನು ವಿಜ್ಞಾನಿಗಳು ಮತ್ತು ಆರೋಗ್ಯ ಪರಿಣಿತರು ಬಲವಾಗಿ ಟೀಕಿಸಿದ್ದಾರೆ. ಈ ಇಡೀ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಟ ಆರು ತಿಂಗಳು ಬೇಕಾಗುತ್ತದೆ ಎಂದು ಅವರೆಲ್ಲರೂ ಹೇಳಿದ್ದಾರೆ.

ಈ ಘಟನೆ ಮೋದಿ ಸರಕಾರದ ಒಂದು ಕಳವಳಕಾರೀ ಲಕ್ಷಣವನ್ನು ಪ್ರದರ್ಶಿಸುತ್ತದೆ. ವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಬದ್ಧತೆಯ ಕೊರತೆಯಿಂದಾಗಿ, ಈ ಹಿಂದುತ್ವ ಆಳರಸರು ಅವೈಜ್ಞಾನಿಕ ವಿಧಾನಗಳಿಗೆ ಮತ್ತು ಒಬ್ಬ ಬಲಿಷ್ಟ ನಾಯಕನ ಪ್ರತಿಷ್ಠೆಯನ್ನು ಹೆಚ್ಚಿಸಬಹುದಾದ ಗಿಮಿಕ್‌ಗಳಿಗೆ ಪಕ್ಕಾಗುತ್ತಾರೆ. ಇಂತಹ ಒಂದು ನಿಲುವು ಜನತೆಯ ಆರೋಗ್ಯ ಮತ್ತು ಕಲ್ಯಾಣಕ್ಕೆ ಖಂಡಿತಾ ಒಳ್ಳೆಯದಲ್ಲ.

ಕೊವಿಡ್ ಮಹಾಮಾರಿ ಜಗತ್ತಿನಾದ್ಯಂತ ಇನ್ನೂ ತನ್ನ ಆರಂಭಿಕ ಹಂತದಲ್ಲೇ ಇದೆ. ಒಂದು ಪರಿಣಾಮಕಾರಿ ಲಸಿಕೆಯನ್ನು ಅಭಿವೃದ್ಧಿ ಪಡಿಸುವ ವರೆಗೆ ನಾವು ದೀರ್ಘ ಕಾಲ ಇದನ್ನು ಎದುರಿಸಬೇಕಾಗಿದೆ. ಆದ್ದರಿಂದ ಸರಕಾರ ತನ್ನ ಆದ್ಯತೆಗಳನ್ನು ಸರಿಯಾಗಿ ಗುರುತಿಸಬೇಕಾಗಿದೆ–ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಯುದ್ಧೋಪಾದಿಯಲ್ಲಿ ಬಲಪಡಿಸಬೇಕಾಗಿದೆ; ವ್ಯವಸ್ಥಿತ ರೀತಿಯಲ್ಲಿ ವ್ಯಾಪಕ ಪ್ರಮಾಣದಲ್ಲಿ ತಪಾಸಣೆ, ಸಂಪರ್ಕ ಪತ್ತೆ ಮತ್ತು ಪ್ರತ್ಯೇಕವಾಸವನ್ನು ವ್ಯವಸ್ಥೆಗೊಳಿಸಬೇಕಾಗಿದೆ; ಎಲ್ಲ ಕೆಲಸಗಳ ಹೊರೆಯನ್ನು ಹೊರಬೇಕಾದ ರಾಜ್ಯ ಸರಕಾರಗಳಿಗೆ ಅಗತ್ಯವಾದುದೆಲ್ಲವನ್ನೂ ಒದಗಿಸಬೇಕಾಗಿದೆ ಮತ್ತು ಎಲ್ಲ ಸಮಯಗಳಲ್ಲೂ ಜನರಿಗೆ ಮಾಹಿತಿ ನೀಡುತ್ತಿರಬೇಕಾಗುತ್ತದೆ ಹಾಗೂ ಅವರ ಪೂರ್ಣ ಸಹಕಾರವನ್ನು ಗಳಿಸಬೇಕಾಗಿದೆ. ನಿಜ, ಇದಕ್ಕೆ ಪೂರಕವಾಗಿ ಒಂದು ಆರ್ಥಿಕ ಯೋಜನೆಯೂ ಬೇಕಾಗಿದೆ. ಇದರ ಫಲವಾಗಿ ಅಗತ್ಯವಿರುವವರಿಗೆ ನಗದು ವರ್ಗಾವಣೆ, ಆಹಾರಧಾನ್ಯಗಳ ಉಚಿತ ವಿತರಣೆ, ಮನರೇಗದ ವಿಸ್ತರಣೆ ಮತ್ತು ಜೀವನೋಪಾಯಗಳ, ಆದಾಯಗಳ ಪುನರುಜ್ಜೀವನ ಆಗಬೇಕಾಗಿದೆ.



ಬಾಲ್ಕನಿ ಸರಕಾರ
ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ



ಆಗಸ್ಟ್ 15 ಭಾರತದ ಕೊರೊನ ಲಸಿಕೆ ಬಿಡುಗಡೆ ಗುರಿ?
ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

‘ಸಾಂಕ್ರಾಮಿಕದ ನೆರಳು’ : ಈ ನೋವಿನ ಪರಿಚಯವಿದೆಯೆ ನಿಮಗೆ ?

ಕೊವಿಡ್ ಅವಧಿಯಲ್ಲಿ ಕೌಟುಂಬಿಕ ಹಿಂಸೆ ಯಾರ ಅಂಕೆ ಸಂಖ್ಯೆಗೂ ಸಿಗದ ಹಾಗೆ ನಡೆದಿದೆ. ಇದು ಕೇವಲ ಭಾರತದ ಸಂದರ್ಭ ಮಾತ್ರವಲ್ಲ. ವಿಶ್ವದ ವಿವಿಧ ದೇಶಗಳಲ್ಲಿ ಸ್ಥಿತಿ ಭಯಾನಕವಾಗಿದೆ ಎಂದು ಸ್ವತಃ ವಿಶ್ವಸಂಸ್ಥೆ ಹೇಳಿದೆ. ತನ್ನ ಸದಸ್ಯ ರಾಷ್ಟ್ರಗಳಿಗೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲು ಸಲಹೆ ಮಾಡಿದೆ ಕೂಡಾ. ಯು.ಎನ್ ವಿಮೆನ್ ಇದನ್ನು Shadow Pandemic ‘ಸಾಂಕ್ರಾಮಿಕದ ನೆರಳು’ ಎಂದು ಕರೆದಿದೆ. ಅದರ ಭೀಕರತೆಯನ್ನೂ ಗುರುತಿಸಿದೆ.

ವಿಮಲಾ ಕೆ.ಎಸ್.

ಬೆಳಿಗ್ಗೆ ನಿಧಾನಿಸಿ ಏಳಬೇಕೆಂದುಕೊಂಡೇ ಮಲಗಿದ್ದೆ. ಬಡಿದುಕೊಂಡ ಮೊಬೈಲ್ ಶಬ್ದವಷ್ಟೇ ಅಲ್ಲ ಅದರ ಹಿಂದಿನ ಸ್ವರವೂ ಕರ್ಣಕಠೋರವಿತ್ತು. ಕರುಳು ಹಿಂಡುವಂತಿತ್ತು. ‘ವಿಮಲಾ ಯಾರಾದ್ರೂ ಜನವಾದಿ ಗೆಳತಿಯರನ್ನು ನನ್ ಮನೆಗೆ ಕಳಿಸು. ನನಗಿನ್ನು ಸಾಧ್ಯವಿಲ್ಲ ಸಹಿಸಿಕೊಳ್ಳಲು..’.

ವರ್ಷಗಟ್ಟಲೇ ಹೆಂಡತಿ ಮಕ್ಕಳು ದುಡಿದು ತಂದು ಹಾಕಿದ್ದನ್ನು ಮನೆಯಲ್ಲೇ ಬಿದ್ದುಕೊಂಡು ತಿಂದು ಕೊಬ್ಬಿದ ಗಂಡು ತನ್ನನ್ನು ಪ್ರಶ್ನೆ ಮಾಡುವ ಅಧಿಕಾರ ಅವಳಿಗಿಲ್ಲ ಎಂದು ತನ್ನ ಪೌರುಷದ ಮುಷ್ಠಿಯನ್ನು ಆಕೆಯ ಮುಖದ ಮೇಲೆ ಪ್ರಯೋಗಿಸಿದ್ದ. ಆ ಹೊಡೆತಕ್ಕೆ ಆಕೆ ಮಗುಚಿ ಬಿದ್ದವಳು ಏಳಲಾಗಿರಲಿಲ್ಲ. ಈ ನೋವಿನ ಪರಿಚಯ ನನಗೂ ಇಲ್ಲ. ಇಲ್ಲವೆಂದಲ್ಲ ಇದೆ. ನನಗಿರುವ ಹಾಗೆ ನಿಮಗೂ ಇರಬೇಕು ಎಲ್ಲರಿಗೂ ಇರಬೇಕು. ಆಗ ಹಿಂಸೆ ಮುಕ್ತ ಬದುಕಿನ ನಿಜವಾದ ಸ್ವಾದ ಇಡೀ ಸಮಾಜಕ್ಕೇ ದಕ್ಕುತ್ತದೆ.


ಕೊನೆಗೂ ‘ಕರುಣಾಳು ರಾಘವನಲಿ ತಪ್ಪಿಲ್ಲ’ ಈ ನುಡಿಗೆ ಸಮಾಜ ಒಗ್ಗಿಕೊಂಡಿದೆ. ‘ಹತ್ತು ಹದಿನೈದು ವರ್ಷಗಳಿಂದ ಸಹಿಸಿಕೊಂಡೆ. ಇನ್ನು ಸಾಧ್ಯವಿಲ್ಲ.’ ಇದು ತೀರಾ ಸಹಜವಾಗಿ ಎಂಬಂತೆ ಮಹಿಳೆಯರು ಹೇಳುವ ಮಾತು. ‘ಯಾಕೆ ಮೊದಲ ಬಾರಿಗೆ ದೈಹಿಕ ಹಿಂಸೆಗೆ ಮುಂದಾದಾಗ ತಡೆ ಒಡ್ಡಲಿಲ್ಲ ನೀನು. ಯಾಕೆ ಸಹಿಸಕೊಂಡೆ’ ಎಂದು ಕೇಳುವ ಹಾಗೇ ಇಲ್ಲ. ಯಾಕೆಂದರೆ ಯಾವುದೇ ಸ್ಥಿತಿಯಲ್ಲಿಯೂ ಅವರವರ ಮನೆಗಳಲ್ಲಿ ಹೊತ್ತು ಹೊತ್ತಿಗೆ ಒಲೆ ಉರಿಯುತ್ತದೆ. ರಾತ್ರಿಯ ಆತನ ಹಕ್ಕಿನ ದಾಖಲೆಗಾಗಿ ಮೈ ಎಲ್ಲ ಕಚ್ಚಿ ಗಾಯವಾಗಿದ್ದರೂ, ತುಟಿ ಊದಿ ರಕ್ತವೇ ಬಂದಿದ್ದರೂ ಎಂದೂ ಬೀಳದವಳು ಹಿಂದಿನ ರಾತ್ರಿ ಮಂಚದಿಂದ ಬಿದ್ದಿರುತ್ತಾಳೆ. ಹೀಗಿದ್ದರೂ ವೈವಾಹಿಕ ಸಂಬಂಧದಲ್ಲಿ ನಡೆಯುವ ಅತಿಕ್ರಮಣ ಅತ್ಯಾಚಾರವೆಂದು ಕರೆಯಿಸಿಕೊಳ್ಳುವುದಿಲ್ಲ. ಹಾಗೆಂದು ಪರಿಗಣಿಸಿದರೆ ಕುಟುಂಬದ ಸಂಬಂಧ ಹಾಳಾಗುತ್ತದಂತೆ. ಹೊರಗಿನ ಗಾಯಕ್ಕೆ ಕಾರಣ ಹೇಳಿ ಸುಧಾರಿಸಿಕೊಳ್ಳುತ್ತಾಳೆ ಆದರೆ ಒಳಗಿನ ಗಾಯ ಕಾಣುವುದೂ ಇಲ್ಲ, ಮಾಯುವುದೂ ಇಲ್ಲ.

ಅಂಕೆಗೆ ಸಿಗದ ಸಂಕೋಲೆ:

ಕೊವಿಡ್ ಅವಧಿಯಲ್ಲಿ ಕೌಟುಂಬಿಕ ಹಿಂಸೆ ಯಾರ ಅಂಕೆ ಸಂಖ್ಯೆಗೂ ಸಿಗದ ಹಾಗೆ ನಡೆದಿದೆ. ಇದು ಕೇವಲ ಭಾರತದ ಸಂದರ್ಭ ಮಾತ್ರವಲ್ಲ. ವಿಶ್ವದ ವಿವಿಧ ದೇಶಗಳಲ್ಲಿ ಸ್ಥಿತಿ ಭಯಾನಕವಾಗಿದೆ ಎಂದು ಸ್ವತಃ ವಿಶ್ವಸಂಸ್ಥೆ ಹೇಳಿದೆ. ತನ್ನ ಸದಸ್ಯ ರಾಷ್ಟ್ರಗಳಿಗೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲು ಸಲಹೆ ಮಾಡಿದೆ ಕೂಡಾ. ಯು.ಎನ್ ವಿಮೆನ್ ಇದನ್ನು shadow pandemic ‘ಸಾಂಕ್ರಾಮಿಕದ ನೆರಳು’ ಎಂದು ಕರೆದಿದೆ. ಅದರ ಭೀಕರತೆಯನ್ನೂ ಗುರುತಿಸಿದೆ. ಎಷ್ಟೋ ದೇಶಗಳಲ್ಲಿ ಹೊರಗೆ ಬರಲಾಗದೇ, ಅಡಲೂ ಆಗದ ಅನುಭವಿಸಲೂ ಆಗದ ಸ್ಥಿತಿಯಲ್ಲಿ ನರಳುತ್ತಿರುವುದನ್ನು ಗುರುತಿಸಿದೆ. ಬಹುತೇಕ ಆರ್ಥಿಕವಾಗಿ ಹಿಂಸ್ರಕರ ಮೇಲೇನೇ ಅವಲಂಬಿತರಾದ ಮಹಿಳೆಯರು, ಸುರಕ್ಷತೆ, ಆರೋಗ್ಯದ ಚಿಂತೆಗಳಿಂದಾಗಿ ಅವಡುಗಚ್ಚಿ ಸಹಿಸಿಕೊಳ್ಳಬೇಕಾದ ಪರಿಸ್ಥಿತಿಯನ್ನೂ ಗುರುತಿಸಿದೆ. ಅವಡುಗಚ್ಚಿ ಸಹಿಸುವುದನ್ನು ಮಹಿಳೆಯರು ರೂಢಿಸಿಕೊಂಡೇ ಬದುಕುತ್ತಾರೆ ಎನ್ನುವುದು ಜಗತ್ತಿಗೇ ತಿಳಿದಿರುವ ಸತ್ಯ.

ಆದರೆ ಈ ಸಾಂಕ್ರಾಮಿಕದ ಉಪಟಳವನ್ನು ಮೀರಿಸುವ ಉಪಟಳವನ್ನು ಎದುರಿಸುವ ಸ್ಥಿತಿಯನ್ನು ಗಮನಿಸಿ ವಿಶ್ವ ಆರೋಗ್ಯ ಸಂಸ್ಥೆ ಕೂಡಾ ಕ್ರಮ ಕೈಗೊಳ್ಳಲು ಸಲಹೆ ನೀಡಿದೆ. ಯು.ಎನ್. ವಿಮೆನ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ರವರು ಈ ವಿಷಯವನ್ನೇ ಉದ್ದೇಶಿಸಿ ಮಾತನಾಡುತ್ತ ಹೇಳುತ್ತಾರೆ–‘ಸಾಂಕ್ರಾಮಿಕ ರೋಗದ ಪೂರ್ವದಲ್ಲಿಯೂ ಮಹಿಳೆಯರ ಮೇಲೆ ದೌರ್ಜನ್ಯಗಳು ಸಾರ್ವತ್ರಿಕವಾಗಿದ್ದು ಮಾನವಹಕ್ಕುಗಳ ಉಲ್ಲಂಘನೆ ವ್ಯಾಪಕವಾಗಿ ನಡೆಯುತ್ತಿತ್ತು. ಲಾಕ್ ಡೌನ್ ನಿರ್ಬಂಧಗಳಿಂದಾಗಿ ದೌರ್ಜನ್ಯ ಪ್ರಕರಣಗಳಲ್ಲಿ ತೀವ್ರ ಹೆಚ್ಚಳವಾಗಿದೆ. ಸಾಂಕ್ರಾಮಿಕದ ನೆರಳಾಗಿ ಬಾಧಿಸುತ್ತಿದೆ ಈ ಸಂಕಷ್ಟದ ಕಾಲದಲ್ಲಿ ಆಶ್ರಯತಾಣಗಳನ್ನು ಸುರಕ್ಷೆಯ ತಾಣವನ್ನಾಗಿಸಿ ಆರ್ಥಿಕ, ಮಾನಸಿಕ ಮುಂತಾದ ಉತ್ತೇಜಕ ಸೌಲಭ್ಯಗಳನ್ನು ಪೂರೈಸಿ ಮಹಿಳೆಯರ ಜೊತೆ ಸರಕಾರಗಳು ನಿಲ್ಲಲೇಬೇಕೆಂದಿದ್ದಾರೆ. ಈ ಸಮಯದ ಅಗತ್ಯವಾಗಿ ನಡೆಸಬೇಕಿರುವ ಕ್ಯಾಂಪೈನ್ ಗಾಗಿ ಒಂದು ಕಿರುಚಿತ್ರವನ್ನೂ ನಿರ್ಮಿಸಲಾಗಿದೆ.

Shadow pandemic – ಸಾಂಕ್ರಾಮಿಕ ನೆರಳು ಹೆಸರಿನ ಈ ಕಿರುಚಿತ್ರ ಮೇಲ್ನೋಟಕ್ಕೆ ತುಂಬಾ ನಿರುಪದ್ರವಿ ಸ್ವರೂಪದ ಸಹಜ ಕುಟುಂಬಗಳಂತೆ ಕಾಣುವ ವಿಶ್ವದ ವಿವಿಧ ಭಾಗಗಳ 14 ಕುಟುಂಬಗಳ ದೃಶ್ಯಾವಳಿಗಳನ್ನು ಸೆರೆಹಿಡಿದಿದೆ. ಆದರೆ ಅದರ




ಜೊತೆಗೇ ಬರುವ ಹಿನ್ನೆಲೆಯ ಸಂಗೀತ ವಾದ್ಯಗಳು ವಿಭಿನ್ನ ಅನುಭವಗಳನ್ನು ಕಟ್ಟಿಕೊಡುತ್ತವೆ. ಅದೇ ನಾಲ್ಕುಗೋಡೆಗಳೊಳಗಿನ ಸಂಸಾರದ ಕಟು ವಾಸ್ತವವಾದ ಹಿಂಸಾ ಪ್ರವೃತ್ತಿಯ ಅನಾವರಣ. ಇವುಗಳನ್ನು ಸಮಾಜಕ್ಕೆ ತಿಳಿಸುವ ಮತ್ತು ಆ ಮೂಲಕ ಸಂವೇದನೆಗೆ ಒಳಪಡಿಸುವ, ತೊಂದರೆಗೆ ಒಳಗಾದವರಿಗೆ ಆತ್ಮಸ್ಥೈರ್ಯ ತುಂಬುವ ಮತ್ತು ಸರಕಾರಗಳ ಸಮಾಜದ ಜವಾಬ್ದಾರಿಯ ಅರಿವು ಮೂಡಿಸುವ ಒಂದು ಸ್ಪಷ್ಟ ಸಕಾರಾತ್ಮಕ ಹೆಜ್ಜೆಯನ್ನಿಟ್ಟಿದೆ.

ಇದೇ ವೇಳೆಗೆ ಅರ್ಜಂಟೈನಾ, ಸೈಪ್ರಸ್, ಅಮೇರಿಕಾ ಸಿಂಗಪೂರ್ ನಂಥಹ ದೇಶಗಳಲ್ಲಿ 25 ರಿಂದ 50% ವರೆಗೆ ಸಂತ್ರಸ್ತರ ದೂರು ಕರೆಗಳಲ್ಲಿ ಹೆಚ್ಚಳವಾಗಿದೆ ಎಂದು ವರದಿಗಳು ಹೇಳುತ್ತವೆ. ಹಿಂಸ್ರಕನ ಎದುರು ಕರೆ ಮಾಡುವುದು ದುಸ್ತರವಾದಾಗಲೂ ಇಷ್ಟು ಪ್ರಮಾಣದ ಕರೆ ಇದೆ ಎಂದರೆ ತೊಂದರೆಗೊಳಗಾದ ಎಲ್ಲರಿಗೂ ಮಾಹಿತಿ ನೀಡಿ ಸಹಾಯಕ್ಕೆ ಕೇಳುವ ಅವಕಾಶ ಸಿಕ್ಕರೆ ಇದು ಯಾವ ಪ್ರಮಾಣಕ್ಕೇ ಏರಬಹುದೋ ಊಹಿಸಲಸಾಧ್ಯ. ಈ ಮೊದಲೇ ದೃಢಪಟ್ಟಂತೆ ವಿಶ್ವದಲ್ಲಿ ಮೂವರಲ್ಲಿ ಒಬ್ಬಳು ಮಹಿಳೆ ಕೌಟುಂಬಿಕ ಹಿಂಸೆಯ ಬಲಿ ಎಂದು ಸಾಬೀತಾದ ಸಂಗತಿ. ಈಗ ಅದು ಇನ್ನೂ ಜಾಸ್ತಿಯಾಗಿದೆ ಎಂದರೆ ಅರ್ಥಮಾಡಿಕೊಳ್ಳೋಣ ಏನಾಗಿದೆ ಎಂದು.

ಭಾರತದ ಸ್ಥಿತಿ:

ಹಾಗಾದರೆ ಭಾರತದ ಪರಿಸ್ಥಿತಿ ಏನು? ಮೇ ತಿಂಗಳಿನಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ಲಾಕ್ ಡೌನ್ ಆದ ದಿನದಿಂದ ಏಪ್ರಿಲ್ ತಿಂಗಳಿನ ವರೆಗೆ ಸಂತ್ರಸ್ಥರ ಆಕ್ರಂದನದ, ಸಹಾಯಕ್ಕಾಗಿ ಮೊರೆ ಇಡುವ ಕರೆಗಳಲ್ಲಿ ಹಿಂದಿನ ದಿನಗಳಿಗೆ ಹೋಲಿಸಿದರೆ ಹೆಚ್ಚಾಗಿದೆ ಎಂದು ಹೇಳಿಕೆ ಬಿಡುಗಡೆ ಮಾಡಿ ಆಯೋಗದಿಂದ ಅದಕ್ಕೆ ಅಗತ್ಯವಾದ ಪೂರಕ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಕೂಡ ಮಾಧ್ಯಮಗಳಲ್ಲಿ ವರದಿಗಳಾಗಿದ್ದವು. ಆದರೆ ಅದಕ್ಕೆ ಪೂರಕವಾದ ಅಂಕಿ ಸಂಕಿಗಳಾಗಲಿ, ತೆಗೆದುಕೊಂಡ ಕ್ರಮಗಳ ಬಗ್ಗೆಯಾಗಲಿ ಸರಕಾರದಿಂದ ಅಧಿಕೃತ ಮಾಹಿತಿಗಳು ದೊರೆಯುತ್ತಿಲ್ಲ. ಈ ಹಿಂದೆಯೇ ಪ್ರಕಟವಾದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4 ರ ವರದಿ ಗುರುತಿಸಿದಂತೆ ವಿವಾಹಿತ ಮಹಿಳೆಯರಲ್ಲಿ 31% ಮಹಿಳೆಯರು ಕೈಹಿಡಿದವನಿಂದ ಮಾನಸಿಕ, ಲೈಂಗಿಕ, ಭಾವನಾತ್ಮಕ ಹಿಂಸೆಗಳನ್ನು ಅನುಭವಿಸುತ್ತಾರೆ. ದೈಹಿಕ ಹಿಂಸೆಯಂತೂ ತೀರಾ ಸಹಜದ ಸಂಗತಿಯೆಂಬಂತೆ ಒಪ್ಪಿತವಾದ ಸಂಗತಿ.



ಕೊವಿಡ್ ಸಂದರ್ಭದಲ್ಲಿ ಬೆಂಗಳೂರಿನ ಒಂದು ಪ್ರದೇಶದಲ್ಲಿ ಮಹಿಳೆಯರನ್ನು ಅವರ ಬದುಕಿನಲ್ಲಿ ಆದ ಸ್ಥಿತ್ಯಂತರದ ಕುರಿತು ಸಣ್ಣ ಸಮೀಕ್ಷೆ ಮಾಡಿದಾಗ ಈ ಅವಧಿಯಲ್ಲಿ ದೈಹಿಕ ಹಿಂಸೆಯ ಪ್ರಮಾಣದಲ್ಲಿ ಏರಿಕೆಯಾಗಿದೆಯೇ ಎಂದರೆ ಅದು ಇದ್ದಿದ್ದೇ ಅಲ್ವಾ ಎನ್ನುವ ಉದ್ಗಾರ ಬಂದಿದೆ. ಹಾಗಾಗಿಯೇ ವರದಿಯಾಗುವ ಪ್ರಕರಣಗಳು ವಾಸ್ತವ ಸಂಖ್ಯೆಗಳಿಗಿಂತ ಎಷ್ಟೋ ಪಟ್ಟು ಕಡಿಮೆ ಇರುತ್ತದೆ ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಆದರೆ ದುರಂತವೆಂದರೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಈ ಅವಧಿಯಲ್ಲಿ ಕೌಟುಂಬಿಕ ದೌರ್ಜನ್ಯದಲ್ಲಿ ಏರಿಕೆ ಎನ್ನುವುದು ಎನ್.ಜಿ.ಓ.ಗಳು ಸೃಷ್ಟಿಸಿದ ಸುದ್ದಿ ಎಂದರು. ಅಲ್ಲಿದೆ ಮುಚ್ಚಿಡುವ ರಾಜಕಾರಣದ ಪರಾಕಾಷ್ಠೆ. ಅವರ ಪ್ರಕಾರ ದೇಶದ ಪೋಲಿಸ್ ಸ್ಟೇಷನ್ ಗಳು ಬಾಗಿಲು ಮುಚ್ಚಿ ಕುಳಿತಿಲ್ಲ, ಈ ಅವಧಿಯಲ್ಲಿ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದ 89 ಸಾವಿರ ಮಹಿಳೆಯರನ್ನು ಸಂರಕ್ಷಿಸಲಾಗಿದೆ ಎಂದೂ ಅವರೇ ಹೇಳುತ್ತಿದ್ದಾರೆ. ಅಪಾಯದ ಎದುರೇ ಆರಕ್ಷಣೆಗಾಗಿ ಕರೆ ಮಾಡಿದವರೇ ಈ ಪ್ರಮಾಣದಲ್ಲಿದ್ದರೆ ಇನ್ನು ಅವಡುಗಚ್ಚಿ ಸಹಿಸಿಕೊಳ್ಳುವ ಮಹಿಳೆಯರು, ಇದೆಲ್ಲ ಸಹಜವೇ ತಾನೇ ಎಂದುಕೊಳ್ಳುವ ವಿಭಾಗವನ್ನು ಊಹಿಸಿಕೊಂಡರೆ ಬಹುತೇಕ ಮಹಿಳೆಯರು ಹಿಂಸೆಯ ಬಲಿಗಳು ಎಂದು ಅರ್ಥ ತಾನೇ? ಆದರೆ ಇಂತಹ ಬೇಗುದಿಯಲ್ಲಿ ಬೇಯುವ ಮಹಿಳೆಯರಿಗೆ ಕುಟುಂಬದ ಇತರ ಸದಸ್ಯರ ಸಹಾನುಭೂತಿ ಸಹಾಯ ದೊರೆಯಲಾರದು, ಅಕ್ಕಪಕ್ಕದವರೂ ನೆರವಿಗೆ ಧಾವಿಸಲಾರದ ಸ್ಥಿತಿಯ ಕಾರಣದಿಂದಾಗಿ ಮಹಿಳೆಯರು ಇನ್ನಷ್ಟು ಒಂಟಿಗಳಾಗುತ್ತಾರೆ. ಪರ್ಯಾಯ ವ್ಯವಸ್ಥೆಗಳೇ ಇಲ್ಲದ ಕಾರಣದಿಂದ ಅನಿವಾರ್ಯವಾಗಿ ಪರಿಸ್ಥಿತಿಯ ಜೊತೆ ಹೊಂದಾಣಿಕೆ ಮಾಡಿಕೊಳ್ಳದೇ ಬೇರೆಯ ದಾರಿಯೂ ಇಲ್ಲ.

ನಿಜವಾಗಿ ನೋಡಿದರೆ ಈ ಲಾಕ್ ಡೌನ್ ಅವಧಿಯಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆಗಳು, ಸಾಂತ್ವನ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಬೇಕಿತ್ತು. ಇವು ಅಗತ್ಯ ಸೇವೆಗಳನ್ನಾಗಿ ಪರಿಗಣಿಸಬೇಕಿತ್ತು. ಆದರೆ ಇಡೀ ದೇಶದಲ್ಲಿ ಇವುಗಳ ಸಂಖ್ಯೆ ಅಗತ್ಯಕ್ಕನುಗುಣವಾಗಿ ಖಂಡಿತಾ ಇಲ್ಲ. ಇದು ತಕ್ಷಣದಲ್ಲಿ ಸಕಾರಾತ್ಮಕವಾಗಿ ಪರಿಗಣಿಸಲೇ ಬೇಕಾದ ಅಗತ್ಯವಾಗಿದೆ. ಇದರ ಜೊತೆಯೇ ಭಾರತದಲ್ಲಿ ಕೌಟುಂಬಿಕ ದೌರ್ಜನ್ಯಕ್ಕೂ ಕುಡಿತದಂಥಹ ದುಶ್ಚಟಗಳಿಗೂ ನೇರ ಸಂಬಂಧವಿದೆ. ಹಾಗಾಗಿಯೇ ಮದ್ಯಪಾನ ವಿರೋಧೀ ಆಂದೋಲನಗಳು ಅತಿ ಹೆಚ್ಚು ಸಂಖ್ಯೆಯ ಮಹಿಳೆಯರನ್ನು ಆಕರ್ಷಿಸುತ್ತಿವೆ. ಹಲವಾರು ರಾಜ್ಯಗಳಲ್ಲಿ ರಾಜ್ಯಕ್ಕೆ ಲಾಕ್ ಡೌನ್ ಕಾಲದಲ್ಲಿ ಸೋರಿಹೋದ ಸಂಪನ್ಮೂಲ ಕ್ರೋಢೀಕರಣಕ್ಕೆ ಒಂದು ಅವಕಾಶವೆಂಬಂತೆ ಮದ್ಯ ಮಾರಾಟಕ್ಕೆ ಆಸ್ಪದ ಕೊಟ್ಟಿದ್ದು ಮತ್ತು ಅದನ್ನು ಮನೆಮನೆಗೆ ಹಂಚಲೂ ಸಿದ್ಧವಾಗಿದ್ದು ನಡೆದಿವೆ. ರಾಜ್ಯಗಳಿಗೆ ಸಂಪನ್ಮೂಲಗಳ ಅಗತ್ಯವಿದೆ ಎಂಬುದನ್ನು ನಾವು ಒಪ್ಪುತ್ತೇವಾದರೂ ಮದ್ಯ ಮಾರಾಟಕ್ಕಿರುವ ನಿರ್ಬಂದದ ಸಡಿಲಿಕೆ ಮಹಿಳೆಯರ ಬದುಕಿನ ಮೇಲೆ

ಪುಟ 10 ಕ್ಕೆ

ಕೊವಿದ್ ಕಾಲದಲ್ಲಿ ಎಷ್ಟು ಹೆಚ್ಚಳ?

‘ದಿ ಹಿಂದು’ ಪತ್ರಿಕೆ ಸಂಗ್ರಹಿಸಿ ಜೂನ್ 22ರಂದು ಪ್ರಕಟಿಸಿದ ಮಾಹಿತಿ ಪ್ರಕಾರ ಲಾಕ್ ಡೌನಿನ 68 ದಿನಗಳ ಅವದಿಯಲ್ಲಿ (ಮಾರ್ಚ್ 25 ರಿಂದ ಮೇ 31, 2020) 1477 ಕೌಟುಂಬಿಕ ಹಿಂಸೆಯ ಪ್ರಕರಣಗಳ ವರದಿಯಾಗಿವೆ. ಇದು 2019ರ ಅದೇ 68 ದಿನಗಳ ಅವಧಿಯಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆಯ ಎರಡುವರೆ ಪಟ್ಟು, 2018ರ ಪ್ರಕರಣಗಳ ಮೂರು ಪಟ್ಟು, 2017ರ ಎರಡು ಪಟ್ಟು ಎಂಬುದು ದಂಗು ಪಡಿಸುವಂಥ ಮಾಹಿತಿ.

ಇನ್ನೊಂದು ಬಿಬಿಸಿ ನ್ಯೂಸ್ ಜೂನ್ 2ರಲ್ಲಿ ವರದಿಯಾದ ಮಾಹಿತಿ ಪ್ರಕಾರ ಲಾಕ್ ಡೌನಿನ ಮೊದಲ (2020ರ ಮಾರ್ಚ್ 23 ರಿಂದ ಎಪ್ರಿಲ್ 16 ವರೆಗಿನ) 3 ವಾರಗಳ ಅವಧಿಯಲ್ಲಿ 587 ಪ್ರಕರಣಗಳು ವರದಿಯಾಗಿದ್ದು, ಅದರ ಹಿಂದಿನ 3 ವಾರಗಳ (ಫೆಬ್ರುವರಿ 27ರಿಂದ ಮಾರ್ಚ್ 22, 2020) ಅವಧಿಯಲ್ಲಿ ವರದಿಯಾದ 396 ಪ್ರಕರಣಗಳಿಗಿಂತ ಸುಮಾರು ಶೇ. 48ರಷ್ಟು ಹೆಚ್ಚು.

‘ಆತ್ಮನಿರ್ಭರ್’ಗೆ ಜನತೆಯ ಆಸ್ತಿ ಮೈ ಶುಗರ್ ಬಲಿ?!



ಮೋದಿ ಸರಕಾರದ ಕೊವಿದ್ ಪ್ಯಾಕೇಜಿನ ಗರ್ಭದಿಂದ ಬಂದ ‘ಆತ್ಮನಿರ್ಭರ್’ ಎಂದರೇನು ಎಂದು ಯಾರು ನಿರ್ವಚಿಸಿಲ್ಲ. ಅದರ ಹಿಂದಿನ ಮತ್ತು ನಂತರದ ಕೈಗಾರಿಕಾ ನೀತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ - ‘ಆತ್ಮ’ ಎಂದರೆ ಚಮಚಾ ಬಂಡವಾಳಶಾಹಿ, ಸಾರ್ವಜನಿಕ ಉದ್ದಿಮೆಗಳನ್ನು ಚಮಚಾ ಬಂಡವಳಿಗರಿಗೆ ಮೂರು ಕಾಸಿಗೆ ಕೊಡುವುದು, ಚೀನಾ ಬಿಟ್ಟರೆ ಇತರ ಎಲ್ಲ ವಿದೇಶಿ ‘ಬಂಡವಾಳ’ಗಳನ್ನು ‘ಸ್ವದೇಶಿ’ ಎಂದು ಪರಿಗಣಿಸುವುದು, ತನ್ನ ಚಮಚಾಗಳಿಗೆ ವಿದೇಶಿ ‘ಬಂಡವಾಳ’ದ ನೆರವು ಕೊಡಿಸುವುದು - ಇದು ‘ಆತ್ಮನಿರ್ಭರ್’ದ ಹೂರಣವಿದ್ದಂತೆ ಕಾಣುತ್ತದೆ. ಮಂಡ್ಯದ ಅಸ್ಮಿತೆಯೂ ಹೆಮ್ಮೆಯೂ ಆದ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಮೂರು ಕಾಸಿಗೆ ಖಾಸಗಿಯವರಿಗೆ ಮಾರುವ ಬಿಜೆಪಿ ಸರಕಾರದ ಹುನ್ನಾರ ಇದಕ್ಕೊಂದು ಒಳ್ಳೆಯ ದೃಷ್ಟಾಂತ. ಇದು ‘ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿ’ ಮಂಡ್ಯದಲ್ಲಿ ಮೈಶುಗರ್ ಖಾಸಗೀಕರಣದ ವಿರುದ್ಧ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

– ಕೆ.ಎನ್. ಉಮೇಶ್
(ಮಂಡ್ಯದಲ್ಲಿ ಮೈಶುಗರ್ ಖಾಸಗೀಕರಣದ ಪರಿಣಾಮಗಳ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.)

ರಾಷ್ಟ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುವಲ್ಲಿನ ಮುಂಚೂಣಿ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವು ಪ್ರಥಮ ಸ್ಥಾನದಲ್ಲಿದೆ. ವಿದೇಶಿ ನೇರ ಬಂಡವಾಳ ಆಕರ್ಷಣೆ ಮಾಡುವುದೇ ರಾಜ್ಯ ಸರ್ಕಾರಗಳ ಕೆಲಸ ಎಂಬಂತೆ ಒಂದರ ಮೇಲೊಂದು ರಾಜ್ಯಗಳು ಪೈಪೋಟಿಗೆ ಇಳಿದಿವೆ. ಜಗತ್ತಿನ ಪ್ರಸಿದ್ಧ ಫಾರ್ಚೂನ್ 500 ಕಂಪನಿಗಳು ಒಂದಲ್ಲೊಂದು ರೀತಿಯಲ್ಲಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ತಮ್ಮ ಕಚೇರಿ, ಉತ್ಪಾದನೆ ಮುಂತಾದ ಸಂಬಂಧ ಹೊಂದಿವೆ. ಬೆಂಗಳೂರು ವಿಶ್ವ ಬಂಡವಾಳಿಗರ ನೆಚ್ಚಿನ ತಾಣ, ಸಿಲಿಕಾನ್ ಸಿಟಿ ಮುಂತಾದ ಹೆಸರಿನಿಂದ ಖ್ಯಾತಿ ಹೊಂದಿದೆ.

ಇಂತಹ ಸಾಧನೆಗೆ ಸರ್ಕಾರಗಳು ನಿರಂತರವಾಗಿ ನಡೆಸುತ್ತಾ ಬಂದಿರುವ ‘ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ’ಗಳು (GIM), ‘ಕರ್ನಾಟಕದಲ್ಲಿ ಬಂಡವಾಳ ಹೂಡಿ’ (Invest Karnataka) ಎಂಬ ಮೇಳಗಳು ಮತ್ತು ಅದರ ಯಶಸ್ವಿಗಾಗಿ ವಿದೇಶಗಳಲ್ಲಿ ಆಯೋಜಿಸಲಾಗುತ್ತಿರುವ ರೋಡ್ ಶೋಗಳು ಕಾರಣ ಎಂದು ಬಿಂಬಿಸಲಾಗುತ್ತಿದೆ. ಆದರೆ ಈ ಸಮಾವೇಶಗಳಲ್ಲಿ ಬಂಡವಾಳಗಾರರು ಕೊಟ್ಟ ಭರವಸೆಗಳು ಎಷ್ಟು, ಆದ ಒಪ್ಪಿಗೆಯ ಒಪ್ಪಂದಗಳು (MOU) ಎಷ್ಟು, ಅವುಗಳಲ್ಲಿ ನಿಜವಾಗಿ ಹೂಡಿಕೆಯಾದವು ಎಷ್ಟು ಎಂದು ಪ್ರಶ್ನಿಸಿದರೆ, ಸಿಗುವ ಉತ್ತರ ಮಾತ್ರ ತೃಪ್ತಿಕರವಾಗಿಲ್ಲ.

ಹೂಡಿಕೆ ಕಡಿಮೆಯಾಗಲು ಆದ ಒಪ್ಪಂದಗಳು ಜಾರಿಗೆ ಬಾರದಿರಲು ಇರುವ ಕಾರಣಗಳನ್ನು ಹುಡುಕುತ್ತಾ ಸರಿಪಡಿಸಲೆಂದು ಕಂಡುಕೊಂಡ ದಾರಿಗಳು 'ರೋಗಕ್ಕಿಂತ ಔಷಧಿಯೇ ಅಪಾಯಕಾರಿಯಾಗಿ' ಪರಿಣಮಿಸುತ್ತಿದೆ. ಹೂಡಿಕೆ ಹೆಚ್ಚಳ ಮಾಡಲು 'ಇನ್ವೆಸ್ಟ್ ಕರ್ನಾಟಕ' ಪ್ರತ್ಯೇಕ ನಿಗಮ ತೆರೆದರು, ಪರವಾನಗಿ ಮುಂತಾದ ಕ್ರಮಗಳಿಗಾಗಿ ಏಕಗವಾಕ್ಷಿ ವ್ಯವಸ್ಥೆ ರೂಪಿಸಿದರು, ಭೂಮಿ, ವಿದ್ಯುತ್, ನೀರು ಮುಂತಾದವನ್ನು ರಿಯಾಯಿತಿ ಕೆಲವೊಮ್ಮೆ ಪುಕ್ಕಟ್ಟೆ ಕೊಡುವ ಪ್ರಸ್ತಾಪ ನೀಡಿದರು. ಗುತ್ತಿಗೆ ಆಧಾರದಲ್ಲಿ ನೀಡುತ್ತಿದ್ದ ಭೂಮಿಯ ಗುತ್ತಿಗೆ ಕಾಲಾವಧಿ ಕಡಿತ ಮಾಡುತ್ತಾ ಬಂದರು. ಇದೀಗ ಅಂತವರಿಗೆ ನೀಡಿದ್ದ ಭೂಮಿ ಗುತ್ತಿಗೆಯನ್ನು 9 ವರ್ಷಗಳ ನಂತರ ಅವರವರಿಗೆ ಸ್ವಂತಕ್ಕೆ ನೀಡುವ ತೀರ್ಮಾನವನ್ನು ಮಾಡಿದ್ದಾರೆ. ಅದಕ್ಕಾಗಿ ಕೋವಿಡ್–19 ಲಾಕ್ ಡೌನಿನಿಂದಾಗಿ ಉಂಟಾಗಿರುವ ಆರ್ಥಿಕ ಸಮಸ್ಯೆ ಪರಿಹರಿಸಿ ಪುನಶ್ಚೇತನಗೊಳಿಸುವ ನೆಪದಲ್ಲಿ ಭೂ ಸುಧಾರಣೆ ಕಾಯ್ದೆ, ಭೂ ಕಂದಾಯ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆಗಳಿಗೆ ತಿದ್ದುಪಡಿ, ಖಾಸಗಿ ಸಂಸ್ಥೆಗಳಿಗೆ ನೀಡಿದ್ದ ಭೂಮಿ ಅವರವವರಿಗೆ ನೀಡಲು ಸುಗ್ರೀವಾಜ್ಞೆಗಳನ್ನು ಒಂದರ ಮೇಲೊಂದರಂತೆ ಹಠಕ್ಕೆ ಬಿದ್ದು ಹೊರಡಿಸುತ್ತಿವೆ ಸರ್ಕಾರಗಳು.

ಇದುವರೆಗೆ ಸಾರ್ವಜನಿಕ ಕ್ಷೇತ್ರಗಳಲ್ಲೇ ಇರಿಸಲಾಗಿದ್ದ, ಅಂತಹವುಗಳನ್ನು ಸರ್ಕಾರವೇ ನಡೆಸಬೇಕು ಎಂದು ಜನತೆ ನಂಬಿದ್ದ ಆಯಕಟ್ಟಿನ ಕ್ಷೇತ್ರಗಳನ್ನು ಖಾಸಗಿಯವರಿಗೆ ದೇಶೀಯ ಹಾಗೂ ವಿದೇಶಿ ಬಹುರಾಷ್ಟ್ರೀಯ ಬಂಡವಾಳಗಾರರಿಗೆ ಮುಕ್ತವಾಗಿ ತೆರೆದಿಡಲಾಗುತ್ತಿದೆ. ರಕ್ಷಣ ಇಲಾಖೆಗೆ ಅಗತ್ಯಗಳನ್ನು ಉತ್ಪಾದಿಸುತ್ತಿದ್ದ ಆರ್ಡಿನೆನ್ಸ್ ಕಾರ್ಖಾನೆಗಳು, ಬ್ಯಾಂಕ್, ವಿಮೆ, ರೈಲ್ವೆ, ಕಲ್ಲಿದ್ದಲು ಮುಂತಾದ ಗಣಿಗಾರಿಕೆಯನ್ನು ಖಾಸಗಿ ಬಂಡವಾಳಕ್ಕೆ ಮುಕ್ತಿಗೊಳಿಸಲಾಗಿದೆ. 150ಕ್ಕೂ ಹೆಚ್ಚು ರೈಲ್ವೆ ಇಲಾಖೆಯ ಮಾರ್ಗಗಳಲ್ಲಿ ಖಾಸಗಿ ರೈಲುಗಳ ಓಡಾಟಕ್ಕೆ, ರೈಲ್ವೆ ನಿಲ್ದಾಣಗಳ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲು ಮುಂದಾಗಿದೆ.

ರಾಜ್ಯದ ಅಸ್ಮಿತೆಯಾಗಿದ್ದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು (SBM) ಕೇಂದ್ರ ಸರ್ಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ದಲ್ಲಿ ವಿಲೀನ ಮಾಡಿ ಇಂದು ಮೈಸೂರು ಬ್ಯಾಂಕ್ ಇಲ್ಲದಾಗಿದೆ. ಲಾಭದಾಯಕವಾಗಿದ್ದ ರಾಜ್ಯದ ವಿಜಯಾ ಬ್ಯಾಂಕನ್ನು ನಷ್ಟದಲ್ಲಿದ್ದ ಗುಜರಾತಿನ ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನ ಮಾಡಿದೆ. 80ರ ದಶಕದಲ್ಲಿ "ಸರ್ಕಾರದ ಕೆಲಸ ವ್ಯಾಪಾರ ಮಾಡುವುದಲ್ಲ" (Business of Government is not to do business) ಎಂದ ಬ್ರಿಟನ್ ಪ್ರಧಾನಿ ಮ್ಯಾಗರೇಟ್ ಥ್ಯಾಚರ್ ರವರ ಹೇಳಿಕೆಯ ಮೂಲಕ ಆರಂಭಿಸಲಾದ ಖಾಸಗೀಕರಣ, ಅದಕ್ಕಾಗಿ ಉದಾರ ಸರ್ಕಾರಿ ನೀತಿಗಳು ಉದಾರೀಕರಣ ಹಾಗೂ ಜಗತ್ತನ್ನೇ ಒಂದು ಹಳ್ಳಿಯಾಗಿಸುವ 'ಜಾಗತಿಕ ಹಳ್ಳಿ' ಜಾಗತೀಕರಣದ ತ್ರಿವಳಿ ನೀತಿಗಳಾದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ (LPG) ನೀತಿಗಳನ್ನು ಹರಿಬಿಡಲಾಯಿತು. 1991ರಲ್ಲಿ ಸಮಾಜವಾದಿ ಸೋವಿತ್ ಒಕ್ಕೂಟಕ್ಕೆ ಆದ ಹಿನ್ನಡೆ, ಪೂರ್ವ ಯೂರೋಪ್

ರಾಷ್ಟ್ರಗಳಲ್ಲಿನ ಸಮಾಜವಾದಿ ವ್ಯವಸ್ಥೆ ಕಳಚಿ ಹಾಕಿದ್ದು 'ಬೇರೆ ಯಾವುದೇ ಪರ್ಯಾಯವಿಲ್ಲ' (There Is No Alternative - TINA) ಎಂಬ ಅಂಶವನ್ನು ಮುಂದೆ ಮಾಡಿ ಹಂತ ಹಂತವಾಗಿ ಸಾರ್ವಜನಿಕ ಉದ್ದಿಮೆಗಳನ್ನು ಕಳಚಿ ಹಾಕುವ ಪ್ರಕ್ರಿಯೆ ಆರಂಭಿಸಲಾಯಿತು.

ಭಾರತದಲ್ಲೂ ಮತ್ತು ರಾಜ್ಯದಲ್ಲೂ ವಿವಿಧ ಹಂತಗಳಲ್ಲಿ ಅದನ್ನು ಸಾಧಿಸಲು ವಿವಿಧ ಸರ್ಕಾರಗಳು ವಿವಿಧ ರೀತಿಯ ಕಸರತ್ತನ್ನು ನಡೆಸುತ್ತಾ ಬಂದವು. ಈ ನಿಟ್ಟಿನಲ್ಲಿ ಸರ್ಕಾರಗಳ ವಿತ್ತೀಯ ಕೊರತೆಗಳನ್ನು ಸರಿದೂಗಿಸಲು FRBM (ವಿತ್ತೀಯ ಸಂಬಂಧ ಮತ್ತು ಬಜೆಟ್ ನಿರ್ವಹಣೆ) ಕಾಯ್ದೆಯನ್ನು ರೂಪಿಸಿ ಸರ್ಕಾರಗಳ ವೆಚ್ಚದ ಮೇಲೆ ನಿರ್ಬಂಧ ಹೇರಲಾಯಿತು. ಖರ್ಚು ಸರಿದೂಗಿಸಲು ಸರ್ಕಾರಗಳು ಕಂಡುಕೊಂಡ ಸುಲಭ ದಾರಿ ಸರ್ಕಾರಿ ಸಂಸ್ಥೆ ಸಾರ್ವಜನಿಕ ಉದ್ದಿಮೆಗಳ ಮಾರಾಟ ಮತ್ತು ಅದರಿಂದ ಬರುವ ಹಣವನ್ನು ಬಜೆಟ್ ವೆಚ್ಚಕ್ಕೆ ಬಳಸುವ ದಾರಿ. ಅದಕ್ಕೆ ಇಟ್ಟ ಹೆಸರೇ ‘ಹೂಡಿಕೆ ಹಿಂತೆಗೆತ’ (Disinvestment) ಅಥವಾ 'ಶೇರು ವಿಕ್ರಯ'. ಅದಕ್ಕೆಂದು ರೂಪಿಸಿದ ನೀತಿಯೇ ‘ಹೂಡಿಕೆ ಹಿಂತೆಗೆತ’ ಅಥವಾ 'ಶೇರು ವಿಕ್ರಯ' ನೀತಿ.


ಈ ನೀತಿಗಳ ಭಾಗವಾಗಿ 1999ರಿಂದ 2004 ರವರೆಗಿನ ಕೇಂದ್ರದ ಎನ್‌ಡಿಎ ಸರ್ಕಾರವು ಮೊದಲ ಬಾರಿಗೆ ಸಚಿವ ಸಂಪುಟದಲ್ಲಿ ‘ಹೂಡಿಕೆ ಹಿಂತೆಗೆತ’ (ಶೇರು ವಿಕ್ರಯ) ಸಚಿವರು, ಸಚಿವಾಲಯವನ್ನು ಹೊಂದಿತ್ತು. ಅದುವರೆಗೆ ಭಾರತದಲ್ಲಿ ಇದ್ದದ್ದು ಕೈಗಾರಿಕಾ ಸಚಿವರು ಮತ್ತು ಸಚಿವಾಲಯ. ಅದರ ಮುಖ್ಯ ಕೆಲಸ ಸಾರ್ವಜನಿಕ ಉದ್ದಿಮೆಗಳಲ್ಲಿ ಹಣ ಹೂಡಿಕೆ ಮಾಡಿ ಕೈಗಾರಿಕೆಗೆ ಉತ್ತೇಜನ ಕೊಡುವುದು. ಮೊದಲ ಬಾರಿಗೆ ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡುವ ಮೂಲಕ ಸಾರ್ವಜನಿಕ ಹೂಡಿಕೆ ಹಿಂತೆಗೆಯಲು (ಮತ್ತು ಆ ಮೂಲಕ ಕೈಗಾರಿಕೀಕರಣಕ್ಕೆ ತಿಲಾಂಜಲಿ ಕೊಡಲು) ಒಬ್ಬ ಸಚಿವ ಮತ್ತು ಒಂದು ಸಚಿವ ಖಾತೆ ಸೃಷ್ಟಿಸಲಾಯಿತು. 2004 ರಿಂದ 2008ರವರೆಗೆ ಎಡಪಕ್ಷಗಳ ಬಾಹ್ಯ ಬೆಂಬಲದೊಂದಿಗೆ ಕೇಂದ್ರದಲ್ಲಿದ್ದ ಗಕಂ–1 ಸರ್ಕಾರವು ಎಡಪಕ್ಷಗಳ ಬೇಡಿಕೆಯಂತೆ ‘ಶೇರು ವಿಕ್ರಯ’ ಸಚಿವರನ್ನು ಹೊಂದಿರಲಿಲ್ಲ. ಆದರೆ ಶೇರು ವಿಕ್ರಯ ಇಲಾಖೆ ಉಳಿಯಿತು. ಹಿಂದೆ ಕಾರ್ಖಾನೆಗಳನ್ನು ಯೋಜನ ಆಯೋಗವನ್ನು ಭಾಗವಾಗಿ ಸ್ಥಾಪಿಸಲಾಗುತ್ತಿತ್ತು. ಆದರೆ ಇದೀಗ ಕೇಂದ್ರದ ಎನ್‌ಡಿಎ ಮೋದಿ–01 ಮತ್ತು 02 ಸರ್ಕಾರದ ಕಾಲಾವಧಿಯಲ್ಲಿ ಯೋಜನಾ ಆಯೋಗ ಕಳಚಿ ಹಾಕಿ ಸ್ಥಾಪಿಸಲಾಗಿರುವ ನೀತಿ ಆಯೋಗವು ಪ್ರತಿ ಹಣಕಾಸು ವರ್ಷದಲ್ಲಿ ಶೇರು ವಿಕ್ರಯದಿಂದ ಎಷ್ಟು ಹಣವನ್ನು ಸರ್ಕಾರಕ್ಕೆ ಕ್ರೋಡೀಕರಿಸಬೇಕು, ಅದಕ್ಕಾಗಿ ಯಾವ ಯಾವ ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡಬೇಕೆಂಬ ಗುರಿಯನ್ನು ನಿಗದಿಪಡಿಸುತ್ತದೆ.

NDA ಮೋದಿ 2.0 ಸರ್ಕಾರದ ಆರಂಭದ 100 ದಿನಗಳಲ್ಲೇ ಸಾರ್ವಜನಿಕ ಉದ್ದಿಮೆಗಳನ್ನು ಪೂರ್ಣವಾಗಿ ಮಾರಾಟ ಮಾಡಬೇಕು ಅಥವಾ ಅದರ ಬಹುಪಾಲು ಶೇರುಗಳನ್ನು ವಿಕ್ರಯ ಮಾಡಬೇಕು ಎಂಬ ಗುರಿಯನ್ನು ನೀತಿ ಆಯೋಗ ನಿಗದಿಪಡಿಸಿತ್ತು. 100 ದಿನಗಳಲ್ಲಿ ಸಾಧಿಸಲಾಗದ್ದನ್ನು ಅದಕ್ಕೆ ತೊಡರಾಗಿದ್ದ ಜನತೆಯ ಪ್ರತಿರೋಧಕ್ಕೆ ಕೋವಿಡ್–19 ಹೆಸರಿನಲ್ಲಿ ಲಾಕ್ಡೌನ್ ಒಡ್ಡಿ, ನವ ಉದಾರವಾದವನ್ನು ನವೋತ್ಸಾಹದೊಂದಿಗೆ ಅನ್‌ಲಾಕ್ ಮಾಡಿದೆ.


ರಾಜ್ಯದಲ್ಲೂ ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆ ಉತ್ತಮ ಪಡಿಸುವ ನಿಟ್ಟಿನಲ್ಲಿ 2002ರಲ್ಲಿ ನೇಮಿಸಿದ್ದ ಐಎಎಸ್ ಅಧಿಕಾರಿ ಶ್ರೀ ಪಿ. ಪದ್ಮನಾಭನ್ ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಬ್ಯೂರೋವನ್ನು ‘ಶೇರು ವಿಕ್ರಯ ಮತ್ತು ಸಾರ್ವಜನಿಕ ಉದ್ದಿಮೆಗಳ ಸುಧಾರಣ ಇಲಾಖೆ’ (DDPER) ಎಂದು ಮರುನಾಮಕರಣ ಮಾಡಲಾಯಿತು. ಸಾರ್ವಜನಿಕ ಉದ್ದಿಮೆಗಳ ಶೇರು ವಿಕ್ರಯ, ಮುಚ್ಚುವಿಕೆ, ಖಾಸಗೀಕರಣ ಮತ್ತು ವಿಲೀನ ಕುರಿತು ಇರುವ ಸಮಸ್ಯೆಗಳನ್ನು ಪರಿಹರಿಸುವುದು ಈ ಇಲಾಖೆಯ ಕೆಲಸವಾಯಿತು. 2005ರಲ್ಲಿ ಕೇಂದ್ರದಲ್ಲಿ ಆದ ನೀತಿಗಳ ಬದಲಾವಣೆಯ ಪರಿಣಾಮವಾಗಿ ಇಲಾಖೆಯ ಹೆಸರನ್ನು 'ಸಾರ್ವಜನಿಕ ಉದ್ದಿಮೆಗಳ ಇಲಾಖೆ' ಎಂದು

ಪುಟ 10 ಕ್ಕೆ

ಕೋಷ್ಟಕ–3 : ವಲಯವಾರು ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ಹೂಡಿಕೆ (ಕೋಟಿ ರೂ.ಗಳಲ್ಲಿ)



ಕೋಷ್ಟಕ–1 ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ಒಟ್ಟು ಹೂಡಿಕೆ (ಕೋಟಿ ರೂಗಳಲ್ಲಿ)



ಕೋಷ್ಟಕ–2 : ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ವಲಯವಾರು ಹೂಡಿಕೆ

ಸಂಖ್ಯೆ	ವಲಯದ ಹೆಸರು	ಸರ್ಕಾರಿ ಕಂಪನಿಗಳು		ಶಾಸನಾತ್ಮಕ ನಿಗಮಗಳು	ಒಟ್ಟು	ಹೂಡಿಕೆ (ಕೋಟಿ ರೂಗಳಲ್ಲಿ)
		ಕಾರ್ಯ ನಿರ್ವಹಿಸುತ್ತಿರುವ	ಕಾರ್ಯ ನಿರ್ವಹಿಸದಿರುವ			
1	ಕೃಷಿ ಮತ್ತು ಸಂಬಂಧಿತ	12	5	1	18	439.82
2	ಹಣಕಾಸು	14	-	1	15	4,835.46
3	ಮೂಲಸೌಕರ್ಯ	21	-	-	21	53,558.57
4	ತಯಾರಿಕೆ	19	7	-	26	1,086.43
5	ಇಂಧನ	11	-	-	11	42,192.96
6	ಸೇವೆ	4	-	4	8	1,604.05
7	ಇತರೆ	3	-	-	3	0.11
	ಒಟ್ಟು	84	12	6	102	103,717.40

ಕೋಷ್ಟಕ–4 : ಈಕ್ವಿಟಿ, ಸಾಲಗಳು, ಅನುದಾನ ಮತ್ತು ಸಬ್ಸಿಡಿಗಳಿಗೆ ಬಜೆಟ್‌ನಿಂದ ನೀಡಿಕೆಗಳು (ಕೋಟಿ ರೂ.ಗಳಲ್ಲಿ)



‘ಆತ್ಮನಿರ್ಭರ್’ಗೆ ಜನತೆಯ ಆಸ್ತಿ ಮೈ ಶುಗರ್ ಬಲಿ?!... ಪುಟ 9 ರಿಂದ

ಬದಲಾಯಿಸಲಾಯಿತು.

ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಕುರಿತು ಲೆಕ್ಕಪರಿಶೋಧಕರ 2017 ಮಾರ್ಚ್‌ಗೆ ಅಂತ್ಯವಾದ ವಾರ್ಷಿಕ ಲೆಕ್ಕಪರಿಶೋಧನೆಯಂತೆ ರಾಜ್ಯದಲ್ಲಿ 90 ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಉದ್ದಿಮೆಗಳಿವೆ. ಅವುಗಳಲ್ಲಿ 84 ಕಂಪನಿಗಳು ಮತ್ತು 6 ಶಾಸನಾತ್ಮಕ ಕಾರ್ಪೋರೇಶನ್‌ಗಳಿವೆ. 12 ಕಾರ್ಯನಿರ್ವಹಿಸದಿರುವ ಸಾರ್ವಜನಿಕ ಉದ್ದಿಮೆಗಳಿವೆ. ಒಟ್ಟು 102 ಉದ್ದಿಮೆಗಳಿವೆ. ಇವುಗಳಲ್ಲಿ 1.76 ಲಕ್ಷ ಕಾರ್ಮಿಕರಿದ್ದಾರೆ. 2016-17 ರಲ್ಲಿ ಈ ಉದ್ದಿಮೆಗಳ ಒಟ್ಟು ವಹಿವಾಟು ರೂ.56,147 ಕೋಟಿಗಳಾಗಿವೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 5.05 ರಷ್ಟಾಗಿದೆ. ಒಟ್ಟಾರೆ ರೂ.299.26 ಕೋಟಿ ಲಾಭವನ್ನು ವರ್ಷಾಂತ್ಯದಲ್ಲಿ ಹೊಂದಿವೆ.

ಮಾರ್ಚ್ 2017 ರ ವೇಳೆಗೆ ಇವುಗಳಲ್ಲಿನ ಒಟ್ಟು ಬಂಡವಾಳ ಹೂಡಿಕೆ (ಬಂಡವಾಳ ಮತ್ತು ದೀರ್ಘಾವಧಿ ಸಾಲ) ರೂ.1,03,717.40 ಕೋಟಿಯಾಗಿದೆ. ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿನ ವಾರ್ಷಿಕ ಹೂಡಿಕೆ ಹೆಚ್ಚಳವನ್ನು ಕೋಷ್ಟಕ 1ರಲ್ಲಿ, ವಲಯವಾರು ಹೂಡಿಕೆಯನ್ನು ಕೋಷ್ಟಕ 2 ಮತ್ತು 3ರಲ್ಲಿ ಮತ್ತು ರಾಜ್ಯ ಬಜೆಟ್‌ನಿಂದ ನೀಡಲಾಗಿರುವ ಈಕ್ವಿಟಿ, ಸಾಲಗಳು, ಅನುದಾನ ಮತ್ತು ಸಬ್ಸಿಡಿಗಳ ವಿವರವನ್ನು ಕೋಷ್ಟಕ-4ರಲ್ಲಿ ಗಮನಿಸಬಹುದಾಗಿದೆ.

ರಾಜ್ಯ ಸರ್ಕಾರವು ಫೆಬ್ರವರಿ 2001ರಲ್ಲಿ ರಾಜ್ಯದ ಸಾರ್ವಜನಿಕ ವಲಯದ ಸುಧಾರಣೆ ಮತ್ತು ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಕುರಿತು ಸಮಗ್ರ ನೀತಿಯನ್ನು ಅಂಗೀಕರಿಸಿದೆ. ಅದರಂತೆ 31 ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲು, ಪುನರಚಿಸಲು ಮತ್ತು ಖಾಸಗೀಕರಣಗೊಳಿಸಲು ಗುರುತಿಸಿದೆ. 7 ಕಂಪನಿಗಳನ್ನು 2017 ಸೆಪ್ಟೆಂಬರ್ ಅಂತ್ಯದ ವೇಳೆಗೆ ವಿಸರ್ಜಿಸಿದೆ ಅಥವ ಇತರೆ ಕಂಪನಿಗಳಲ್ಲಿ ವಿಲೀನಗೊಳಿಸಿದೆ. 24 ಕಂಪನಿಗಳ ಮುಚ್ಚುವಿಕೆ, ಖಾಸಗೀಕರಣ ಅಥವಾ ಪುನರಚಿಸುವ ಕುರಿತು ಕೈಗೊಂಡ ಕ್ರಮಗಳ ವರದಿಯಂತೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕಂಪನಿಗಳ ಖಾಸಗೀಕರಣಗೊಳಿಸಲು ಗುರುತಿಸಿದ್ದ 8 ಕಂಪನಿಗಳಲ್ಲಿ 6 ಕಂಪನಿಗಳನ್ನು ಖಾಸಗೀಕರಿಸಲು ಆದೇಶ ಹೊರಡಿಸಲಾಗಿದೆ. ಉಳಿದ 2 ಕಂಪನಿಗಳಾದ ಮೈಶುಗರ್ ಕಂಪನಿ ಮತ್ತು ಮೈಸೂರು ಪೇಪರ್ ಮಿಲ್‌ಗಳ ಕುರಿತು ಆದೇಶವನ್ನು ಇನ್ನು ಹೊರಡಿಸಿಲ್ಲ ಎಂದು 2018 ರಲ್ಲಿ ಪ್ರಕಟಿಸಲಾಗಿರುವ ವರದಿಯು ಗುರುತಿಸಿದೆ.

ಅದರ ಮುಂದುವರಿದ ಭಾಗವಾಗಿ 9.1.2020 ರಂದು ಮೈಶುಗರ್ ಕಂಪನಿ ಎಂ.ಡಿ. ಪತ್ರ ಆಧರಿಸಿ 9.3.2020 ನಡೆದ ಸಭೆಯ ರಾಜ್ಯ ಸರ್ಕಾರದ ನಡಾವಳಿಗಳಂತೆ 2020-21 ನೇ ಹಂಗಾಮಿನಿಂದ ಮೈಶುಗರ್ ಕಾರ್ಖಾನೆಯನ್ನು LROT (Lease Rehabilitate Operate Transfer) ಆಧಾರದ ಮೇಲೆ ಖಾಸಗಿಯವರಿಗೆ 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ರಾಜ್ಯ ಸರ್ಕಾರವು ಮುಂದಾಗಿದೆ. ಇದರ ಪೂರ್ವದಲ್ಲಿ 2015-16, 2016-17 ಮತ್ತು 2019-20 ರ ಸಾಲಿನಲ್ಲಿ ತನ್ನ ನವ ಉದಾರವಾದಿ ನೀತಿಗಳ ಭಾಗವಾಗಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿದೆ. ಕಬ್ಬು ಬೆಳೆಯುವ ರೈತರು ತಮ್ಮ ಕಬ್ಬನ್ನು ಅರೆಯಲು ‘ಏನಾದರೂ ಮಾಡಿ ಕಾರ್ಖಾನೆಯಲ್ಲಿ ಅರೆಯುವುದನ್ನು ಪ್ರಾರಂಭಿಸಿ’ ಎಂದು ಅಂಗಲಾಚುವಂತೆ ಮಾಡಲು ಈ ರೀತಿ ಮಾಡಿದೆ. ತನ್ನ ಖಾಸಗೀಕರಣದ ಮುನ್ನುಡಿಯಾದ ಕಾರ್ಯಾಚರಣೆ ಮತ್ತು ನಿರ್ವಹಣೆ (O & M) ಯನ್ನು, ಸ್ವತಃ ರೈತರೇ ಕುರುಡುಗಣ್ಣಿಗಿಂತ ಮೆಳ್ಳಗಣ್ಣೆ ಲೇಸೆಂದು ಒಪ್ಪಿಕೊಳ್ಳುವಂತೆ ಮಾಡುವ ಹುನ್ನಾರದ ಭಾಗವಾಗಿಯೇ, ರಾಜ್ಯ ಸರ್ಕಾರವು ನಷ್ಟದ ನೆಪಮಾಡಿ ಕಬ್ಬು ಅರೆಯುವುದನ್ನು ಮೂರು ವರ್ಷಗಳಿಂದ ನಿಲ್ಲಿಸಿದೆ.

ಸಣ್ಣಮಟ್ಟ ರಿಪೇರಿಯೊಂದಿಗೆ ಕಬ್ಬು ಅರೆಯುವುದನ್ನು ಕೋಜೆನ್ ಸಹಿತ ಪ್ರಾರಂಭಿಸಬಹುದು ಎಂಬ 2013-14 ಸಾಲಿನ 80ನೇ ವಾರ್ಷಿಕ ವರದಿಯನ್ನು 22.6.2020 ರಂದು ಮೈಶುಗರ್ ಆಡಳಿತ ಮಂಡಳಿ ಮಂಡಿಸಿದೆ. ಆದರೂ 31.12.2019ರ ಅಂತ್ಯಕ್ಕೆ ಕಂಪನಿ ಹೊಂದಿರುವ ರೂ. 103.55 ಕೋಟಿ ರೂಗಳ ಸಾಲ ಮತ್ತು ಜವಾಬ್ದಾರಿಗಳು ಮತ್ತು 2014-15ರ ಅಂತ್ಯಕ್ಕೆ ಕ್ರೋಡಿಕೃತ ನಷ್ಟ ರೂ. 529.43 ಕೋಟಿ ರೂಗಳ ನೆಪಮಾಡಿ ಖಾಸಗೀಕರಿಸಲು ರಾಜ್ಯ ಸರ್ಕಾರವು ಮುಂದಾಗಿದೆ. ಅದೇ ರಾಜ್ಯ ಸರ್ಕಾರವು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ರಾಜ್ಯ ಸರ್ಕಾರದ ಅತಿಥಿ ಗೃಹ ನಿರ್ಮಾಣಕ್ಕೆ 200 ಕೋಟಿ ರೂಗಳ ಖರ್ಚು ಮಾಡಲು ಮುಂದಾಗಿರುವ ಕ್ರಮವು ಸದರಿ ರಾಜ್ಯ ಸರ್ಕಾರದ ಆದ್ಯತೆ ಯಾವುದಾಗಿದೆ ಎಂಬುದನ್ನು ತೋರುತ್ತದೆ.

ಭಾರತದಲ್ಲಿನ ಪ್ರಧಾನ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಸಕ್ಕರೆ ಉದ್ದಿಮೆಯು 2ನೇ ಸ್ಥಾನದಲ್ಲಿದೆ. 12 ಡಿಸೆಂಬರ್ 1986 ರಂದು ಭಾರತ ಸರ್ಕಾರವು ಪ್ರಕಟಿಸಿದ ಸಕ್ಕರೆ ಉದ್ದಿಮೆ ಕುರಿತ ಉದಾರೀಕರಣ ನೀತಿಯು 7ನೇ ಪಂಚ ವಾರ್ಷಿಕ ಯೋಜನೆಯ ಭಾಗವಾಗಿ ಹೆಚ್ಚುವರಿ ಕಬ್ಬು ಅರೆಯುವ ಸಾಮರ್ಥ್ಯ ಮತ್ತು ಖಾಸಗಿ ಕಾರ್ಖಾನೆಗಳಿಗೆ ಪರವಾನಗಿ ನೀಡುವ ಕ್ರಮಗಳನ್ನು ಸಡಿಲಗೊಳಿಸಿತು. 1993 ರ ನಂತರ ನಿಯಂತ್ರಣ ಕಳಚಿ ಹಾಕಿತು. 1998ರಲ್ಲಿ ಪರವಾನಗಿ ವ್ಯವಸ್ಥೆಯನ್ನು ಕ್ರಮೇಣ ಇಲ್ಲವಾಗಿಸಲು ಮುಂದಾಯಿತು. 2002ರಲ್ಲಿ ಸಕ್ಕರೆ ದಾಸ್ತಾನು ಮತ್ತು ವಿತರಣೆ ಮೇಲಿನ ಹಿಡಿತವನ್ನು ತೆಗೆದು ವಿತರಣೆ ಮೇಲಿನ ಹಿಡಿತವನ್ನು ಕಳಚಿ ಹಾಕಿತು. ರಾಷ್ಟ್ರದಲ್ಲಿ ತಲಾ ಸಕ್ಕರೆ ಬಳಕೆ ಹಾಗೂ ಬೇಡಿಕೆ ಹೆಚ್ಚುತ್ತಿರುವ ಕಾರಣ ಇದು ಅಗತ್ಯ ಎಂದಿತು. ವಾಸ್ತವದಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಅನುವುಗೊಳಿಸಿ, ಸರ್ಕಾರಿ ಹಾಗೂ ಸಹಕಾರಿ ಕಾರ್ಖಾನೆಗಳನ್ನು ಇಲ್ಲವಾಗಿಸುವ ಕಡೆಗೆ ಈ ನೀತಿಗಳು ಅನುವುಗೊಳಿಸಿದವು.

ಆರಂಭದಲ್ಲಿ ಸರ್ಕಾರಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ನಿಗದಿ ಪಡಿಸುತ್ತಿದ್ದ ಕಬ್ಬಿನ ದರ, ಅರೆಯುವ ದಿನ ಆಧರಿಸಿ ಖಾಸಗಿ ಕಂಪನಿಗಳು, ತಾವು ದರ ಹಾಗೂ ಅರೆಯುವ ದಿನ ಆರಂಭಿಸುತ್ತಿದ್ದವು. ಖಾಸಗಿ ಸಕ್ಕರೆ ಕಾರ್ಖಾನೆ ಮಾಲೀಕರು ಪಡೆದುಕೊಂಡ ರಾಜಕೀಯ ಶಕ್ತಿಯೊಂದಿಗೆ ನವ ಉದಾರವಾದದ ಸಹಾಯದಿಂದಾಗಿ, ಕೇಂದ್ರ ಸರ್ಕಾರ ನಿಗದಿಪಡಿಸುತ್ತಿದ್ದ ನ್ಯಾಯೋಚಿತ ಮತ್ತು ಲಾಭದಾಯಕ ದರ (FRP) ಮತ್ತು ರಾಜ್ಯ ಸರ್ಕಾರದ ರಾಜ್ಯ ಶಿಫಾರಸ್ಸು ದರ (SAP) ನಿಗದಿಯ ಮೇಲೆ ಪ್ರಭಾವ ಬೀರುತ್ತಿದ್ದರು. ಅವರು ವಿವಿಧ ಸಹಾಯ, ಪ್ರೋತ್ಸಾಹ ಧನ, ಸಬ್ಸಿಡಿಗಳನ್ನು ತಮ್ಮದಾಗಿಸಿಕೊಳ್ಳುತ್ತ ಸಕ್ಕರೆ ಉದ್ದಿಮೆ ಮಾರುಕಟ್ಟೆ ಮೇಲೆ ನಿಯಂತ್ರಣ ಸಾಧಿಸಲು ಮುಂದಾದರು. ಇದೀಗ ಖಾಸಗಿ ಸಕ್ಕರೆ ಮಾಲೀಕರ ಲಾಬಿಯು ರಾಜ್ಯ ಸರ್ಕಾರಗಳ ರಚನೆಯಲ್ಲಿ, ನೀತಿ ನಿರೂಪಣೆಯಲ್ಲಿ ಪ್ರಧಾನ ಪಾತ್ರವಹಿಸಲು ಮುಂದಾಗಿದೆ. ಮಾತ್ರವಲ್ಲ, ಶಾಸಕ ಮತ್ತು ಸಚಿವ ಸ್ಥಾನ ಪಡೆಯಲು ಕೈಗಾರಿಕಾ ಸಚಿವರ ಸ್ಥಾನವನ್ನು ತಮ್ಮ ವಶಕ್ಕೆ ಪಡೆಯುವ ಮಟ್ಟಕ್ಕೆ ಬಲಿಷ್ಠವಾಗಿದೆ. ಇದೀಗ ಸರ್ಕಾರಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ತಮ್ಮ ಕೈವಶ ಮಾಡಿಕೊಳ್ಳುವ O & M ಹಾದಿ ಹುಡುಕಿಕೊಂಡಿವೆ.

1931 ರಿಂದ 41ರ ದಶಕವು ಕರ್ನಾಟಕದ ಕೈಗಾರೀಕರಣದ ಇತಿಹಾಸದ ಸುವರ್ಣ ದಶಕವಾಗಿದೆ. 1913ರಲ್ಲಿ ರಾಜ್ಯದಲ್ಲಿನ ಸಂಪನ್ಮೂಲ ಕುರಿತು ಸರ್ವೇಕ್ಷಣೆಯನ್ನು ಅಂದಿನ ದಿವಾನರಾಗಿದ್ದ ಡಾ॥ ಸರ್ ಎಂ. ವಿಶ್ವೇಶ್ವರಯ್ಯರವರು ಕೈಗೊಂಡ ಅಧ್ಯಯನ, ಅವರ ಪ್ರಖ್ಯಾತ ಹೇಳಿಕೆ "ಕೈಗಾರಿಕೀಕರಣಗೊಳ್ಳಿ ಇಲ್ಲ ನಾಶವಾಗಿ" (Industrialise or Perish) ಎಂಬ ಹೇಳಿಕೆ, 1922ರಲ್ಲಿ ಪ್ರಾರಂಭಿಸಿದ ಸರ್ಕಾರದ "ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ" ಸಾರ್ವಜನಿಕ ಉದ್ದಿಮೆಗಳ ಆರಂಭಕ್ಕೆ ಅನುವುಗೊಳಿಸಿತು.

ಸ್ವಾತಂತ್ರ್ಯದ ನಂತರವು ಜವಾಹರ್‌ಲಾಲ್ ನೆಹರು ರವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ವತಂತ್ರಪೂರ್ವದಲ್ಲಿ ಅಂಗೀಕರಿಸಿದ್ದ ‘ಬಾಂಬೆ ಪ್ಲಾನ್’ ಆಧರಿಸಿ ಸಾರ್ವಜನಿಕ ಉದ್ದಿಮೆಗಳ ಆರಂಭಕ್ಕೆ ಮತ್ತು ಬಲಪಡಿಸಲು ಮುಂದಾಗಿದ್ದರು. ಅವರು "ಸಾರ್ವಜನಿಕ ಉದ್ದಿಮೆಗಳು ಭಾರತದ ಆಧುನಿಕ ದೇವಾಲಯಗಳು" ಎಂದು ಕರೆದಿದ್ದರು. ನೆಹರು ಆರ್ಥಿಕ ನೀತಿಯನ್ನು ‘ಪ್ರಭುತ್ವ ಸಮಾಜವಾದ – ಕಾಲ್ಪನಿಕ ಸಮಾಜವಾದ’ ಎಂದು ವ್ಯಾಖ್ಯಾನಿಸಬಹುದು. ಅಂದು ಭಾರತದಲ್ಲಿ ಬಂಡವಾಳಶಾಹಿ ಬೆಳೆದಿರಲಿಲ್ಲ. ಅದಕ್ಕೆ ಪ್ರಭುತ್ವ ಬಂಡವಾಳಶಾಹಿಯ ಬೆಳವಣಿಗೆಗೆ ಅನುವು ಮಾಡಿಕೊಟ್ಟಿತ್ತು. ಆದರೆ ಇಂದು ಭಾರತದಲ್ಲಿ ಬಂಡವಾಳಶಾಹಿಯು ಬೆಳೆದಿದೆ, ಬಹುರಾಷ್ಟ್ರೀಯ ಬಂಡವಾಳ, ಅಂತರಾಷ್ಟ್ರೀಯ ಹಣಕಾಸು ಬಂಡವಾಳ ಬೃಹತ್ತಾಗಿ ಬೆಳೆದು ನಿಂತಿವೆ. ಅವು ಸಾರ್ವಜನಿಕ ಉದ್ದಿಮೆಗಳನ್ನು ಕೊಳ್ಳುವ ಹಂತಕ್ಕೆ ಬೆಳೆದಿವೆ. ಮಾತ್ರವಲ್ಲ, ಜೂಜುಕೋರತನಕ್ಕೆ ಮುಂದಾಗಿವೆ. ಸಾರ್ವಜನಿಕ ಆಸ್ತಿ, ಉದ್ದಿಮೆ ವಶಪಡಿಸಿಕೊಳ್ಳಲು ಮುಂದಾಗಿವೆ.

ಅದಕ್ಕೆ ಅನುವಾಗುತ್ತಿದೆ ನವ ಉದಾರವಾದ. ಇಂದು ನವಉದಾರವಾದವು "ಖಾಸಗೀಕರಿಸಿ ಅಥವಾ ನಾಶವಾಗಿ" (Privatise or Perish) ಎನ್ನುತ್ತಿದೆ. ಈ ರೀತಿ ಬೆಳೆದು ಬಂದ ಕೈಗಾರೀಕರಣದ ಹಾದಿಯಲ್ಲಿ ಜನತೆಯ ಆಸ್ತಿಯಾದ ಮೈಶುಗರ್ ಕಾರ್ಖಾನೆಯನ್ನು ಬಲಿ ಪಡೆಯಲು ನವಉದಾರವಾದ ತುದಿಗಾಲಲ್ಲಿ ನಿಂತಿದೆ. ಅದರ ಮುಂದಡಿಯೆ O & M, ಖಾಸಗೀಕರಣಕ್ಕೆ ಮುನ್ನುಡಿ. ಹಾಗಾಗಿ O & M ಹಿಮ್ಮೆಟ್ಟಿಸಿ ಖಾಸಗೀಕರಣವನ್ನು ಆ ಮೂಲಕ ಅದಕ್ಕೆ ಆಧಾರವಾಗಿರುವ ನವ ಉದಾರವಾದವನ್ನು ಹಿಮ್ಮೆಟ್ಟಿಸಬೇಕಿದೆ. ಜನತೆಯ ಆಸ್ತಿಯಾದ ಮೈ ಶುಗರ್ ಕಂಪನಿಯನ್ನು ಸರ್ಕಾರಿ ಕಂಪನಿಯಾಗಿ ಉಳಿಸುವ ಹೊಣೆ ರಾಜ್ಯದ ಜನತೆಯದಾಗಿದೆ., ಮಂಡ್ಯ ಜನತೆಯ ಪಾತ್ರ ಮಹತ್ತರವಾಗಿದೆ. ●

‘ಸಾಂಕ್ರಾಮಿಕದ ನೆರಳು’: ಈ ನೋವಿನ ಪರಿಚಯವಿದೆಯೆ ನಿಮಗೆ?...... ಪುಟ 8 ರಿಂದ

ತೀವ್ರ ಪರಿಣಾಮ ಬೀರುತ್ತದೆ. ಅವರ ಗೋಳಿಗೆ ಕಿವಿಕೊಡುವವರಿಲ್ಲ.

ಮನೆಯಿಂದಲೇ ಕೆಲಸ -ಸೈಬರ್ ಅಪರಾಧಗಳು :

ಇವುಗಳ ಜೊತೆಗೇ ಸೈಬರ್ ಅಪರಾಧಗಳು ತೀವ್ರವಾಗಿ ಹೆಚ್ಚಿವೆ. ಲಾಕ್ ಡೌನ್ ಪ್ರಾರಂಭದಲ್ಲಿಯೇ ದೆಹಲಿಯಲ್ಲಿ ಮೇಲ್ವರ್ಗದ ಶ್ರೀಮಂತ ಕುಟುಂಬಗಳ ಶ್ರೀಮಂತರ ಶಾಲೆಗಳಿಗೆ ಹೋಗುತ್ತಿದ್ದ ಬಾಲಕರು ತಮ್ಮದೇ ಶಾಲೆಯ ಸಹ ವಿದ್ಯಾರ್ಥಿನಿಯರ ಕುರಿತು ಲೈಂಗಿಕ ಚೇಷ್ಟೆಗಳ, ಕೀಳು ಅಭಿರುಚಿಯ ಕೆಟ್ಟ ಕೆಟ್ಟ ಸಂದೇಶಗಳನ್ನು ಹಾಕಿರುವ, ಅತ್ಯಾಚಾರದ ಬೆದರಿಕೆಗಳನ್ನು ಹಾಕುತ್ತಿದ್ದುದು ಮುಂತಾಗಿ ‘ಬಾಯ್ಸ್ ರೂಂ’ ಘಟನೆಯೆಂದೇ ಹೆಸರು ಪಡೆದ ಕುಖ್ಯಾತ ಘಟನೆ ನಡೆಯಿತು. ಈ ತೆರನ ಸೈಬರ್ ಅಪರಾಧದ ಘಟನೆಗಳು ಇತ್ತೀಚೆಗೆ ತೀರಾ ಹೆಚ್ಚಾಗಿದೆ. ನಮ್ಮದೇ ರಾಜ್ಯದಲ್ಲಿ ಆನ್ ಲೈನ್ ಕೆಲಸ ಮಾಡುವ ಅನಿವಾರ್ಯತೆಗೆ ಒಳಗಾದ ಯುವತಿಯರು ಮಹಿಳೆಯರು ಕಂಪನಿಗಳ ಪುರುಷ ಸಹೋದ್ಯೋಗಿಗಳು ಕೆಲಸದ ನೆಪದಲ್ಲಿ ಕರೆ ಮಾಡಿ ಕೊಡುತ್ತಿರುವ ವರ್ಚುಯಲ್ ಕಿರುಕುಳದ ವರದಿಯಾಗಿದೆ. ದಿನಕ್ಕೊಮ್ಮೆಯಾದರೂ ನಿನ್ನೊಡನೆ ಮಾತನಾಡದರೆ ದಿನವೆಲ್ಲ ಉಲ್ಲಾಸವೆಂದವರು, ವಿಡಿಯೋ ಚಾಟ್ ಗೆ ಬಾ ಎಂದು ಆಹ್ವಾನಿಸುವವರು, ಹೊತ್ತಲ್ಲದ ಹೊತ್ತಿನಲ್ಲಿ ಕಂಪನಿಯ ಕೆಲಸದ ನೆಪ ಮಾಡಿ ಕರೆ ಮಾಡುವುದು ಇವೆಲ್ಲ ವರದಿಯಾಗಿದೆ. ಮತ್ತಿಲ್ಲಿ ಹೆಣ್ಣೇ ಬಲಿ.

ಮನೆಯಿಂದಲೇ ಕೆಲಸ ಮಾಡಲೇ ಬೇಕಾದ ಅನಿವಾರ್ಯತೆ. ಅದು ಕುಟುಂಬದ ಆರ್ಥಿಕತೆಗೂ ಅಗತ್ಯ. ಆಕೆಯ ಸಬಲತೆಯ ಭಾಗ ಕೂಡ. ಆದರೆ ಹೊತ್ತಲ್ಲದ ಹೊತ್ತಿನಲ್ಲಿ, ಅನಗತ್ಯ ಕರೆಗಳನ್ನು ಸ್ವೀಕರಿಸುವುದು ಉಂಟು ಮಾಡುವ ಕಿರಿಕಿರಿ ಸ್ವತಃ ಆಕೆಗೆ, ಅನುಮಾನ ಹುಟ್ಟುವುದು ಮನೆಯವರಿಗೆ, ಸ್ವೀಕರಿಸದಿದ್ದರೆ ಕೆಲಸವನ್ನೇ ಕಳೆದುಕೊಳ್ಳುವ ಅಪಾಯ ಕೂಡ ಹೀಗೆ ಅತ್ತ ದರಿ ಇತ್ತ ಪುಲಿ ಎನ್ನುವ ಸ್ಥಿತಿ ಆಕೆಯದು. ಆನ್‌ಲೈನ್‌ನಲ್ಲಿ ಕೂಡಾ ಲೈಂಗಿಕ ಚೇಷ್ಟೆ ಮಾಡುವ ಈ ಪ್ರವೃತ್ತಿಗೆ ಇಂಬು ಕೊಡುವಂತೆ ತುಂಬ ಸುಲಭವಾಗಿ ಆನ್‌ಲೈನ್ ನಲ್ಲಿಯೇ ಲಭ್ಯವಾಗುವ ಅಶ್ಲೀಲ ಅಸಭ್ಯ ಲೈಂಗಿಕವಾಗಿ ಉದ್ರೇಕಕಾರೀ ಚಿತ್ರಗಳು, ಫಿಲ್ಮ ಗಳು ಹೇರಳವಾಗಿ ದೊರೆಯುತ್ತಿರುವುದೂ ಇನ್ನಷ್ಟು ಪ್ರಚೋದನೆ ಕೊಡುತ್ತದೆ ಎಂಬುದನ್ನು ಗಮನಿಸಲಾಗಬೇಕು. ಒಂದೆಡೆ ಮನುವಾದಿ ಸಿದ್ಧಾಂತವನ್ನು ಹಿಂದೂ ಸಂಸ್ಕೃತಿಯ ಹೆಸರಿನಲ್ಲಿ ಹೇರುತ್ತ ಮಹಿಳೆಯರು ವಿಧೇಯರಾಗಿಯೇ ಇರಬೇಕೆನ್ನುವ ಧೋರಣೆಯನ್ನು ಪ್ರತಿಪಾದಿಸುತ್ತಲೇ ಮಹಿಳೆಯನ್ನು ಭೋಗವಸ್ತುವನ್ನಾಗಿ ಬಳಸುವುದು ಕೂಡಾ ಮುಂದುವರೆದಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಇದು ಇನ್ನಷ್ಟು ಹೆಚ್ಚಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ಚಕಾರ ಶಬ್ದ ಉಸುರಿಲ್ಲ. ಹಲವಾರು ರಾಜ್ಯ ಸರ್ಕಾರಗಳೂ ಮೌನವಹಿಸಿವೆ.

ಹೆಚ್ಚುತ್ತಿರುವ ಮಾನಸಿಕ ಕ್ಷೋಭೆ :

ಕಣ್ಣಿಗೆ ಕಾಣುವ, ಕಿವಿಗೆ ಕೇಳುವ, ಸ್ಪರ್ಶಕ್ಕೆ ಸಿಗುವ ದೌರ್ಜನ್ಯಗಳದೊಂದು ಮಾದರಿಯಾದರೆ, ಯಾವ ಅನುಭವಕ್ಕೂ ದಕ್ಕದ ಆದರೆ ಮಾನಸಿಕವಾಗಿ ಮಹಿಳೆಯರನ್ನು ತೀವ್ರವಾಗಿ ಹಿಂಸಿಸುವ ದೌರ್ಜನ್ಯಗಳಿಗೆ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಬಲಿಯಾಗುತ್ತಿದ್ದಾರೆ. ಇದನ್ನು ಯಾರೂ ಹೆಚ್ಚಾಗಿ ಗಮನಿಸುತ್ತಿಲ್ಲ. ಆದರೆ ಇದು ಅತ್ಯಂತ ಅಪಾಯದ ಘಟ್ಟವನ್ನು ತಲುಪುತ್ತಿದೆ. ಇತ್ತ ಗಂಭೀರ ಗಮನದ ಅಗತ್ಯವಿದೆ.

ಈ ಸಮಾಜ ನಿರ್ಭಯಾ ಪ್ರಕರಣದಲ್ಲಿಯೂ ಅಥವಾ 70ರ ದಶಕದ ಮಥುರಾ ಪ್ರಕರಣದಲ್ಲಿಯೂ ಹೆಣ್ಣಿನ ನಡೆ ನುಡಿ ಉಡುಪು ವಿಹಾರ ವಿಚಾರಗಳನ್ನು ಆಕೆಯ ಮೇಲಿನ ದೌರ್ಜನ್ಯ ಅತ್ಯಾಚಾರಗಳಿಗೆ ಕಾರಣವೆನ್ನುತ್ತದಲ್ಲ ಈಗ ಈ ವಿಕಾರಗಳಿಗೆ ಏನು ಹೇಳುತ್ತದೆ. ತನ್ನ ಚಾಪಲ್ಯವನ್ನು ಈಡೇರಿಸಿಕೊಳ್ಳಲೆಂದೇ ಹೆಣ್ಣುಗಳಿದ್ದಾರೆಂದು ಕೊಂಡವರಿಗೆ ಬಟ್ಟೆ ಇದ್ದರೂ ಇಲ್ಲದಿದ್ದರೂ, ಎದುರಿಗೆ ಇದ್ದರೂ ಇಲ್ಲದಿದ್ದರೂ ಎಲ್ಲವೂ ಒಂದೇ..ಓ ಸಮಾಜವೇ ಬದಲಿಸಬೇಕು ನಿನ್ನ ಆಲೋಚನೆಗಳ ಧಾಟಿಯನ್ನು.

ಆದರೆ ಸ್ವಸ್ಥ ಸಮಾಜದ ಕಲ್ಪನೆಯನ್ನು ಹೊಂದಿರುವವರು ಈಗ ಸುಮ್ಮನಿರಲಾಗದು. ಮಹಿಳೆಯರ ಘನತೆಗೆ ಕುಂದು ತರುವ ಯಾವುದೇ ಕ್ರಿಯೆಗೆ ಅವಕಾಶವಿರದಂಥಹ ಸಮಾಜ ನಿರ್ಮಾಣದತ್ತ ದೃಷ್ಟಿ ಹರಿಸಲಾಗಬೇಕು. ಕೊವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದ ನೀಡಬೇಕೆನ್ನುವ ಪರಿಹಾರದ ಪ್ಯಾಕೇಜ್ ನಲ್ಲಿ ಮಹಿಳೆಯ ಮುಖವೂ ಕಾಣಬೇಕು. ■

ಶತಮಾನೋತ್ಸವ ಲೇಖನ ಮಾಲೆ-34

ಸುಪ್ರಸಿದ್ಧ ತೆಲಂಗಾಣ ಜನರ ಸಶಸ್ತ್ರ ಹೋರಾಟದ ಪಾಠಗಳು

ತೆಲಂಗಾಣ ರೈತರ ಬಂಡಾಯವು ಭಾರತದ ಕಮ್ಯುನಿಸ್ಟ್ ಚಳುವಳಿಗೆ ಬಹು ಮಹತ್ತರವಾದ ಕೊಡುಗೆ ನೀಡಿತಲ್ಲದೆ, ಮಧ್ಯಯುಗದ ಅಸಫ್‌ಜಾಹಿ ವಂಶದ ಸರ್ವಾಧಿಕಾರಿ ಆಳ್ವಿಕೆಯ ಬೇರನ್ನೇ ಅಲುಗಾಡಿಸಿತು, ಅದಕ್ಕೆ ಮಾರಣಾಂತಿಕ ಪೆಟ್ಟನ್ನು ಕೊಟ್ಟಿತು, ದೇಶದಲ್ಲಿ ಕಾರ್ಷಿಕ ಕ್ರಾಂತಿಯ ಪ್ರಶ್ನೆಗಳನ್ನು ಮುನ್ನೆಲೆಗೆ ತಂದು, ಕಾಂಗ್ರೆಸ್ ನಾಯಕರ ಒಲ್ಲದ ಕೈಗಳೂ ಹಲವಾರು ಕಾರ್ಷಿಕ ಸುಧಾರಣೆಗಳನ್ನು ಅಲ್ಪ-ಸ್ವಲ್ಪ ಮಟ್ಟಿಗಾದರೂ ತರುವಂತೆ ಬಲವಂತ ಮಾಡಿತು ಮತ್ತು ಒಂದು ರಾಷ್ಟ್ರೀಯ, ಪ್ರಜಾಸತ್ತಾತ್ಮಕ, ಹಾಗೂ ಭಾಷಾವಾರು ಆಧಾರದಲ್ಲಿ ಭಾರತದ ರಾಜಕೀಯ ಭೂಪಟವನ್ನು ಮರುರೂಪಿಸುವಂತೆ ಮಾಡುವಲ್ಲಿಯೂ ಅಸಾಧಾರಣವಾದ ಕೊಡುಗೆಯನ್ನು ನೀಡಿತು.



ಕನ್ನಡಕ್ಕೆ: ಟಿ. ಸುರೇಂದ್ರರಾವ್

'ಆರು ವಾರಗಳೊಳಗಡೆ ಹೈದರಾಬಾದ್ ರಾಜ್ಯದೆಲ್ಲೆಡೆ ಕಮ್ಯುನಿಸ್ಟರನ್ನು ಮಟ್ಟ ಹಾಕುತ್ತೇನೆ' ಎಂದು ಭಾರತೀಯ ಸೇನೆಯ ಜನರಲ್ ಜೆ ಎನ್ ಚೌಧುರಿ ಕೊಚ್ಚಿಕೊಂಡಿದ್ದರು. ಆ ಪ್ರಕಾರವಾಗಿ, ಕೆಲವು ಅನಧಿಕೃತ ಅಂದಾಜು ಸೂಚಿಸುವಂತೆ ಆಗ ಹೈದರಾಬಾದಿನಲ್ಲಿ ಭಾರತ ಸರಕಾರ ಎಷ್ಟು 1947-48ರಲ್ಲಿ ಕಾಶ್ಮೀರ ಸಮಸ್ಯೆ ಕುರಿತು ಪಾಕಿಸ್ತಾನದೊಂದಿಗೆ ಯುದ್ಧಕ್ಕೆ ವೆಚ್ಚ ಮಾಡಿತ್ತೋ ಅಷ್ಟೇ ಹಣ ಮತ್ತು ಸಂಪನ್ಮೂಲಗಳನ್ನು ಖರ್ಚು ಮಾಡಿತ್ತು. ಆಗ ಕೂಡ, ಅದು ತೆಲಂಗಾಣ ಪ್ರದೇಶದ 'ಕಮ್ಯುನಿಸ್ಟರನ್ನು ಮಟ್ಟ ಹಾಕುವಲ್ಲಿ' ವಿಫಲವಾಗಿತ್ತು. ತೆಲಂಗಾಣ ಜನರ ಸಶಸ್ತ್ರ ಹೋರಾಟದ ನಾಯಕತ್ವ ವಹಿಸಿದ್ದ ಸಂಗಾತಿ ಪಿ.ಸುಂದರಯ್ಯ ಅವರು "ತೆಲಂಗಾಣ ಜನರ ಸಶಸ್ತ್ರ ಹೋರಾಟದ ಚರಿತ್ರೆ ಮತ್ತು ಪಾಠಗಳು" ಎಂಬ ಮೌಲಿಕವೂ ಚಿರಸ್ಥಾಯಿಯೂ ಆದ ಕೃತಿಯಲ್ಲಿ ಆ ಹೋರಾಟದ ಮಹತ್ವದ ಬಗ್ಗೆ ಬರೆದಿದ್ದರು. ಅದರಲ್ಲಿನ ಕೆಲವು ಅಂಶಗಳು ಇಲ್ಲಿವೆ:

"ತೆಲಂಗಾಣ ರೈತರ ಬಂಡಾಯವು ಭಾರತದ ಕಮ್ಯುನಿಸ್ಟ್ ಚಳುವಳಿಗೆ ನೀಡಿದ ಏಕೈಕ ಬಹುದೊಡ್ಡ ಕೊಡುಗೆ ಮಹತ್ತರ ಪ್ರಾಮುಖ್ಯತೆಯುಳ್ಳದ್ದು; ಭಾರತೀಯ ಜನಸಮುದಾಯದ ಪ್ರಜಾಸತ್ತಾತ್ಮಕ ಕ್ರಾಂತಿಯ ಕಾರ್ಯಯೋಜನೆ ಹಾಗೂ ತಂತ್ರಗಳಿಗೆ ಸಂಬಂಧಪಟ್ಟಂತಹ ಬಹುತೇಕ ಎಲ್ಲಾ ಮೂಲಭೂತವಾದ ತಾತ್ವಿಕ ಹಾಗೂ ಸೈದ್ಧಾಂತಿಕ ಪ್ರಶ್ನೆಗಳನ್ನು ಸರಿಯಾದ ಹಾಗೂ ವೈಜ್ಞಾನಿಕ ಉತ್ತರಗಳಿಗಾಗಿ ಮತ್ತು ವಾಸ್ತವವಾದ ಹಾಗೂ ಪ್ರಾಯೋಗಿಕವಾದ ಪರಿಹಾರಗಳಿಗಾಗಿ ಈ ಹೋರಾಟವು ಭಾರತದ ಕಮ್ಯುನಿಸ್ಟ್ ಚಳುವಳಿಯ ಮುಂಚೂಣಿಗೆ ತಂದಿತು. ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ರೈತಾಪಿಗಳ ಪಾತ್ರ; ಪಕ್ಷಪಾತೀ ಪ್ರತಿರೋಧ ಮತ್ತು ಗ್ರಾಮೀಣ ಕ್ರಾಂತಿಕಾರಿ ನೆಲೆಗಳ ಸ್ಥಾನ ಹಾಗೂ ಮಹತ್ವ; ರೈತಾಪಿಗಳ ನಡುವಿನ ವರ್ಗೀಕರಣದ ಮೂರ್ತ ವಿಶ್ಲೇಷಣೆ; ಮತ್ತು ಕ್ರಾಂತಿಯಲ್ಲಿ ರೈತಾಪಿಗಳ ವಿವಿಧ ಸ್ತರಗಳು ವಹಿಸಬೇಕಾದ ಪಾತ್ರವೇನು; ಭಾರತೀಯ ಕ್ರಾಂತಿಗಾಗಿನ ಕಣ್ಣೋಟ; ಈ ಕ್ರಾಂತಿಯಲ್ಲಿ ಕಾರ್ಮಿಕ ವರ್ಗದ ಮತ್ತು ನಗರ ಕೇಂದ್ರಗಳ ನಿರ್ದಿಷ್ಟ ಸ್ಥಾನ ಮತ್ತು ಪಾತ್ರ; ಕಾರ್ಮಿಕ ವರ್ಗದ ಅಧಿನಾಯಕತ್ವ ಎಂಬ ಪರಿಕಲ್ಪನೆಯ ಖಚಿತವಾದ ಅರ್ಥ ಮತ್ತು ಭಾವ; ಮತ್ತು ಆಧುನಿಕ ಕಾರ್ಮಿಕ ವರ್ಗವು ಒಟ್ಟು ಜನಸಂಖ್ಯೆಯ ಶೇಕಡಾ ಒಂದರಷ್ಟೂ ಇಲ್ಲದಿರುವ ಹಿಂದುಳಿದ ಹಾಗೂ ಸರಿಯಾಗಿ ಅಭಿವೃದ್ಧಿ ಹೊಂದಿರದ ದೇಶದಲ್ಲಿ, ಇವುಗಳನ್ನು ಸಾಕಾರಗೊಳಿಸಲು ಕಮ್ಯುನಿಸ್ಟ್ ಪಕ್ಷವು ವಹಿಸುವ ಪಾತ್ರವೇನು ಮುಂತಾದ ಹಲವಾರು ಪ್ರಶ್ನೆಗಳು ಪಕ್ಷದ ಗಂಭೀರ ಆಂತರಿಕ ಹೋರಾಟಕ್ಕೆ ಎದ್ದು ಬಂದವು. ಇದು ಪಕ್ಷಕ್ಕೆ ಎದುರಾದ ಹೆಚ್ಚಿನ ಸಮಸ್ಯೆಗಳಿಗೆ ತೃಪ್ತಿಕರ ಉತ್ತರಗಳೊಂದಿಗೆ ಒಂದು ಸಾಕಷ್ಟು ಸರಿಯಾದ ರಾಜಕೀಯ ನಿಲುವಿಗೆ ಬರಲು ಅನುವು ಮಾಡಿಕೊಟ್ಟಿತು.

"ಈ ಹೋರಾಟದ ಅವಧಿಯಲ್ಲಿ, ಬಹಳ ಮುಖ್ಯವಾಗಿ ಕೊನೆಯ ಎರಡು ವರ್ಷಗಳ ಹಂತದಲ್ಲಿ, ಕಮ್ಯುನಿಸ್ಟ್ ಪಕ್ಷವು ತುದಿಯಿಂದ ಬುಡದವರೆಗೂ ಎರಡು ವಿಷಮ ಪಾಳೆಯಗಳಾಗಿ ತೀವ್ರ ಸ್ವರೂಪದಲ್ಲಿ ವಿಭಜನೆಗೊಂಡಿತ್ತು ಎಂಬುದನ್ನು ಹೇಳಬೇಕಾಗುತ್ತದೆ. ಒಂದು, ಹೋರಾಟವನ್ನು ಮತ್ತು ಅದರ ಸಾಧನೆಗಳನ್ನು ಸಮರ್ಥಿಸುತ್ತಿದ್ದರೆ, ಮತ್ತೊಂದು ಹೋರಾಟವನ್ನು ಭಯೋತ್ಪಾದನೆ ಎಂದೆಲ್ಲ ಖಂಡಿಸುತ್ತಿತ್ತು, ಹೀಗಳೆಯುತ್ತಿತ್ತು. ಆ ಹೋರಾಟದ ವಿರುದ್ಧವಿದ್ದವರು ಪತ್ರಿಕೆಗಳಿಗೆ ಬಹಿರಂಗ ಹೇಳಿಕೆ ನೀಡುವುದರ ಮೂಲಕ ಹೋರಾಟದ ಹಾಗೂ ಅದಕ್ಕೆ ನಾಯಕತ್ವ ನೀಡುತ್ತಿದ್ದ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಶತೃ ಪಾಳೆಯದವರು ಅಪಪ್ರಚಾರ ಮಾಡಲು ಅವಕಾಶ ಮಾಡಿಕೊಟ್ಟರು. ರಾಜಕೀಯ ಹಾಗೂ ಸೈದ್ಧಾಂತಿಕವಾದ ಈ ತೀಕ್ಷ್ಣ ಬಿರುಕು ದೇಶದ ಇಡೀ ಪಕ್ಷವನ್ನೇ ಆವರಿಸಿಕೊಂಡಿದ್ದರೂ, ಆ ಧೀರೋದಾತ್ತ ರೈತ ದಂಗೆಯಲ್ಲಿ ನೇರವಾಗಿ ಹಾಗೂ ನಿಕಟವಾಗಿ ತೊಡಗಿಕೊಂಡಿದ್ದ ಪಕ್ಷದ ವಿಶಾಲಾಂಧ್ರ ಘಟಕದಲ್ಲಿ ಅದು ಹೆಚ್ಚು ಬಿರುಸಾಗಿ ಹಾಗೂ ತೀಕ್ಷ್ಣವಾಗಿತ್ತು. ತದನಂತರದಲ್ಲಿ, ಅಕ್ಟೋಬರ್ 1951ರಲ್ಲಿ ತೆಲಂಗಾಣ ಸಶಸ್ತ್ರ ಪ್ರತಿರೋಧವನ್ನು ಹಿಂಪಡೆದ ನಂತರ ಸಾಧಿಸಿದ ಪಕ್ಷದ ಒಳಗಡೆಯ ಐಕ್ಯತೆಯು, ಕೇವಲ ಔಪಚಾರಿಕವಾಗಿತ್ತು, ತೋರ್ಕೆಯದಾಗಿತ್ತು ಮತ್ತು ತಾತ್ಕಾಲಿಕವಾಗಿತ್ತು ಮತ್ತು ಒಡಕು, ನಿಜವಾಗಿಯೂ, ಎರಡು ಭಿನ್ನವಾದ ವೈಷಮ್ಯಪೂರ್ಣ ರಾಜಕೀಯ ಪ್ರವೃತ್ತಿಗಳಾಗಿ ಖಚಿತ ರೂಪವನ್ನು ಪಡೆದಿತ್ತು. ಅದು ಕೇವಲ ಆಕಸ್ಮಿಕವಾಗಿರಲಿಲ್ಲ; ಗಮನಿಸಬೇಕಾದ ಆಸಕ್ತಿದಾಯಕ ಅಂಶವೇನೆಂದರೆ, 1950-51ರಲ್ಲಿ ಕಾಣಿಸಿಕೊಂಡಿದ್ದ ಪಕ್ಷದೊಳಗಿನ ಸಂಘರ್ಷದ ಅದೇ ಸ್ವರೂಪ ಮತ್ತು ಅದೇ ಮನೋಗುಣವು, ಹೆಚ್ಚೂ ಕಡಿಮೆ, ವಿಶಾಲಾಂಧ್ರ ರಾಜ್ಯ ಪಕ್ಷದ ಘಟಕದೊಳಗಿನ ಒಡುಕು ಇದ್ದ ಹಾಗೆಯೇ, 1962-63ರಲ್ಲಿ ಎದ್ದು ಬಂದ ಪಕ್ಷದ ವಿಭಜನೆಯಲ್ಲಿಯೂ ಇತ್ತು. ತಮ್ಮ ನಿಷ್ಠೆಯನ್ನು ಮತ್ತು ರಾಜಕೀಯ ಬದ್ಧತೆಯನ್ನು ಬದಲಾಯಿಸಿರಬಹುದಾದ ಕೆಲವೇ ಬೆರಳೆಣಿಕೆಯ ವ್ಯಕ್ತಿಗತ ಕಮ್ಯುನಿಸ್ಟ್ ಮುಖಂಡರು ಮತ್ತು ಕಾರ್ಯಕರ್ತರನ್ನು ಹೊರತುಪಡಿಸಿ, ತೆಲಂಗಾಣ ಹೋರಾಟಕ್ಕೆ ವಿರುದ್ಧವಿದ್ದ ಬಹುತೇಕರು, ಒಂದಲ್ಲಾ ಒಂದು ಲೆಕ್ಕದಲ್ಲಿ, ಬಲ ಸುಧಾರಣಾವಾದಿ ಮತ್ತು ಪರಿಷ್ಕರಣವಾದಿ, ಬಲ ಕಮ್ಯುನಿಸ್ಟ್ ಪಕ್ಷವನ್ನು ಆಯ್ಕೆಮಾಡಿಕೊಂಡರು; ಇತ್ತ ಅತಿ ದೊಡ್ಡ ಬಹುಸಂಖ್ಯಾತರು, ಅಂತ್ಯದವರೆಗೂ ಹೋರಾಟವನ್ನು ಬೆಂಬಲಿಸಿದವರು, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹಿಂದೆ ಗಟ್ಟಿಯಾಗಿ ನಿಂತರು. ಭಾರತದ ಕಮ್ಯುನಿಸ್ಟ್ ಚಳುವಳಿಯನ್ನು ಅಧ್ಯಯನ ಮಾಡುವ ಯಾವ ಗಂಭೀರ ವಿದ್ಯಾರ್ಥಿಯೂ ತೆಲಂಗಾಣ ಹೋರಾಟವನ್ನು ಮತ್ತು ಈ ಧೀರೋದಾತ್ತ ರೈತ ಪ್ರತಿರೋಧ ಚಳುವಳಿಯನ್ನು ನಡೆಸುವ ಸುತ್ತ ಪಕ್ಷದೊಳಗೆ ಎದ್ದ ಹಲವಾರು ವಿವಾದಗಳನ್ನು ಬದಿಗಿಟ್ಟು ಅಭ್ಯಾಸ ಮಾಡಿದರೆ, 1962-63ರ ಅನಿವಾರ್ಯ ವಿಭಜನೆಗೆ ದಾರಿಯಾದ ಮೂಲ ಪ್ರಶ್ನೆಯನ್ನು ಮತ್ತು ಕಾರಣಗಳನ್ನು ತಿಳಯುವಲ್ಲಿ ಯಶಸ್ವಿಯಾಗಲಾರ.

"ಈ ವೀರೋಚಿತ ರೈತ ಬಂಡಾಯದ ಒಟ್ಟಾರೆ ಲೆಕ್ಕಾಚಾರವನ್ನು ಹೀಗೆ ಸಂಕ್ಷಿಪ್ತವಾಗಿ ಹೇಳಬಹುದು: ತೆಲಂಗಾಣದ ರೈತ ಹೋರಾಟಗಾರರಿಂದ ಮತ್ತು ಆ ಜನಪ್ರಿಯ ರೈತ ಬಂಡಾಯವನ್ನು ಮುನ್ನಡೆಸಲು ನಿಯುಕ್ತವಾಗಿದ್ದ ಕಮ್ಯುನಿಸ್ಟ್ ಪಕ್ಷದ ವಿಶಾಲಾಂಧ್ರ ರಾಜ್ಯ ಘಟಕದಿಂದ ಅದು ಅಪಾರ ತ್ಯಾಗವನ್ನು ಬೇಡಿತು. 4,000 ಕಮ್ಯುನಿಸ್ಟರು ಮತ್ತು ಸಮರಶೀಲ ರೈತರು ಬಲಿಯಾದರು; 10,000ಕ್ಕೂ ಹೆಚ್ಚಿನ ಕಮ್ಯುನಿಸ್ಟ್ ಕಾರ್ಯಕರ್ತರು ಮತ್ತು ಹೋರಾಟಗಾರರು 3-4 ವರ್ಷಗಳ ಕಾಲ ಬಂಧನ ಶಿಬಿರಗಳಿಗೆ ಮತ್ತು ಜೈಲುಗಳಿಗೆ ತಳ್ಳಲ್ಪಟ್ಟರು; ಏನಿಲ್ಲೆಂದರೂ ಕನಿಷ್ಠ 50,000ಕ್ಕೂ ಹೆಚ್ಚು ಸಂಖ್ಯೆಯ ಜನರನ್ನು ಪೋಲಿಸ್ ಹಾಗೂ ಮಿಲಿಟರಿ ಕ್ಯಾಂಪುಗಳಿಗೆ ಎಳೆದುಕೊಂಡು ಹೋಗಿ ವಾರಗಟ್ಟಲೆ, ತಿಂಗಳುಗಟ್ಟಲೆ ಚಿತ್ರವಿಚಿತ್ರ ಹಿಂಸೆಗಳನ್ನು ಕೊಟ್ಟರು, ಹೊಡೆದರು ಮತ್ತು ಭಯಂಕರ ಕಿರುಕುಳ ನೀಡಿದರು. ಸಾವಿರಾರು ಗ್ರಾಮಗಳ ಲಕ್ಷಾಂತರ ಜನರು ಪೋಲಿಸ್ ಹಾಗೂ ಮಿಲಿಟರಿ ದಾಳಿಗಳಿಂದಾಗಿ ನಿರ್ದಯ ಲಾಠಿ ಹೊಡೆತಕ್ಕೆ ಒಳಗಾದರು; ಈ ಪೋಲಿಸ್ ಹಾಗೂ ಮಿಲಿಟರಿ ದಾಳಿಗಳಲ್ಲಿ ಲಕ್ಷಾಂತರ ರೂಪಾಯಿಗಳ ಆಸ್ತಿಪಾಸ್ತಿಯನ್ನು ಲೂಟಿ ಮಾಡಿದರು ಮತ್ತು ಧ್ವಂಸ ಮಾಡಿದರು; ಸಾವಿರಾರು ಮಹಿಳೆಯರು ಮಾನಭಂಗಕ್ಕೆ ತುತ್ತಾದರು, ಎಲ್ಲಾ ರೀತಿಯ ಅವಮಾನ ಹಾಗೂ ಅನುಚಿತ ವರ್ತನೆಗಳಿಗೆ ಸಿಲುಕಿದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಇಡೀ ಪ್ರದೇಶವು ಪೋಲಿಸರ ಮತ್ತು ಮಿಲಿಟರಿ ಸೇನೆಯ ಭಯೋತ್ಪಾದಕ ಆಳ್ವಿಕೆಯಲ್ಲಿ ಪೂರ್ಣ ಐದು ವರ್ಷಗಳ ಕಾಲ ಆರಂಭದಲ್ಲಿ ನಿಜಾಮ ಹಾಗೂ ಅವನ ರಜಾಕಾರರ ಮತ್ತು ನಂತರದಲ್ಲಿ, ಕೇಂದ್ರ ಸರ್ಕಾರ ಹಾಗೂ ಹೈದರಾಬಾದ್ ರಾಜ್ಯ ಸರ್ಕಾರದ ಜಂಟೀ ಸಶಸ್ತ್ರ ಪಡೆಗಳ ಸಶಸ್ತ್ರ ದಾಳಿಯಿಂದಾಗಿ ನರಳಿತು. ಪೋಲಿಸ್ ಕಾರ್ಯಾಚರಣೆಯ ನಂತರ, 50,000 ವಿವಿಧ ರೀತಿಯ ಸಶಸ್ತ್ರ ಸಿಬ್ಬಂದಿಗಳ ಬಲವಾದ ಪಡೆಯನ್ನು ಅಲ್ಲಿ ನಿಯೋಜಿಸಿ ಚಳುವಳಿಯನ್ನು ಹಿಂಸಾತ್ಮಕವಾಗಿ ಬಗ್ಗುಬಡಿಯಲಾಯಿತು ಮತ್ತು ಛಿದ್ರವಾಗಿದ್ದ ಜಮೀನ್ದಾರರ ಆಳ್ವಿಕೆಯನ್ನು ಪುನಸ್ಥಾಪಿಸಲಾಯಿತು.

"ನಿಸ್ಸಂದೇಹವಾಗಿ, ಅದರ ಎರಡನೆಯ ಮಗ್ಗಲಿನ ಚಿತ್ರಣ, ರೈತ ಬಂಡಾಯದ ಪ್ರಸಿದ್ಧ ಸಾಧನೆಗಳು ಮತ್ತು ಗಳಿಕೆಗಳ ಪ್ರಭಾವಶಾಲಿ ದಾಖಲೆಗಳ ಚಿತ್ರಣವಿಲ್ಲದೇ ಅದು ಪೂರ್ಣವಾಗುವುದಿಲ್ಲ. ಈ ಹೋರಾಟದ ಹಾದಿಯಲ್ಲಿ, 16,000 ಚದರ ಮೈಲಿಗಳ ಪ್ರದೇಶದಲ್ಲಿನ ಸರಿಸುಮಾರು ಮುವ್ವತ್ತು ಲಕ್ಷ ಜನಸಂಖ್ಯೆಯನ್ನು ಆವರಿಸಿದ ಸುಮಾರು 3,000 ಗ್ರಾಮಗಳಲ್ಲಿನ ರೈತಾಪಿಗಳು ಹೋರಾಟ ನಡೆಸುತ್ತಿದ್ದ ಗ್ರಾಮ ಪಂಚಾಯತಿಗಳ ನೆಲೆಯಲ್ಲಿ ಗ್ರಾಮ ರಾಜ್ಯ ಸ್ಥಾಪಿಸುವಲ್ಲಿ ಯಶಸ್ವಿಯಾದರು; ಈ ಹಳ್ಳಿಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ನಿಜಾಮನ ಆಳ್ವಿಕೆಯ ಆಧಾರ ಸ್ತಂಭಗಳಾಗಿದ್ದ, ರೈತರ ಬದ್ಧವೈರಿಗಳಾದ ಜಮೀನ್ದಾರರನ್ನು ಅವರ ಕೋಟೆಗಳಂತಿದ್ದ ಮನೆ – ಗಾದಿ – ಗಳಿಂದ ಓಡಿಸಲಾಗಿತ್ತು ಮತ್ತು ಅವರ ಜಮೀನುಗಳನ್ನು ರೈತರು ವಶಪಡಿಸಿಕೊಂಡಿದ್ದರು. ಜನತಾ ಸಮಿತಿಗಳ ಮಾರ್ಗದರ್ಶನದಲ್ಲಿ ಹತ್ತು ಲಕ್ಷ ಎಕರೆ ಜಮೀನುಗಳನ್ನು ರೈತರಿಗೆ ಮರುವಿತರಣೆ ಮಾಡಲಾಗಿತ್ತು. ಎಲ್ಲಾ ಒಕ್ಕಲೆಬ್ಬಿಸುವಿಕೆಯನ್ನು ನಿಲ್ಲಿಸಲಾಗಿತ್ತು ಮತ್ತು ಬಲವಂತ ಬಿಟ್ಟಿ ಚಾಕರಿಯನ್ನು ರದ್ದುಮಾಡಲಾಗಿತ್ತು. ಲೂಟಿಕೋರ ಮತ್ತು ದುಬಾರಿ ಬಡ್ಡಿ ದರವನ್ನು ತೀವ್ರವಾಗಿ ಇಳಿಸಲಾಗಿತ್ತು ಅಥವಾ ಸಂಪೂರ್ಣವಾಗಿ ನಿಷೇಧಿಸಲಾಗಿತ್ತು. ಕೃಷಿ ಕೂಲಿಕಾರರ ದಿನಗೂಲಿಯನ್ನು ಏರಿಸಲಾಗಿತ್ತು ಮತ್ತು ಕನಿಷ್ಠ ಕೂಲಿಯನ್ನು ಜಾರಿಮಾಡಲಾಗಿತ್ತು. ದಮನಕಾರಿ ಅರಣ್ಯ ಅಧಿಕಾರಿಶಾಹಿಗಳು ಅರಣ್ಯ ಬಿಟ್ಟು ಓಡಿಹೋಗುವಂತೆ ಮಾಡಲಾಗಿತ್ತು ಮತ್ತು ಆದಿವಾಸಿಗಳು ಹಾಗೂ ಅರಣ್ಯದ ಸುತ್ತಮುತ್ತ ವಾಸಿಸುತ್ತಿದ್ದ ಜನರು ತಮ್ಮ ಶ್ರಮದ ಫಲವನ್ನು ಅನುಭವಿಸುವಂತಾಗಿತ್ತು. 12 ರಿಂದ 18 ತಿಂಗಳ ಕಾಲ ಈ ಪ್ರದೇಶಗಳ ಇಡೀ ಆಡಳಿತವನ್ನು ಗ್ರಾಮ ರೈತ ಸಮಿತಿಗಳು ನಡೆಸುತ್ತಿದ್ದವು. ನಿಜಾಮನ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧದ ಹೋರಾಟದ ಸಂದರ್ಭದಲ್ಲಿ, 10,000 ಗ್ರಾಮ ತಂಡಗಳ ಸದಸ್ಯರು ಹಾಗೂ 2,000 ನಿಯಮಿತ ಗೆರಿಲ್ಲಾ ತಂಡಗಳಿಂದ ಒಡಗೂಡಿದ ಬಲಿಷ್ಠ ಪ್ರಜಾಸೈನ್ಯವನ್ನು ಜನರು ಕಟ್ಟಿ ಸಂಘಟಿಸಿದ್ದರು, ರಜಾಕಾರರು ಮತ್ತು ನಿಜಾಮನ ಪೋಲಿಸರ ಸಶಸ್ತ್ರ ದಾಳಿಗಳಿಂದ ರೈತರನ್ನು ರಕ್ಷಿಸುತ್ತಿದ್ದರು. ಒಂದೇ ಶಬ್ದದಲ್ಲಿ, ಈ ಚಾರಿತ್ರಿಕ ರೈತ ಬಂಡಾಯವು ಮಧ್ಯಯುಗದ ಅಸಫ್‌ಜಾಹಿ ವಂಶದ ಸರ್ವಾಧಿಕಾರಿ ಆಳ್ವಿಕೆಯ ಬೇರನ್ನೇ ಅಲುಗಾಡಿಸಿತ್ತು, ಅದರ ವಿರುದ್ಧ ಮಾರಣಾಂತಿಕ ಪೆಟ್ಟನ್ನು ಕೊಟ್ಟಿತ್ತು.

"ಕಾರ್ಷಿಕ ಕ್ರಾಂತಿಯ ಪ್ರಶ್ನೆಯನ್ನು ಮುನ್ನೆಲೆಗೆ ತಂದು, ಕಾಂಗ್ರೆಸ್ ನಾಯಕರ ಒಲ್ಲದ ಕೈಗಳೂ ಹಲವಾರು ಕಾರ್ಷಿಕ ಸುಧಾರಣೆಗಳನ್ನು, ಅವುಗಳನ್ನು ಎಷ್ಟೇ ತಡೆ-ತಡೆದಾದರೂ, ಅರೆಮನಸ್ಸಿನಿಂದ ಮತ್ತು ಮತ್ತು ಕನಕರದ ರೀತಿಯಲ್ಲಾದರೂ, ತರುವಂತೆ ಬಲವಂತ ಮಾಡಿದ ಕೀರ್ತಿಯೂ ಈ ವೀರೋಚಿತ ರೈತ ಪ್ರತಿರೋಧ ಚಳುವಳಿಗೆ ಸಲ್ಲುತ್ತದೆ. ಈ ಹೋರಾಟದ ಸಂದರ್ಭದಲ್ಲೇ 'ಭೂದಾನ'ದ ಭ್ರಾಮಕ ಕಲ್ಪನೆಯನ್ನು ಸರ್ವೋದಯ ನಾಯಕ ವಿನೋಭಾ ಭಾವೆ ಹುಟ್ಟುಹಾಕಿದರು ಮತ್ತು ರೈತರ ನಡುವೆ ಶಾಂತಿ ಮಾತುಕತೆಯ ನಾಟಕದ ಹೆಸರಿನಲ್ಲಿ ಕಮ್ಯುನಿಸ್ಟ್-ವಿರೋಧಿ ಪ್ರಚಾರ ಮಾಡಲು ಕಾಂಗ್ರೆಸ್ ಮುಖಂಡರು ಅವರನ್ನು ಅಲ್ಲಿಗೆ ಕರೆತಂದಿದ್ದರು. ಇಂತಹ ಒಂದು ಉಗ್ರ ಮತ್ತು ದೀರ್ಘಕಾಲೀನ ಹೋರಾಟದ ಹಾದಿಯಲ್ಲಿ ಜನರು ಸತ್ಯವನ್ನು ಗ್ರಹಿಸುವಂತಾದರು; ಬಂಡವಾಳಶಾಹಿ-ಭೂಮಾಲಕ ಆಳರಸರ ಸವಿಯಾದ ಸಿಹಿ ಮಾತುಗಳಿಂದ ಮತ್ತು ಆಡಂಬರದ ಭರವಸೆಗಳಿಂದ ಎಂದಿಗೂ ಭೂಮಿ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ, ಒಂದು ಬಲಿಷ್ಠ ಸಂಘಟಿತ ಸಾಮೂಹಿಕ ಹೋರಾಟ ಮಾತ್ರವೇ ಅದನ್ನು ಸಾಧಿಸಬಲ್ಲುದು ಎಂಬ ಸತ್ಯವನ್ನು ಜನರು ಕಂಡುಕೊಂಡರು.

"ಭಾಷಾವಾರು ಆಧಾರದಲ್ಲಿ ರಾಜ್ಯಗಳ ಮರುವಿಂಗಡಣೆಯ ನಡೆಗೆ ಪ್ರಚೋದನೆ ನೀಡಿದ ಹೆಗ್ಗಳಿಕೆಯನ್ನೂ ಮತ್ತೆ ನಾವು ತೆಲಂಗಾಣ ಹೋರಾಟಕ್ಕೆ ಸಾಕಷ್ಟು ಪ್ರಮಾಣದಲ್ಲಿ ಸಲ್ಲಿಸಬೇಕೆನ್ನುವುದನ್ನು ಕೂಡ ಮರೆಯದಿರೋಣ; ಐಯಕ್ಯತೆಯಿಂದಿದ್ದ ಮತ್ತು ಹರಿದುಹಂಚಿಹೋಗಿದ್ದ ಅನೇಕ ರಾಷ್ಟ್ರೀಯತೆಗಳು ತಮ್ಮದೇ ಆದ ಪ್ರತ್ಯೇಕ ರಾಜ್ಯದ ಸ್ಥಾನಮಾನವನ್ನು ಹೊಂದಬೇಕೆಂಬ ಬಹಳ ದಿನಗಳಿಂದ ಕನಸು ಕಂಡಿದ್ದ ತಮ್ಮ ಪ್ರಜಾಸತ್ತಾತ್ಮಕ ಬೇಡಿಕೆಯನ್ನು ಸಾಕಾರಗೊಳಿಸಿಕೊಳ್ಳಲು ಸಾಧ್ಯವಾಯಿತು. ಹೈದರಾಬಾದಿನ ಅತ್ಯಂತ ದೊಡ್ಡ ರಾಜಪ್ರಭುತ್ವಕ್ಕೆ ಬಲವಾದ ಧಕ್ಕೆಯನ್ನು ಈ ಹೋರಾಟ ನೀಡಿದ್ದು ಆ ಹೋರಾಟಕ್ಕೆ ಸ್ಫೂರ್ತಿ ನೀಡಿತು ಮತ್ತು ಆಂಧ್ರ ರಾಜ್ಯ ರಚನೆ ಸಾಧ್ಯವಾಯಿತು; ಅದು 1956ರಲ್ಲಿ ದೇಶಾದ್ಯಂತ ಭಾಷಾವಾರು ಪ್ರಾಂತಗಳನ್ನು ರಚಿಸಲು ಹಾದಿ ಮಾಡಿಕೊಟ್ಟಿತು; ಹಿಂದಿನ ಬ್ರಿಟಿಷ್ ಆಡಳಿತವು ನೀತಿನಿಯಮಗಳಿಲ್ಲದ ಹಾಗೂ ಏಕಪಕ್ಷೀಯವಾಗಿ ಮಾಡಿದ್ದ ವಿಭಜನೆಯನ್ನು ಕೊನೆಗಾಣಿಸಲು ಆಳುವ ಕಾಂಗ್ರೆಸ್ ನಾಯಕತ್ವವನ್ನು ಒತ್ತಾಯಿಸಲು ಸಾಧ್ಯವಾಯಿತು. ಒಂದು ರಾಷ್ಟ್ರೀಯ, ಪ್ರಜಾಸತ್ತಾತ್ಮಕ, ಹಾಗೂ ಭಾಷಾವಾರು ಆಧಾರದಲ್ಲಿ ಭಾರತದ ರಾಜಕೀಯ ಭೂಪಟವನ್ನು ಮರುರೂಪಿಸುವಂತೆ ಮಾಡುವಲ್ಲಿ ಧೀರೋದಾತ್ತ ತೆಲಂಗಾಣ ಹೋರಾಟವು ಹೀಗೆ ಅಸಾಧಾರಣವಾದ ಕೊಡುಗೆಯನ್ನು ನೀಡಿತು." ●

ಕೊರೊನ ಲಸಿಕೆಗೆ ಗಡುವು ! ಆಗಸ್ಟ್ 15 !! 'ರೆಡ್ ಟೇಪ್' !!!



ಜುಲೈ 3 ರಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ(ಐಸಿಎಂಆರ್)ಯ ಮಹಾನಿರ್ದೇಶಕರು ಕೊರೊನ ವಿರುದ್ಧ ಲಸಿಕೆ ಕಂಡು ಹಿಡಿಯುವಲ್ಲಿ ಭಾರತವೇ ಮೊದಲ ದೇಶವಾಗುತ್ತದೆ, ಆಗಸ್ಟ್ 15 ರ ವೇಳೆಗೆ ಇದರ 'ಸಾರ್ವಜನಿಕ ಆರೋಗ್ಯ ಬಳಕೆ'ಯನ್ನು ಆರಂಭಿಸುವ ಯೋಜನೆಯಿದೆ ಎಂದು ಸೂಚಿಸಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಯಿತು. ದೇಶದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಕೊವಿಡ್–19 ಜನಜೀವನವನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಅಸ್ತವ್ಯಸ್ತಗೊಳಿಸಿರುವಾಗ ಅದಕ್ಕೆ ಒಂದು ಲಸಿಕೆ ಸಿಗುತ್ತಿರುವುದು ನಿಜಕ್ಕೂ ಸಾಧನೆಯೇ. ಅದರಲ್ಲೂ ನಮ್ಮ ದೇಶದಲ್ಲೇ ಇದು ಆಗುತ್ತದೆ ಎಂಬುದು ಇನ್ನಷ್ಟು ಸಂತೋಷದ ಸಂಗತಿಯೇ.

ಆದರೆ ಅದಕ್ಕೊಂದು ಸಮಯದ ಗಡುವು ಹಾಕುವುದು ಸಾಧ್ಯವೇ? ಅದೂ ಅದರ ಕ್ಲಿನಿಕಲ್ ಪ್ರಯೋಗಗಳು, ಅಂದರೆ ಹೊಸ ಔಷಧಿ ಎಷ್ಟು ಪರಿಣಾಮಕಾರಿಯಾಗಿದೆ ಮತ್ತು ಸುರಕ್ಷಿತವಾಗಿವೆ ಎಂಬ ಪರೀಕ್ಷಣಾ ಪ್ರಯೋಗಗಳು ಇನ್ನೂ ಆರಂಭವೇ ಆಗದಿರುವಾಗ ಐದೇ ವಾರದೊಳಗೆ ಇದರ ಸಾರ್ವಜನಕ ಲಭ್ಯತೆ ಕಾರ್ಯಸಾಧ್ಯವೇ ಎಂಬ ಗಂಭೀರ ಪ್ರಶ್ನೆ ವೈದ್ಯಕೀಯ ಸಮುದಾಯದಲ್ಲೇ ಎದ್ದಿದೆ. ಆರೋಗ್ಯ ಪರಿಣಿತರೂ ಹಲವು ಪ್ರಶ್ನೆಗಳನ್ನೆತ್ತಿದ್ದಾರೆ.

ಈ ಬಗ್ಗೆ ಆಶ್ಚರ್ಯದಿಂದ ಹಿಡಿದು ಆಘಾತದ ವರೆಗೆ, 'ಅತಾರ್ಕಿಕ' ಎನ್ನುವುದರಿಂದ ಹಿಡಿದು 'ಅಸಂಬದ್ಧ' ಎನ್ನುವ ವರೆಗಿನ ಹಲವು ರೀತಿಯ ಪ್ರತಿಕ್ರಿಯೆಗಳು ಬಂದಿವೆ. ಸಾಮಾಜಿಕ ಮಾಧ್ಯಮಗಳಲ್ಲಂತೂ "ವಿಜ್ಞಾನವೂ ರಾಜಕೀಯಕ್ಕೆ ಅಧೀನವಾಗುತ್ತಿದೆಯೇ?" ಎಂಬ ಪ್ರಶ್ನೆ ಕೇಳಲಾಗುತ್ತಿದೆ. ಇನ್ನು ಕೆಲವರು ಐಸಿಎಂಆರ್ ಭಾರತದ ವೈದ್ಯಕೀಯ ಸಂಶೋಧನಾ ಮಂಡಳಿಯೇ ಅಥವ ತನ್ನ ಒಡೆಯರ ದನಿ ಮಾತ್ರವೇ ಎಂದೂ ಪ್ರಶ್ನಿಸಿದ್ದಾರೆ.

ಐಸಿಎಂಆರ್ 'ಸ್ಪಷ್ಟೀಕರಣ'

ಇದರಿಂದ ಕುಪಿತಗೊಂಡ ಐ.ಸಿ.ಎಂ.ಆರ್. ಜುಲೈ 4ರಂದು ಒಂದು 'ಸ್ಪಷ್ಟೀಕರಣ' ನೀಡಿ, ಅನಗತ್ಯ 'ರೆಡ್ ಟೇಪ್'"(ಸರಕಾರೀ ಕಡತಗಳ ಎಂದಿನ ನಿಧಾನಗತಿಯನ್ನು) ತಪ್ಪಿಸಲಿಕ್ಕಾಗಿ, ಹೊಸದೊಂದು ದೇಶೀ ಔಷಧಿ ಮಾರುಕಟ್ಟೆಗೆ ಬರಲು ಉಂಟಾಗಬಹುದಾದ ಅಡೆ–ತಡೆಗಳನ್ನು ತ್ವರಿತವಾಗಿ ನಿವಾರಿಸಲಿಕ್ಕಾಗಿಯಷ್ಟೇ ತಮ್ಮ ಮಹಾನಿರ್ದೇಶಕರು ಎಲ್ಲ 12 ಪರೀಕ್ಷಣಾ ಕೇಂದ್ರಗಳಿಗೆ ಪರೀಕ್ಷಣಾ ಪ್ರಯೋಗಗಳನ್ನು ತ್ವರಿತಗೊಳಿಸಲು ಪತ್ರ ಬರೆದಿದ್ದಾರೆ ಎಂದಿದೆ. ಸಾರ್ವತ್ರಿಕ ಆರೋಗ್ಯದ ಹಿತದೃಷ್ಟಿಯಿಂದ ಪರೀಕ್ಷಣಾ ಪ್ರಯೋಗಗಳನ್ನು ಜಗತ್ತಿನ ಇತರೆಡೆಗಳಲ್ಲಿಯೂ ತ್ವರಿತಗೊಳಿಸಲಾಗುತ್ತಿದೆ ಎಂದು ಅದು ಸಮರ್ಥಿಸಿಕೊಂಡಿದೆ. ಆದರೆ ಆಗಸ್ಟ್ 15 ಎಂದು ನಿರ್ದಿಷ್ಟ ಪಡಿಸಿರುವುದಕ್ಕೆ ವಿಶೇಷ ಕಾರಣಗಳೇನು ಎಂದೇನೂ ತಿಳಿಸಿಲ್ಲ.

ಐ.ಸಿ.ಎಂ.ಆರ್, ಅದರ ಅಡಿಯಲ್ಲಿರುವ ಪುಣೆಯ ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆ(ಎನ್.ಐ.ವಿ.) ಹೈದರಾಬಾದಿನಲ್ಲಿರುವ ಭಾರತ್ ಬಯೋಟೆಕ್ ಎಂಬ ಖಾಸಗಿ ಕಂಪನಿಯೊಂದಿಗೆ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಈ ಕೊವ್ಯಾಕ್ಸಿನ್ ಎಂಬ ಔಷಧಿಯ ಮನುಷ್ಯರ ಮೇಲಿನ ಕ್ಲಿನಕಲ್ ಟ್ರಯಲ್ಸ್ ಅಂದರೆ ಔಷಧಿ ಪರೀಕ್ಷಣಾ ಪ್ರಯೋಗಗಳಿಗೆ 'ಭಾರತದ ಔಷಧಿ ಮಹಾ ನಿಯಂತ್ರಣಾಧಿಕಾರಿ'(ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯ–ಡಿ.ಸಿ.ಜಿ.ಐ.) ಮಂಜೂರಾತಿ ಸಿಕ್ಕಿರುವುದೇ ಜೂನ್ 29ರಂದು. ಈ ಪರೀಕ್ಷಣೆಗಳಲ್ಲಿ ಭಾಗವಹಿಸಲು ದೇಶದ ವಿವಿಧೆಡೆಗಳಲ್ಲಿನ 12 ಆಸ್ಪತ್ರೆಗಳು ಮತ್ತು ಸಂಶೋಧನಾ ಕೇಂದ್ರಗಳನ್ನು ಆಯ್ಕೆಮಾಡಲಾಗಿದ್ದು ಅವು ಎಲ್ಲ ಮಂಜೂರಾತಿಗಳನ್ನು ತ್ವರಿತವಾಗಿ ಮಾಡಬೇಕು, ಇದನ್ನು ಪಾಲಿಸದಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಜುಲೈ 2ರಂದು ಐಸಿಎಂಆರ್ ಮಹಾ ನಿರ್ದೇಶಕ ಡಾ. ಬಲರಾಂ ಭಾರ್ಗವ ಪತ್ರ ಬರೆದಿರುವುದಾಗಿ ವರದಿಯಾಗಿದೆ. ಜುಲೈ 7ರ ಮೊದಲು ಈ ಪರೀಕ್ಷಣೆಯಲ್ಲಿ ಭಾಗವಹಿಸುವ ವ್ಯಕ್ತಿಗಳನ್ನು ಆರಿಸುವ ಕೆಲಸ ಆರಂಭವಾಗಬೇಕು ಎಂದೂ ತಾಕೀತು ಮಾಡಲಾಗಿದೆಯಂತೆ.

ಕೆಲವು ಔಷಧಿಗಳ ಅಡ್ಡ ಪರಿಣಾಮಗಳು ಬಹಳ ವಿಳಂಬವಾಗಿಯೂ ಕಾಣ ಬರಬಹುದು ಎಂಬ ಕಾರಣಕ್ಕೆ ಆಧುನಿಕ ವೈದ್ಯಕೀಯ ಪರೀಕ್ಷಣೆಗಳಲ್ಲಿ ಪ್ರಾಣಿಗಳ ಮೇಲೆ ಅವುಗಳ ಪ್ರಯೋಗಗಳು ಪೂರ್ಣಗೊಂಡ ಮೇಲೆ 'ಯಾದೃಚ್ ನಿಯಂತ್ರಿತ ಪರೀಕ್ಷಣೆ'(randomised controlled trial) ಒಂದು ಅತ್ಯುತ್ತಮ ಮಾನದಂಡ ಎಂದು ಪರಿಗಣಿಸಲಾಗಿದೆ. ಈ ಪರೀಕ್ಷಣೆಗಳ ಫಲಿತಾಂಶಗಳ ಮೇಲೆಯೇ ಅದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೊಳಗೆ ಪ್ರವೇಶಿಸಲು ಸಾಧ್ಯವಾದ್ದರಿಂದ ಸಂಶೋಧಕರು ಇದನ್ನು ಸಾವಿರಾರು ಮಂದಿಯ ಭಾಗವಹಿಸುವಿಕೆಯಿಂದ ನಡೆಸುತ್ತಾರೆ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಅತಾರ್ಕಿಕ–ಅಸಂಬದ್ಧ: ಪರಿಣಿತರ ಪ್ರತಿಕ್ರಿಯೆಗಳು


ಇದಲ್ಲದೆ ಈ ಲಸಿಕೆ ಅಭಿವೃದ್ಧಿ ಪಡಿಸುವ ಪ್ರಕ್ರಿಯೆ ಆರಂಭವಾದದ್ದು ಮೇ 9ರಂದು. ಕೇವಲ 50 ದಿನಗಳೊಳಗೆ ಪ್ರಾಣಿಗಳ ಮೇಲೆ ಈ ಔಷಧಿಯ ಪರೀಕ್ಷಣೆ ನಡೆದು ವರದಿಗಳನ್ನು ತಯಾರಿಸಿ, ಅದರ ವರದಿಗಳನ್ನು ಡಿ.ಸಿ.ಜಿ.ಐ.ಗೆ ಸಲ್ಲಿಸಿ ಅದು ಕ್ಲಿನಿಕಲ್ ಟ್ರಯಲ್‌ಗಳಿಗೆ ಅನುಮತಿ ನೀಡಿತೇ ಎಂಬುದೂ ಸ್ಪಷ್ಟವಿಲ್ಲ.

"ಒಂದು ಲಸಿಕೆಯನ್ನು ಪ್ರಕಟಿಸುವಲ್ಲಿನ ಪ್ರಕ್ರಿಯೆಗಳೇನು ಎಂದು ಯಾರಾದರೂ ಐ.ಸಿ.ಎಂ.ಆರ್. ನ ಮಹಾನಿರ್ದೇಶಕರಿಗೆ ಹೇಳಬೇಕಾಗಿದೆ.. ಭಾರತ್ ಬಯೊಟೆಕ್‌ಗೆ ಈಗಷ್ಟೇ (ಪರೀಕ್ಷಣಾ ಪ್ರಯೋಗದ) ಘಟ್ಟ 1 ಮತ್ತು 2 ರ ಅನುಮತಿ ಸಿಕ್ಕಿದೆ, ಇದಕ್ಕೆ ನಾಲ್ಕು ತಿಂಗಳಂತೂ ಬೇಕು..ಆರು ವಾರಗಳಲ್ಲಿ ಕೊಡಲು ಐಸಿಎಂಆರ್ ಬಳಿ ಯಾವ ಮಾಯಾದಂಡವಿದೆಯೋ" ಎಂದು ನಿವೃತ್ತ ಭಾರತ ಸರಕಾರದ ಆರೋಗ್ಯ ಕಾರ್ಯದರ್ಶಿ ಸುಜಾತಾ ರಾವ್ ಪ್ರತಿಕ್ರಿಯಿಸಿದ್ದಾರೆ.

ಐ.ಸಿ.ಎಂ.ಆರ್. ಪತ್ರದ ಪ್ರಕಾರವೇ ಇನ್ನೂ ಕ್ಲಿನಿಕಲ್ ಪ್ರಯೋಗ–ಪೂರ್ವ ಹಂತದಲ್ಲೇ ಇರುವ ಒಂದು ಲಸಿಕೆ ಪ್ರಯೋಗ ಪರೀಕ್ಷಣೆಗಳನ್ನು ಒಂದು ತಿಂಗಳಿಗಿಂತ ತುಸು ಹೆಚ್ಚಿನ ಅವಧಿಯಲ್ಲಿಯೇ ಪೂರ್ಣಗೊಳಿಸಲಾಗುತ್ತದೆ ಎಂದರೆ, ಅದರ ಪರಿಣಾಮಕಾರತ್ವವನ್ನು ಮೊದಲೇ ನಿರ್ಧರಿಸಲಾಗಿದೆಯೇ ಎಂದು ಅಂತರ್ರಾಷ್ಟ್ರೀಯ ಜೈವಿಕ ನೀತಿಶಾಸ್ತ್ರ ಸಂಘದ (International Association of Bioethics) 2017–19ರ ಅವಧಿಯ ಅಧ್ಯಕ್ಷ ಅನಂತ್ ಭಾನ್ ಟ್ವೀಟ್ ಮಾಡಿದ್ದಾರೆ. (ನ್ಯೂಸ್‌ಕ್ಲಿಕ್, ಜುಲೈ 3).)

ಐ.ಸಿ.ಎಂ.ಆರ್. ನ ಜೈವಿಕ ನೈತಿಕತೆ(ಬಯೋಎಥಿಕ್ಸ್) ಸಲಹಾ ಸಮಿತಿಯ ಅಧ್ಯಕ್ಷೆ ವಸಂತಾ ಮುತ್ತುಸ್ವಾಮಿ ಮಹಾನಿರ್ದೇಶಕರ ಪತ್ರವನ್ನು ನೋಡಿಲ್ಲ, ಆದರೆ ತಮ್ಮ ಅನುಭವದ ಪ್ರಕಾರ ಒಂದು ಲಸಿಕೆಯನ್ನು ಬಿಡುಗಡೆ ಮಾಡಬಹುದೇ ಎಂದು ಒಂದು ತಿಂಗಳಲ್ಲೇ ನಿರ್ಧರಿಸುವುದು ಕಷ್ಟ, ಕನಿಷ್ಟ ಒಂದು ವರ್ಷವಾದರೂ ಬೇಕಾಗುತ್ತದೆ ಎಂದಿದ್ದಾರೆ. (ಅಬಂತಿಕಾ ಘೋಷ್ ಮತ್ತು ಸಂಧ್ಯಾ ರಮೇಶ್, ದಿ ಪ್ರಿಂಟ್, ಜುಲೈ 3).

ವಿಶ್ವ ಆರೋಗ್ಯ ಸಂಘಟನೆ(ಡಬ್ಲ್ಯು.ಹೆಚ್.ಒ)ಯ ಮುಖ್ಯ ವಿಜ್ಞಾನಿ ಸೌಮ್ಯ ಸ್ವಾಮಿನಾಥನ್ ಒಂದು ಪತ್ರಿಕಾ ಸಂದರ್ಶನದಲ್ಲಿ ಈ ಬಗ್ಗೆ ಮತ್ತೆ–ಮತ್ತೆ ಕೇಳಿದಾಗ, ಒಂದು ಲಸಿಕೆಯನ್ನು ಅಭಿವೃದ್ಧಿ ಪಡಿಸುವಾಗ ಎಲ್ಲ ವೈಜ್ಞಾನಿಕ ಮತ್ತು ನೈತಿಕ ಮಾರ್ಗಸೂತ್ರಗಳನ್ನು ಪರಿಪಾಲಿಸುವುದು ಮಹತ್ವದ್ದಾಗುತ್ತದೆ ಎಂದು ಒತ್ತಿ ಹೇಳಿದ್ದಾರೆ(ದಿ ವೈರ್, ಜುಲೈ4). ಜಗತ್ತಿನಾದ್ಯಂತ ಲಸಿಕೆ ಅಭಿವೃದ್ಧಿಪಡಿಸುವ ಸುಮಾರು 150 ಪ್ರಯತ್ನಗಳು ನಡೆಯುತ್ತಿದ್ದು, 17–18 ಪ್ರಯೋಗ ಪರೀಕ್ಷಣಾ ಹಂತದಲ್ಲಿವೆ, ಒಂದೆರಡು ಮೂರನೇ ಘಟ್ಟ ತಲುಪಿವೆ, ಆದರೂ 2021ರ ಆರಂಭದಲ್ಲಿ ಒಂದು ಲಸಿಕೆ ಬಂದರೆ ಅದು ಅದೃಷ್ಟವೇ, ಸಾಕಷ್ಟು ಪ್ರಮಾಣದಲ್ಲಿ ಅದು ಲಭ್ಯವಾಗಬೇಕಾದರೆ ಮುಂದಿನ ವರ್ಷದ ಕೊನೆಯ ವರೆಗೂ ಕಾಯಬೇಕಾದೀತು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಭಾರತ್ ಬಯೊಟೆಕ್ ಕಂಪನಿಯೊಂದಿಗೆ ತಾನು ವೀಡಿಯೋ ಸಂಪರ್ಕದಲ್ಲಿದ್ದು, ತನಗೆ ತಿಳಿದ ಪ್ರಕಾರ ಅವರ ಮೊದಲ ಘಟ್ಟದ ಪರೀಕ್ಷಣೆಗಳು ಆರಂಭವಾಗಿಲ್ಲ, ಈ ಲಸಿಕೆಯನ್ನು ಆಗಸ್ಟ್ 15 ರಿಂದ ಜನರಿಗೆ ಕೊಡಲು ಸಾಧ್ಯವಿಲ್ಲ, ಈ ಬಗ್ಗೆ ಐ.ಸಿ.ಎಂ.ಆರ್. ಮಹಾನಿರ್ದೇಶಕ ಡಾ. ಬಲರಾಂ ಭಾರ್ಗವ ಅವರು ಸ್ಪಷ್ಟೀಕರಣ ನೀಡಬಹುದು ಎಂದೂ ಅವರು ಹೇಳಿದರು.



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಡಾ. ಸೌಮ್ಯ ಸ್ವಾಮಿನಾಥನ್ ಈ ಮೊದಲು ಐ.ಸಿ.ಎಂ.ಆರ್. ನ ಮಹಾನಿರ್ದೇಶಕರಾಗಿದ್ದರು.

ಆಗಸ್ಟ್ 15 ಯಾಕೆ?

ಮೇಲೆ ಹೇಳಿದಂತೆ ಐಸಿಎಂಆರ್‌ನ 'ಸ್ಪಷ್ಟೀಕರಣ' ಸೌಮ್ಯ ಸ್ವಾಮಿನಾಥನ್ ಅವರ ಸಂದರ್ಶನದ ಕೆಲವೇ ಗಂಟೆಗಳಲ್ಲಿ ಬಂತು. ಆದರೆ ಅದರಲ್ಲಿಯೂ ಆಗಸ್ಟ್ 15 ರ ಪ್ರಸ್ತಾಪ ಐಸಿಎಂಆರ್‌ನ ಮಹಾನಿರ್ದೇಶಕರ ಪತ್ರದಲ್ಲಿ ಏಕೆ ಬಂತು ಎಂದೇನೂ ತಿಳಿಯುವುದಿಲ್ಲ. ಕಳೆದ ವರ್ಷ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಭಾರತದ ಮಾನವ ಬಾಹ್ಯಾಕಾಶ ಯಾನದ ಮಿಷನ್ ಬಗ್ಗೆ ಇಸ್ರೋ ಪ್ರಕಟಿಸುವ ಮೊದಲೇ ಪ್ರಕಟಿಸಿದರು. ಈ ಬಾರಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭಾರತದ ಸ್ವದೇಶಿ ಲಸಿಕೆಯ ಬಗ್ಗೆ ಪ್ರಕಟಿಸಿ ರಾಜಕೀಯ ಮೇಲ್ಮೆಯನ್ನು ಪಡೆಯುವ ಪ್ರಯತ್ನದ ಭಾಗವಾಗಿ ಮಹಾನಿರ್ದೇಶಕರ ಪತ್ರದಲ್ಲಿ ಆಗಸ್ಟ್ 15ರ ಗಡುವನ್ನು ಹಾಕಿರಬಹುದು ಎಂದು ಈಗ ಭಾವಿಸಲಾಗುತ್ತಿದೆ.


ಆದರೆ ವೈಜ್ಞಾನಿಕ ಮುನ್ನಡೆಗಳು ಎಂದೂ ಆದೇಶದ ಪ್ರಕಾರ ಸಂಭವಿಸುವುದಿಲ್ಲ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಕೊವಿಡ್–19 ಕ್ಕೆ ಒಂದು ಔಷಧಿಯಾಗಿ ಒಂದು ಸ್ವದೇಶೀ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಎಲ್ಲ ಆರೋಗ್ಯ ಹಾಗು ಸುರಕ್ಷತಾ ನೀತಿ–ನಿಯಮಗಳನ್ನು ಬದಿಗೊತ್ತಿ ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯಂದು ಪ್ರಕಟಿಸಲು ಸಾಧ್ಯವಾಗುವಂತೆ ಬಲವಂತ ಮಾಡಿದರೆ ಅದಕ್ಕೆ ಮಾನವಜೀವಗಳ ಭೀಕರ ಬೆಲೆ ತೆರಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಕೆಲವು ಗಂಭೀರ ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ ಎಂದು ಅವರು ಹೇಳಿದ್ದಾರೆ:

- ಔಷಧಿ ನಿಯಂತ್ರಣದ ಹೊಣೆಯಿರುವ ಡಿ.ಸಿ.ಜಿ.ಐ. ಹೊಸ ಲಸಿಕೆ ಎಷ್ಟು ಸುರಕ್ಷಿತವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಮೌಲ್ಯಮಾಪನ ಮಾಡದೆ ಐ.ಸಿ.ಎಂ.ಆರ್. ಅದನ್ನು ಆರಂಭಿಸುವ ದಿನಾಂಕದ ಬಗ್ಗೆ ನಿರ್ಧರಿಸಲು ಹೇಗೆ ಸಾಧ್ಯ? ಒಂದು ಖಾಸಗೀ ಕಂಪನಿ ಉತ್ಪಾದಿಸುವ ಒಂದು ಲಸಿಕೆಯ ಪರೀಕ್ಷಣೆಯನ್ನು ಬಲವಾಗಿ ಮುಂದೊತ್ತುವಾಗ ಐ.ಸಿ.ಎಂ.ಆರ್. ಈ ವಿಷಯದಲ್ಲಿ ಯಾವ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಿದೆ?
- ಐ.ಸಿ.ಎಂ.ಆರ್. ಪ್ರಯೋಗ ಪರೀಕ್ಷಣೆಗೆ ಆಯ್ಕೆಯಾದ ಆಸ್ಪತ್ರೆಗಳು ಮತ್ತು ಸಂಸ್ಥೆಗಳು ತಮ್ಮ ನೈತಿಕತಾ ಸಮಿತಿಗಳಿಗೆ ಪರೀಕ್ಷಣಾ ವಿಧಿ–ವಿಧಾನಗಳು, ಒಪ್ಪಿಗೆ ವಿಧಾನಗಳು ಮತ್ತು ಹೊಣೆಗಾರಿಕೆಯನ್ನು ನಿರ್ಧರಿಸಿಲು ಸೂಕ್ತ ಸಮಯ ಕೊಡದೆ ಇವನ್ನೆಲ್ಲ ತ್ವರಿತಗೊಳಿಸಬೇಕು ಎಂದು ಬಲವಂತ ಪಡಿಸಬಹುದೇ?
- ಈ ಪ್ರಯೋಗ ಪರೀಕ್ಷಣೆಗಳನ್ನು ನಡೆಸುವ ಈ 12 ಸಂಸ್ಥೆಗಳನ್ನು ಐ.ಸಿ.ಎಂ.ಆರ್. ಹೇಗೆ ಆಯ್ಕೆ ಮಾಡಿದೆ? ಇವುಗಳಲ್ಲಿ ಮೂರು ಖಾಸಗಿ ಸಂಸ್ಥೆಗಳು, ಒಬ್ಬ ಖಾಸಗಿ ವೈದ್ಯವೃತ್ತಿಯವರೂ ಇದ್ದಾರೆ, ಅವರಿಗೆ ಸಾಂಸ್ಥಿಕ ವಿಳಾಸವೂ ಇಲ್ಲ.
- ಐ.ಸಿ.ಎಂ.ಆರ್. ಈ ಸಂಸ್ಥೆಗಳು ತಾನು ಹೇಳಿದಂತೆ ಕೇಳುವಂತೆ ಮಾಡಲು ಬೆದರಿಕೆಗಳನ್ನು ಏಕೆ ಬಳಸುತ್ತಿದೆ? ಇವುಗಳಲ್ಲಿ ಕೆಲವು, ಉದಾ: ಎನ್.ಐ.ಎಂ.ಎಸ್, ರಾಜ್ಯ ಸರಕಾರಗಳು ನಡೆಸುವ ಸಂಸ್ಥೆಗಳು, ಸಂಬಂಧಪಟ್ಟ ರಾಜ್ಯ ಸರಕಾರಗಳ ಅನುಮತಿ ಇದಕ್ಕೆ ಇದೆಯೇ?
- ಈ ಪ್ರಯೋಗ ಪರೀಕ್ಷಣೆಗಳಲ್ಲಿ ಎಷ್ಟು ಮಂದಿಯ ಅಧ್ಯಯನ ಮಾಡಲಾಗುತ್ತದೆ? ಆಗಸ್ಟ್ 14 ರೊಳಗೆ ಘಟ್ಟ 1, 2 ಮತ್ತು 3 ರ ಪರೀಕ್ಷಣೆಗಳನ್ನು ಮತ್ತು ಅವುಗಳ ವಿಶ್ಲೇಷಣೆಯನ್ನು ಪೂರ್ಣಗೊಳಿಸಲು ಸಾಧ್ಯವೇ? ಸ್ವತಂತ್ರ "ಮಾಹಿತಿ ಸುರಕ್ಷಾ ಉಸ್ತುವಾರಿ ಸಮಿತಿ"(ಡಿ.ಎಸ್.ಎಂ.ಸಿ.)ಯ ಸದಸ್ಯರು ಯಾರು?



ಆಗಸ್ಟ್ 15 ರ ಒಂದು ಫೋಟೋಶೂಟ್‌ಗಾದರೂ ಹೋಗ್ರಪ್ಪಾ!
ವ್ಯಂಗ್ಯಚಿತ್ರ: ಶುಭಾನಿ, ಡೆಕ್ಕನ್ ಕ್ರಾನಿಕಲ್



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕೊವಿಡ್–19 ಉದ್ಯೋಗ ಬಿಕ್ಕಟ್ಟಿಗೆ ಪೂರ್ಣ ಉದ್ಯೋಗವೇ ಸಂಜೀವಿನಿ



ಹಲವಾರು ವರ್ಷಗಳಿಂದಲೂ ನವ ಉದಾರವಾದವು ಕಾರ್ಮಿಕ ವರ್ಗದ ಮೇಲೆ ನಡೆಸಿದ ದಾಳಿಗಳ ಜೊತೆಗೆ ಕೋವಿಡ್–19ರ ಹೊಡೆತವೂ ಸೇರಿಕೊಂಡ ಪರಿಣಾಮವಾಗಿ ನಿರುದ್ಯೋಗ ಮತ್ತು ಅಸಮಾನತೆಗಳು ಹೆಚ್ಚಿವೆ. ಈ ಪರಿಸ್ಥಿತಿಯು ಮೂವತ್ತರ ದಶಕದಲ್ಲಿ ಉಂಟಾಗಿದ್ದ ಮಹಾ ಆರ್ಥಿಕ ಕುಸಿತ(Great Depression)ದೊಂದಿಗೆ ಹೋಲುತ್ತದೆ. ಆಗ ಅದನ್ನು ಎದುರಿಸುವಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 'ನ್ಯೂಡೀಲ್' (New Deal–ಹೊಸ ವ್ಯವಹಾರ) ಎಂದು ಹೆಸರಾದ ಆರ್ಥಿಕ ಧೋರಣೆ ರೂಪಿತವಾಯಿತು. ಇಂದಿನ ನಿರುದ್ಯೋಗವನ್ನು ನಿವಾರಿಸಲು ವಿಶ್ವಕ್ಕೆ ಅಂತಹ ಹೊಸದೊಂದು 'ನ್ಯೂಡೀಲ್'ನ ಅಗತ್ಯವಿದೆ ಎನ್ನುತ್ತಾರೆ ಪ್ರೊ. ರಾಬರ್ಟ್ ಪೊಲಿನ್, ಅಮೇರಿಕಾದ ಒಬ್ಬ ಪ್ರತಿಷ್ಠಿತ ಅರ್ಥಶಾಸ್ತ್ರ ಪ್ರಾಧ್ಯಾಪಕ ಮತ್ತು ಲೇಖಕ, ಸ್ವಿಟ್ಜರ್ಲೆಂಡ್‌ನ ಲಿನ್ ಫ್ರಿಸ್ ಎಂಬುವರು ನಡೆಸಿರುವ ಒಂದು ಸಂದರ್ಶನದಲ್ಲಿ. ಲಿನ್ ಫಿಸ್ ಜಾಗತಿಕ ಆರ್ಥಿಕ ಸುದ್ದಿಗಳ ಬಗ್ಗೆ ವೀಡಿಯೊ ತಯಾರಿಸುವ ಒಬ್ಬ ಸ್ವತಂತ್ರ ನಿರ್ಮಾಪಕಿ. ಆಸಕ್ತರು ಈ ಸಂದರ್ಶನವನ್ನು Newsclick ನಲ್ಲಿ ಈ ಕೊಂಡಿಯಲ್ಲಿ ನೋಡಬಹುದು.

https://www.newsclick.in/revert-full-employment-overcome-neoliberalism-and-covid-19-jobs-crisis

ಅದರ ಸಂಕ್ಷಿಪ್ತ ರೂಪವನ್ನು ಇಲ್ಲಿ ಕೊಡಲಾಗಿದೆ. ಸಂಗ್ರಹ–ಅನುವಾದ: ಕೆ.ಎಂ.ನಾಗರಾಜ್

(ಕಳೆದ ವಾರ ಪ್ರಕಟವಾದ ಭಾಗದಲ್ಲಿ ನಿರುದ್ಯೋಗದ ಬಗ್ಗೆ ಕಾರ್ಲ್ ಮಾರ್ಕ್ಸ್, ಜಾನ್ ಮೇನಾರ್ಡ್ ಕೀನ್ಸ್, ಮೈಕೆಲ್ ಕಲೇಟ್‌ಸ್ಕಿ ಮತ್ತು ಮಿಲ್ಟನ್ ಫ್ರೀಡ್‌ಮನ್ ಇವರುಗಳು ಮಾಡಿರುವ ವ್ಯಾಖ್ಯಾನ–ಅವಲೋಕನಗಳ ಬಗ್ಗೆ ಪೊಲಿನ್ ಅವರ ಮಾತುಗಳನ್ನು ಓದಿದ್ದೀರಿ. ಮುಂದೆ.......)

ಫ್ರಿಸ್: ಕೀನ್ಸ್ ಅವರನ್ನು ಬೃಹದರ್ಥಶಾಸ್ತ್ರ (Macroeconomics)ದ ಪಿತಾಮಹ ಎಂದು ಕರೆಯಲಾಗಿದೆ. ಆ ಸಮಯದಲ್ಲಿ ಬೃಹದರ್ಥಶಾಸ್ತ್ರದ ಉದ್ದೇಶವೇನಿತ್ತು? 1970ರ ದಶಕದ ಕೊನೆಯ ಭಾಗದ ನಂತರ ಅದರ ಉದ್ದೇಶವು ನಾಟಕೀಯವಾಗಿ ಬದಲಾದದ್ದು ಹೇಗೆ?

ಪೊಲಿನ್: ಮಹಾ ಆರ್ಥಿಕ ಕುಸಿತಕ್ಕೂ ಮೊದಲು ಮತ್ತು ಕೀನ್ಸ್ ಹುಟ್ಟುವುದಕ್ಕೂ ಮೊದಲು ಅರ್ಥಶಾಸ್ತ್ರ ಎಂಬ ಜ್ಞಾನಶಿಸ್ತಿನ ಬಗ್ಗೆ ತಿಳುವಳಿಕೆ ಇತ್ತು. ಬೃಹತ್ ನಿರುದ್ಯೋಗ ಸಮಸ್ಯೆಯ ಬಗ್ಗೆ ಮಾರ್ಕ್ಸ್ ಹೆಚ್ಚು ಗಮನ ಹರಿಸಿದ್ದರು. ಆದರೆ, ಮಹಾ ಆರ್ಥಿಕ ಕುಸಿತದ ನಂತರ, ಒಟ್ಟಾರೆ ಅರ್ಥವ್ಯವಸ್ಥೆಯ ಸಮಸ್ಯೆಗಳನ್ನು ಪರಿಹರಿಸುವತ್ತ ಹೆಚ್ಚು ಗಮನ ಹರಿಸಲಾಯಿತು. ಆಗ, ಈ 'ಮ್ಯಾಕ್ರೊಎಕನಾಮಿಕ್ಸ್' ಎಂಬ ಪದ ಬಳಕೆಗೆ ಬಂತು. ಆರಂಭದಲ್ಲಿ, ಅದರ ಏಕೈಕ ಉದ್ದೇಶವೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಪೂರ್ಣ ಪ್ರಮಾಣದ ಉದ್ಯೋಗದ ಗುರಿ ಸಾಧಿಸುವುದು ಮತ್ತು ಅದನ್ನು ಉಳಿಸಿಕೊಳ್ಳುವುದು. ಅದೊಂದೇ ಮುಖ್ಯವಾಗಿತ್ತು.

ಪ್ರತಿಯೊಬ್ಬರಿಗೂ ಉದ್ಯೋಗ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರದ ನೀತಿಯಾಗಿತ್ತು. ಆದ್ದರಿಂದ, ಒಟ್ಟಾರೆ ಚಟುವಟಿಕೆ (ಈಗ ಅದನ್ನು ಜಿಡಿಪಿ ಎಂದು ಕರೆಯುತ್ತೇವೆ) ಮಟ್ಟವು ದೊಡ್ಡ ಪ್ರಮಾಣದ ನಿರುದ್ಯೋಗ (7%, 8%, 9%) ಉಂಟುಮಾಡಿದರೆ, ಸರ್ಕಾರವು ಹೆಚ್ಚು ಹೆಚ್ಚು ಖರ್ಚುಗಳ ಮೂಲಕ ಎಲ್ಲರಿಗೂ ಉದ್ಯೋಗ ಸಿಗುವ ವರೆಗೆ ಉದ್ಯೋಗಗಳನ್ನು ಸೃಷ್ಟಿಸಬೇಕಿತ್ತು. ಈ ಕಾರ್ಯವು, ಸರ್ಕಾರ ಸಾಲ ಮಾಡಿ ಅದನ್ನು ಖರ್ಚು ಮಾಡುವ ಮೂಲಕ ಜರುಗಿಸಬೇಕಿತ್ತು. ಆದ್ದರಿಂದ, ಅದು ಕೊರತೆ ವೆಚ್ಚವಾಗುತ್ತಿತ್ತು.

ಉದ್ಯೋಗ ಒದಗಿಸುವ ಉದ್ದೇಶಕ್ಕಾಗಿ ಸರ್ಕಾರಗಳು ತೆರಿಗೆಯಿಂದ ಬಂದ ಹಣವನ್ನು ಖರ್ಚು ಮಾಡುತ್ತಿರಲಿಲ್ಲ. ಉದ್ಯೋಗ ಒದಗಿಸುವ ಉದ್ದೇಶಕ್ಕಾಗಿ ಸರ್ಕಾರಗಳು ಬಳಸುತ್ತಿದ್ದ ಸಾಧನವೆಂದರೆ, ಸಾಲ. ಸರಕಾರಗಳು ಸಾಲ ಮಾಡಿ ಅದನ್ನು ಖರ್ಚು ಮಾಡುತ್ತಿದ್ದವು. ಪೂರ್ಣ ಪ್ರಮಾಣದ ಉದ್ಯೋಗ ಸಾಧಿಸಿದ ನಂತರ ಸಾಲ ತೀರಿಸಲಾಗುತ್ತಿತ್ತು.

ಈ ಅವಧಿಯಲ್ಲಿ ಕೇಂದ್ರ ಬ್ಯಾಂಕುಗಳು ಬಳಸಿದ ಒಂದು ಸಾಧನವೆಂದರೆ, ಬಡ್ಡಿ ದರಗಳು. ನರುದ್ಯೋಗ ಹೆಚ್ಚಿದರೆ ಕೇಂದ್ರ ಬ್ಯಾಂಕ್ ಬಡ್ಡಿ ದರಗಳನ್ನು ಕಡಿಮೆ ಮಾಡುತ್ತಿತ್ತು. ಬಡ್ಡಿ ದರ ಕಡಿಮೆ ಇದ್ದಾಗ ವ್ಯಾಪಾರಿಗಳು ಸಾಲ ಪಡೆಯುವ ಸಾಧ್ಯತೆ ಹೆಚ್ಚು. ಅದೇ ರೀತಿಯಲ್ಲಿ, ಮನೆ ಖರೀದಿಸಲು ಅಥವಾ ಕಾರು ಖರೀದಿಸಲು ಗ್ರಾಹಕರು ಸಾಲ ಪಡೆಯುವ ಸಾಧ್ಯತೆ ಹೆಚ್ಚು. ಅರ್ಥವ್ಯವಸ್ಥೆಯನ್ನು ಈ ರೀತಿಯಲ್ಲಿ ಉತ್ತೇಜನಗೊಳಿಸಿ ಉದ್ಯೋಗಗಳು ಪೂರ್ಣ ಪ್ರಮಾಣದಲ್ಲಿ ಇರುವಂತೆ ನಿರ್ವಹಿಸಲಾಗುತ್ತಿತ್ತು. 40ರ ದಶಕದ ಕೊನೆಯಿಂದ 1970ರ ದಶಕದ ಆರಂಭದವರೆಗೂ ಬಡ್ಡಿ ದರವು ಒಂದು ಉಪಕರಣವೇ(tool kit) ಆಗಿತ್ತು. ಈ ವಿಧಾನವನ್ನು ಎಲ್ಲ ದೇಶಗಳೂ ತುಸು ಹೆಚ್ಚು ಅಥವಾ ತುಸು ಕಡಿಮೆ ಪ್ರಮಾಣದಲ್ಲಿ ಅನುಸರಿಸಿದವು. ಮೂಲತಃ ಅದೊಂದು ಮಾದರಿಯೇ ಆಯಿತು.

1970ರ ದಶಕದಲ್ಲಿ ತೈಲ ಬೆಲೆ ಏರಿಕೆಯಿಂದಾಗಿ ಹಣದುಬ್ಬರ ಉಂಟಾಗಿತ್ತು. ಹಣದುಬ್ಬರವು ಅತಿ ಹೆಚ್ಚಿನ ಮಟ್ಟದಲ್ಲಿತ್ತು. 1973ರಲ್ಲಿ ತೈಲ ಬೆಲೆ 300% ಏರಿಕೆಯಾಗಿತ್ತು. ಮತ್ತೆ 1979ರಲ್ಲಿ 300% ಏರಿಕೆಯಾಗಿತ್ತು. ಪಾಶ್ಚಿಮಾತ್ಯ ಬಂಡವಾಳಶಾಹಿ ಅರ್ಥವ್ಯವಸ್ಥೆಗಳನ್ನು ಅದು ನಿಜಕ್ಕೂ ಕಂಗೆಡಿಸಿತ್ತು.

ಉನ್ನತ–ಆದಾಯದ ಶ್ರೀಮಂತ ಯೂರೋಪಿಯನ್ ಅರ್ಥವ್ಯವಸ್ಥೆಗಳು 1970ರ ದಶಕದ ಆರಂಭದವರೆಗೂ ಪೂರ್ಣ ಉದ್ಯೋಗದ ಸ್ಥಿತಿಗೆ ಹತ್ತಿರದಲ್ಲಿದ್ದವು. ನಿರುದ್ಯೋಗವು ಹೆಚ್ಚೆಂದರೆ 1.5% – 2% ಮಟ್ಟದಲ್ಲಿತ್ತು. ತೈಲ ಬೆಲೆ ಆಘಾತದಿಂದಾಗಿ ಈ ಯಶಸ್ವಿ ಕೀನ್ಸ್ ಆರ್ಥಿಕ ಮಾದರಿಯು ಸಂಪೂರ್ಣವಾಗಿ ಉರುಳಿ ಬಿತ್ತು. ಆಗ, ಆರ್ಥಿಕ ನೀತಿಯಲ್ಲಿ ಆಗಿದ್ದ ಒಂದು ಗಮನಾರ್ಹ ಪಲ್ಲಟ ಎಂದರೆ, ಪೂರ್ಣ ಉದ್ಯೋಗ ಸ್ಥಿತಿಯನ್ನು ಕಾಪಾಡಿಕೊಳ್ಳುವುದರ ಬದಲಾಗಿ ಹಣದುಬ್ಬರವನ್ನು ನಿಯಂತ್ರಿಸುವುದು ಅದಕ್ಕೆ ಮುಖ್ಯವಾಯಿತು.

ತೈಲ ಬೆಲೆ ಆಘಾತವು ಹಣದುಬ್ಬರಕ್ಕೆ ಕಾರಣವಾದಾಗ, ಈ ಸರ್ಕಾರಗಳು ಮಿಲ್ಟನ್ ಫ್ರೀಡ್‌ಮನ್‌ನಂತಹ ಜನರ ಬಳಿ ಹಿಂದಿರುಗಿದವು. ಅವರು ಯಾವತ್ತೂ ಹೀಗೆ ಹೇಳುತ್ತಿದ್ದರು: ಕಾರ್ಮಿಕರಿಗೆ ಚೌಕಾಶಿ ಮಾಡುವ ಅಧಿಕಾರ ಕೊಟ್ಟರೆ ಹಣದುಬ್ಬರಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಕಾರ್ಮಿಕ ಸಂಘಟನೆಗಳು ತುಂಬಾ ಬಲಿಷ್ಟವಾಗಿವೆ. ಕನಿಷ್ಟ ವೇತನ, ನಿರುದ್ಯೋಗ ವಿಮೆ ಮುಂತಾದ ಅನೇಕ ಕಾನೂನುಗಳಿವೆ. ಆದ್ದರಿಂದ, ಅವರ ಈ ಚೌಕಾಶಿಯ ಶಕ್ತಿಯನ್ನು ಮೊಟಕುಗೊಳಿಸಬೇಕು ಎಂಬುದು ಮಿಲ್ಟನ್ ಫ್ರೀಡ್‌ಮನ್ ವಾದವಾಗಿತ್ತು. ಅದರಂತೆ, ರೀತಿ–ನೀತಿಗಳ ದಿಕ್ಕಿನಲ್ಲಿ ಒಂದು ಬೃಹತ್ ಬದಲಾವಣೆ ಆರಂಭವಾಯಿತು. 1979ರಲ್ಲಿ ಇಂಗ್ಲೆಂಡ್‌ನಲ್ಲಿ ಮಾರ್ಗರೆಟ್ ಥ್ಯಾಚರ್ ಮತ್ತು ಅಮೇರಿಕಾದಲ್ಲಿ 1980ರಲ್ಲಿ ರೊನಾಲ್ಡ್ ರೀಗನ್ ಆಯ್ಕೆಯಾದ ನಂತರ ಆರ್ಥಿಕ ನೀತಿಗಳ ಬದಲಾವಣೆ ವೇಗ ಪಡೆಯಿತು. ಥ್ಯಾಚರ್ ಮತ್ತು ರೀಗನ್, ಕಾರ್ಮಿಕ ವರ್ಗದ ಕಟ್ಟಾ ವಿರೋಧಿಯಾಗಿದ್ದರು.

ಹಣದುಬ್ಬರವನ್ನು ನಿಯಂತ್ರಿಸುವುದು ಕಾರ್ಮಿಕರ ಮೇಲೆ ದಾಳಿ ಮಾಡಲು ಒಂದು ನೆಪವಾಯಿತು. ಮತ್ತು ದಾಳಿ ಜರುಗಿತೂ ಕೂಡಾ. ಅದೇ, ನವ ಉದಾರವಾದೀ ಶಕೆಯ ಆರಂಭ. ಆರ್ಥಿಕ ನೀತಿಗಳ ಮೂಲಕ ದುಡಿಯುವ ವರ್ಗದ ಮೇಲೆ ಭಾರೀ ಪ್ರಹಾರ ನಡೆಸುವುದೇ ಒಂದು ಬಲವಾದ ಉದ್ದೇಶವಾಗಿತ್ತು.

ಫ್ರಿಸ್: 1990ರ ದಶಕದಲ್ಲಿ, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ನವಉದಾರವಾದಿ ಆರ್ಥಿಕ ನೀತಿಗಳು ನೆಲೆಸಿದ ಬಗೆಯನ್ನು ಹೇಗೆ ವಿವರಿಸುತ್ತೀರಿ?

ಪೊಲಿನ್: ಒಂದು ಪ್ರಕ್ರಿಯೆಯ ಮೂಲಕ ನವ ಉದಾರವಾದವು ತಳ ಊರಿ ಬಲಗೊಂಡಿತು. ಈ ಪ್ರಕ್ರಿಯೆಯಲ್ಲಿ, ಸರ್ಕಾರಗಳು ಉದ್ಯೋಗ ಒದಗಿಸುವುದರ ಬದಲು ಹಣದುಬ್ಬರದ ನಿಯಂತ್ರಣದ ಮೇಲೆ ತಮ್ಮ ಇಡೀ ಗಮನವನ್ನು ಕೇಂದ್ರೀಕರಿಸಿದವು. ಹಣಕಾಸು ಮಾರುಕಟ್ಟೆಗಳ ಮೇಲಿನ ನಿಯಂತ್ರಣವನ್ನು ಕಳಚಿಹಾಕಲಾಯ್ತು. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಸಾಧಿಸಲು ಹೊಂದಿದ್ದ ಸಮಾನತೆಯ ಗುರಿಯನ್ನು ಕೈಬಿಡಲಾಯಿತು. ಸಾರ್ವಜನಿಕ ವಲಯದ ಮೇಲೆ ಆಕ್ರಮಣ ಮಾಡಿ ಅವುಗಳನ್ನು ಖಾಸಗೀಕರಿಸಲಾಯ್ತು. ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವುದಕ್ಕಾಗಿ ಅರ್ಥವ್ಯವಸ್ಥೆಯನ್ನು ವಿಸ್ತರಿಸುವ ಉದ್ದೇಶಕ್ಕೆ ಬದಲಾಗಿ ಮಿತವ್ಯಯ ನೀತಿಯನ್ನು ಕಠೋರವಾಗಿ ಪಾಲಿಸಲಾಯ್ತು. ಈ ಎಲ್ಲ ವಿಷಯಗಳ ಬಗ್ಗೆ ಮಿಲ್ಟನ್ ಫ್ರೀಡ್‌ಮನ್ ಅನೇಕ ವರ್ಷಗಳಿಂದಲೂ ಮಾತನಾಡುತ್ತಲೇ ಇದ್ದರು. ಈ ನವ ಉದಾರವಾದಿ ನೀತಿಗಳ ಪ್ಯಾಕೇಜ್ ಅನ್ನು ಯಾವಾಗ ಅಮೇರಿಕಾದಲ್ಲಿ ಡೆಮೊಕ್ರಾಟಿಕ್ ಪಕ್ಷ, ಇಂಗ್ಲೆಂಡಿನಲ್ಲಿ ಲೇಬರ್ ಪಾರ್ಟಿ ಮತ್ತು ಜರ್ಮನಿಯಲ್ಲಿ ಸೋಷಿಯಲ್ ಡೆಮಾಕ್ರಾಟಿಕ್ ಪಕ್ಷಗಳು ಅಪ್ಪಿಕೊಂಡವೋ ಆಗ ಅದಕ್ಕೆ ಆನೆಯ ಬಲ ದೊರೆಯಿತು.

ಮುಖ್ಯವಾಗಿ, ಅಮೇರಿಕಾದಲ್ಲಿ ಡೆಮೊಕ್ರಾಟಿಕ್ ಪಕ್ಷ, ಇಂಗ್ಲೆಂಡಿನಲ್ಲಿ ಲೇಬರ್ ಪಾರ್ಟಿ ಮತ್ತು ಜರ್ಮನಿಯಲ್ಲಿ ಸೋಷಿಯಲ್ ಡೆಮಾಕ್ರಾಟಿಕ್ ಪಕ್ಷಗಳು ಕಾರ್ಮಿಕರ ಹಿತರಕ್ಷಣೆಗಾಗಿ ಒಂದಿಷ್ಟಾದರೂ ಬದ್ಧತೆ ಹೊಂದಿದ್ದಲ್ಲಿ ನವ ಉದಾರವಾದವು ಬಲಗೊಳ್ಳುವುದಿರಲಿ ತಳ ಊರಲು ಎಂದಿಗೂ ಸಾಧ್ಯವಾಗುತ್ತಿರಲಿಲ್ಲ. ಸೊಗಸುಗಾರ ಬಿಲ್ ಕ್ಲಿಂಟನ್ ಮತ್ತು ಅದ್ಭುತ ಭಾಷಣಕಾರ ಒಬಾಮಾ, ನವ ಉದಾರವಾದ ಆರ್ಥಿಕ ನೀತಿಗಳಿಗೆ ಬಲ ತುಂಬಿದರು. ಅವರು. ಜನರ ನೋವಿನ ಬಗ್ಗೆ ಮಾತನಾಡಬಹುದಿತ್ತು. ಮೊದಲ ಕರಿಯ ರಾಷ್ಟ್ರಪತಿ ಎಂಬ ಹೆಗ್ಗಳಿಕೆಯ ಮನುಷ್ಯನೂ ಶಾಂತವಾಗಿಯೇ ಇದ್ದ.

ವಾಸ್ತವವೇನೆಂದರೆ, ಕ್ಲಿಂಟನ್ ಮತ್ತು ಡೆಮೊಕ್ರಾಟ್‌ಗಳು ರಿಪಬ್ಲಿಕನ್ನರಂತೆಯೇ ವಾಲ್ ಸ್ಟ್ರೀಟ್(ಅಮೆರಿಕಾದ ಶೇರು ಮಾರುಕಟ್ಟೆ) ತಿದಿ ಒತ್ತಿದರು. ಡೆಮೊಕ್ರಾಟ್‌ಗಳ ಇಂತಹ ಬೆಂಬಲದಿಂದಾಗಿಯೇ ನವ ಉದಾರವಾದಿ ಯೋಜನೆಗೆ ಪೂರ್ಣ ಪ್ರಮಾಣದ ಬಲ ದೊರೆಯಿತು. 1998ರಲ್ಲಿ ಅಮೆರಿಕದ ಹಣಕಾಸು ಮಾರುಕಟ್ಟೆಗಳ ನಿಯಂತ್ರಣವನ್ನು ಕಳಚಿಹಾಕುವ ತೀರ್ಮಾನಕ್ಕೆ ಅಧ್ಯಕ್ಷ ಬಿಲ್ ಕ್ಲಿಂಟನ್ ಸಹಿ ಹಾಕಿದರು. ಆತ ಡೆಮಾಕ್ರಾಟ್. ಇದೊಂದು ಎಡ ಪಂಥದ ಪಕ್ಷ ಎಂಬ ಪ್ರತೀತಿ ಇತ್ತು. ಆದರೆ, ಅವರು ವಾಲ್ ಸ್ಟ್ರೀಟ್ ತಮಗೆ ಏನು ಬೇಕೋ ಅದನ್ನು ಮಾಡಲು ಬಿಟ್ಟರು. ನಾವೇನೂ ಅದಕ್ಕೆ ಕಡಿಮೆ ಇಲ್ಲ ಎಂಬಂತೆ, ಇಂಗ್ಲೆಂಡಿನಲ್ಲಿ ಲೇಬರ್ ಪಾರ್ಟಿಯ ಟೋನಿ ಬ್ಲೇರ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ಸೋಷಿಯಲ್ ಡೆಮಾಕ್ರಾಟಿಕ್ ಪಕ್ಷದ ಶ್ರೋಡರ್ ನಡೆದುಕೊಂಡರು.

ಹಾಗಾಗಿ, ನವ ಉದಾರವಾದಿ ಯೋಜನೆಯು, ಮುಖ್ಯಧಾರೆಯ ಪಕ್ಷಗಳು ನೀರೆರೆದ ಒಂದು ಏಕೀಕೃತ ಯೋಜನೆಯಾಗಿ ವಿಕಾಸಗೊಂಡಿತು. ಕ್ಲಿಂಟನ್, ಬುಷ್–1, ಬುಷ್–2 ಮತ್ತು ಒಬಾಮಾ ಇವರುಗಳು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಸಮಾನತೆಯು ನಿರಂತರವಾಗಿ ಏರಿಕೆ ಕಂಡಿತು.

ಫ್ರಿಸ್: ನವ ಉದಾರವಾದಿ ಆರ್ಥಿಕ ಚಿಂತನೆಯು ಜಗತ್ತಿನಾದ್ಯಂತ ಕೇವಲ ಸೈದ್ಧಾಂತಿಕವಾಗಿ ಪಸರಿಸಿ ಪರಿವರ್ತನೆಗೊಳ್ಳಲಿಲ್ಲ, ಅದರಲ್ಲಿ ಬಲಾತ್ಕಾರವಿತ್ತು ಎಂಬುದರ ಬಗ್ಗೆ ಉದಾಹರಣೆಯಾಗಿ ನಿಮಗೆ ಅನುಭವ ಇರುವ ದಕ್ಷಿಣ ಆಫ್ರಿಕಾದ ಬಗ್ಗೆ ತಿಳಿಸಿ.

ಪೊಲಿನ್: ವರ್ಣಭೇದ ನೀತಿಯನ್ನು ತಲೆಕೆಳಗಾಗಿಸಿದ ದಕ್ಷಿಣ ಆಫ್ರಿಕಾದ ವಿದ್ಯಮಾನವು ಒಂದು ಸುಂದರ ಕ್ರಾಂತಿಯೇ. 27 ವರ್ಷಗಳ ಸೆರೆವಾಸದ ನಂತರ ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗುತ್ತಾರೆ. ಇವು ನಂಬಲಸಾಧ್ಯವಾದ ಐತಿಹಾಸಿಕ ಸಾಧನೆಗಳು. ಅಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಜಾಗತಿಕ ಹಣಕಾಸು ಬಂಡವಾಳದ ಇಚ್ಛೆಗೆ ವಿರುದ್ಧವಾಗಿ ಅವರು ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಯಾವುದೇ ಹೂಡಿಕೆ ಆಗುವುದಿಲ್ಲ. ಆಮದು ಮಾಡಿಕೊಳ್ಳಲು ಬೇಕಾದ ಹಣವೂ ಇರಲಿಲ್ಲ. ಆದ್ದರಿಂದ, ವಾಲ್ ಸ್ಟ್ರೀಟ್ ನಿರ್ಧರಿಸಿದ ನವ ಉದಾರವಾದಿ ಬಂಡವಾಳಶಾಹಿಯ ಚೌಕಟ್ಟಿನೊಳಗೆ ಆ ಸರ್ಕಾರವು ಅಧಿಕಾರ ನಡೆಸಬೇಕಾಯಿತು.

ಆ ದೃಷ್ಟಿಕೋನವನ್ನು ಪ್ರಶ್ನಿಸುವುದು ಬಹಳ ಕಷ್ಟ. ಆದ್ದರಿಂದ ನೀವು ಹೀಗೆ ಹೇಳಲೇಬೇಕು: ಬಂಡವಾಳಶಾಹಿಗಳಿಗೆ ಸವಾಲೊಡ್ಡುವ ಸಾಮರ್ಥ್ಯವುಳ್ಳ ಒಂದು ರಾಜಕೀಯ ಚಳುವಳಿ ನಮ್ಮದು. ಅಸಮಾನತೆಯನ್ನು ವಿರೋಧಿಸುವವರನ್ನು ನಾವು ಆಯ್ಕೆ ಮಾಡುತ್ತೇವೆ. ನಮಗೆ ಹೆಚ್ಚಿನ ಸಮಾನತೆ ಬೇಕು. ಆರೋಗ್ಯ ರಕ್ಷಣೆ, ಮಕ್ಕಳ ಪಾಲನೆ, ಹಿರಿಯ ಆರೈಕೆ ಇವುಗಳ ಮೇಲೆ ಹೆಚ್ಚು ಸಾಮಾಜಿಕ ಹೂಡಿಕೆಯನ್ನು ನಾವು ಬಯಸುತ್ತೇವೆ. ಇದು ಕಾರ್ಲ್ ಪೊಲ್ಯಾನಿ ಅವರ ಮೂಲ ಕಲ್ಪನೆ.

ಕಲೇಟ್‌ಸ್ಕಿ, ಪೊಲ್ಯಾನಿ ಮತ್ತು ಕೀನ್ಸ್ ಇವರುಗಳು ಮಹಾ ಆರ್ಥಿಕ ಕುಸಿತ ಮತ್ತು ಎರಡನೇ ವಿಶ್ವ ಮಹಾಯುದ್ಧಗಳನ್ನು ಕಣ್ಣಾರೆ ಕಂಡವರು. ಒಂದು ಸಭ್ಯ ಸಮಾಜವನ್ನು ಹೇಗೆ ನಿರ್ಮಿಸಬಹುದು ಎಂಬುದರ ಬಗ್ಗೆ ಆಳವಾಗಿ ಚಿಂತಿಸಿದವರು. ಪೊಲ್ಯಾನಿ ಹೇಳುತ್ತಾರೆ: ಮಾರುಕಟ್ಟೆಗಳು ಒಂದು ಕಡೆಯಾದರೆ, ಇನ್ನೊಂದು ಕಡೆಯಲ್ಲಿ ಒಂದು ಭದ್ರ ಅಡಿಪಾಯದ ಸೌಹಾರ್ದತೆಯನ್ನು ಹೊಂದಿರಬೇಕು, ಇಲ್ಲವೆಂದರೆ, ನೀವು ಒಂದು ಸಮಾಜವೇ ಅಲ್ಲ. ಅದು ನಾಯಿಯನ್ನು–ನಾಯಿ– ತಿನ್ನುವ ಪರಿಸ್ಥಿತಿಯಾಗುತ್ತದೆ. ಆದ್ದರಿಂದ, ಒಗ್ಗಟ್ಟಿನ ತಳಹದಿಯ ಸೌಹಾರ್ದತೆಯನ್ನು ಸೃಷ್ಟಿಸುವುದು ಒಂದು ಸವಾಲೇ. 1776ರಲ್ಲಿ ಆಡಮ್ ಸ್ಮಿತ್ ಬರೆದದ್ದನ್ನು ಎಚ್ಚರಿಕೆಯಿಂದ ಓದಿದಾಗ ಇದು ಮನವರಿಕೆಯಾಗುತ್ತದೆ.


ಆಡಮ್ ಸ್ಮಿತ್ ಅವರನ್ನು ಮುಕ್ತ ಮಾರುಕಟ್ಟೆ ಬಂಡವಾಳಶಾಹಿಯ ಪ್ರತಿಪಾದಕ ಎಂದು ಜನರು ಭಾವಿಸಿದ್ದಾರೆ. ಅದು ಸತ್ಯವಲ್ಲ. ರಾಜಪ್ರಭುತ್ವದ ಪರಿಸ್ಥಿತಿಗೆ ಹೋಲಿಸಿದರೆ ಮಾರುಕಟ್ಟೆಗಳಲ್ಲಿ ಬಹಳಷ್ಟು ಸದ್ಗುಣಗಳಿವೆ ಎಂಬುದು ಅವರ ಅಭಿಪ್ರಾಯ. ಒಂದು ಸಮಾಜವನ್ನು ನೈತಿಕ ತಳಹದಿಯ ಮೇಲೆ ಕಟ್ಟಬೇಕು ಎಂದು ಅವರು ಹೇಳಿದರು. ವಾಸ್ತವವಾಗಿ, 1776ರಲ್ಲಿ ಅವರು 'ದಿ ವೆಲ್ತ್ ಆಫ್ ನೇಶನ್ಸ್' ಗ್ರಂಥವನ್ನು ಬರೆಯುವ ಮೊದಲು ಅವರು ಬರೆದ ಪುಸ್ತಕದ ಹೆಸರೇ 'ನೈತಿಕ ಭಾವನೆಗಳ ಸಿದ್ಧಾಂತ' ಎಂದಿತ್ತು.

ಹಾಗಾದರೆ, ಸಾಮಾಜಿಕ ಸೌಹಾರ್ದತೆಯ ಸಮಸ್ಯೆಯ ಬಗ್ಗೆ ಏನು ಹೇಳಬಹುದು? ಜಗತ್ತಿನಾದ್ಯಂತ ನವ–ಫ್ಯಾಸಿಸಂನ ಉದಯವನ್ನು ನೋಡುತ್ತಿದ್ದೇವೆ. 'ಸಾಮಾಜಿಕ ಸೌಹಾರ್ದತೆಯ ಬಗ್ಗೆ ನಮಗೇನೂ ಕಾಳಜಿಯಿಲ್ಲ' ಎಂದು ಹೇಳುವುದೇ ಫ್ಯಾಸಿಸಂನ ಒಂದು ಗುರುತು. ದೊಡ್ಡ ಮನುಷ್ಯರು, ನವ ಉದಾರವಾದಿಗಳು, ರಾಜಕಾರಣಿಗಳು ನಮ್ಮನ್ನು ಅಟ್ಟಾಡಿಸಿ ಹೊಡೆದಿದ್ದಾರೆ. ಕೆಲವರು ತುಂಬಾ ಕಳಕಳಿಯ ಮಾತನಾಡುತ್ತಾರೆ. ಆದರೆ, ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಈ ವಿದ್ಯಮಾನವನ್ನು ನಾವು 40 ವರ್ಷಗಳಿಂದಲೂ ನೋಡುತ್ತಿದ್ದೇವೆ. ಆದ್ದರಿಂದ, ನಮಗಾಗಿ ನಾವು ನವ ಉದಾರವಾದದ ವಿರುದ್ಧ ಹೋರಾಡಬೇಕಾಗಿದೆ. 'ನಮಗೆ ವಲಸಿಗರು ಬೇಕಾಗಿಲ್ಲ'; 'ನಮಗೆ ಸಾಮಾಜಿಕ ಸಂಸ್ಥೆಗಳು ಬೇಕಾಗಿಲ್ಲ'; 'ಅವುಗಳಿಗೆ ನಾವು ತೆರಿಗೆ ಕಟ್ಟಲು ಬಯಸುವುದಿಲ್ಲ' ಇವು ನವ ಉದಾರವಾದದ ಮೂರು ಪ್ರಮುಖ ಗುರುತುಗಳು.

ಫ್ರಿಸ್: ಒಟ್ಟಿನಲ್ಲಿ ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ಕಂಡಂತಹ ಬೃಹತ್ ಪ್ರಮಾಣದ ನಿರುದ್ಯೋಗವನ್ನು ಜಗತ್ತು ಮತ್ತೆ ಎದುರಿಸುತ್ತಿರುವಾಗ ಮುಂದೆ ಸಾಗುವ

ಪುಟ 14 ನೋಡಿ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ಮನರೇಗ)ಯ ಅಡಿಯ ಪರಿಯೋಜನೆಯ ಸಾಮರ್ಥ್ಯವೇನು ಎಂದು ಮತ್ತೊಮ್ಮೆ ಸಾಬೀತಾಗಿದೆ. ಗ್ರಾಮೀಣ ಭಾರತದ ಸಂಕಷ್ಟಗಳಿಗೆ ಪರಿಹಾರ ನೀಡುವ ಈ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಅದರಲ್ಲಿ ಈಗಿರುವ ಮಿತಿಗಳನ್ನು ತೆಗೆಯಬೇಕು. ಕುಟುಂಬಕ್ಕೊಂದೇ ಉದ್ಯೋಗ ಎನ್ನುವ ನಿರ್ಬಂಧವನ್ನು ತೆಗೆದುಹಾಕುವ ಅವಶ್ಯಕತೆ ಇದೆ. 100 ದಿನಗಳಿಗೆ ಮಿತಿಗೊಳಿಸಿರುವುದನ್ನು ಕನಿಷ್ಟ 200 ದಿನಗಳಿಗೆ ವಿಸ್ತರಿಸಬೇಕು. ಕೆಲಸ ನಿರಾಕರಿಸಲಾದ ಎಲ್ಲರಿಗೂ ನಿರುದ್ಯೋಗ ಭತ್ಯೆಯನ್ನು ಈ ಕಾಯ್ದೆಯ ಪ್ರಕಾರ ಖಾತರಿಪಡಿಸಬೇಕು. ಮತ್ತು ಮುಖ್ಯವಾಗಿ, ಇದಕ್ಕಾಗಿ ತುರ್ತು ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುವುದನ್ನು ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು.



ಮನರೇಗದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಿ

ಬೃಂದಾ ಕಾರಟ್ ಅನುವಾದ: ಎನ್. ವಿಜಯಕುಮಾರ್

ಲಾಕ್‌ಡೌನ್ ಅನುಭವದೊಂದಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಭಾರತದಲ್ಲಿ ದುಡಿಯುವ ಬಡಜನರಿಗೆ ಒಂದು ಜೀವ ಸೆಲೆಯಾಗಿದೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಏಪ್ರಿಲ್ ಮತ್ತು ಭಾಗಶಃ ಮೇ ತಿಂಗಳಿನಲ್ಲಿ ಮನರೇಗದ ಅನುಪಸ್ಥಿತಿಯು ಗ್ರಾಮೀಣ ಸಂಕಷ್ಟವನ್ನು ವೃದ್ಧಿಸಿತು. ರಾಷ್ಟ್ರವ್ಯಾಪಿ ಲಾಕ್‌ಡೌನ್ ಹೇರಿದ ಸುಮಾರು ಒಂದು ತಿಂಗಳ ತರುವಾಯ, ಏಪ್ರಿಲ್ 20 ರಿಂದ ಮಾತ್ರ ಮನರೇಗಾ ಯೋಜನೆಯನ್ನು ಪುನರ್ ಸ್ಥಾಪಿಸಲು ಕೇಂದ್ರ ಸರ್ಕಾರವು ಲಾಕ್‌ಡೌನ್ ಮಾರ್ಗಸೂಚಿಗಳನ್ನು ಪರಿಷ್ಕರಿಸಿತು. ಅದಕ್ಕಾಗಿ ಹಣವನ್ನೂ ತಡವಾಗಿ ಬಿಡುಗಡೆ ಮಾಡಿತು.



ಆದರೆ ಈ ಹಣವು ರಾಜ್ಯಗಳನ್ನು ತಲುಪಿದ ನಂತರ ಫಲಿತಾಂಶಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. 2020 ಏಪ್ರಿಲ್‌ನಲ್ಲಿ ಈ ಯೋಜನೆಯಡಿ ಕೆಲಸ ಪಡೆದುಕೊಂಡ 95 ಲಕ್ಷ ಕುಟುಂಬಗಳ ಸಂಖ್ಯೆ ಹಲವಾರು ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿದ್ದರೆ, ಮೇ ತಿಂಗಳಿನಲ್ಲಿ ಈ ಸಂಖ್ಯೆಯು 3.05 ಕೋಟಿಗೆ ಏರಿತು. ಜೂನ್ 3ನೇ ವಾರದವರೆಗೆ ಈ ರೀತಿ ಕೆಲಸ ಪಡೆದುಕೊಂಡ ಕುಟುಂಬಗಳು 2.84 ಕೋಟಿ. ಕಳೆದ ವರ್ಷದ ಇದೇ ತಿಂಗಳುಗಳಿಗೆ ಹೋಲಿಸಿದರೆ ಈ ಸಂಖ್ಯೆ ಬಹಳ ಹೆಚ್ಚು. ಸರಾಸರಿ 23 ದಿನಗಳ ಕೆಲಸ ಮತ್ತು ದೈನಂದಿನ ಕೂಲಿ 200 ರೂ. ಈ ರೀತಿ ಕೆಲಸ ಪಡೆದ ಕುಟುಂಬಗಳು ಸರಾಸರಿ 1500 ರೂಪಾಯಿಗಳನ್ನು ಗಳಿಸಿದರು. ಇದು ಅಲ್ಪವಾಗಿದ್ದರೂ ಸಹ ಮನರೇಗಾ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿದರೆ, ಅದು ಕೆಲಸವನ್ನು ಮತ್ತು ಪರಿಹಾರವನ್ನು ತರುವ ಎಂತಹ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ.

ಕೇಂದ್ರ ಸರ್ಕಾರವು ಮನರೇಗ ಕೆಲಸಕ್ಕೆ 38 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ 70% ಈಗಾಗಲೇ ಬಳಕೆಯಾಗಿದೆ. ವಲಸೆ ಕಾರ್ಮಿಕರು ಮರಳಿ ತಮ್ಮ ತವರು ರಾಜ್ಯಗಳನ್ನು ತಲುಪಿದರು ನಂತರ ಮತ್ತು ಬಹುತೇಕರು ತಮ್ಮ ಕ್ವಾರಂಟೈನ್ ಅವಧಿಯನ್ನು ಪೂರೈಸಿದ ತರುವಾಯ ಕೆಲಸದ ಬೇಡಿಕೆ ಇನ್ನೂ ಹೆಚ್ಚಲಿದೆ. ಮಿಕ್ಕುಳಿದಿರುವ 7 ಸಾವಿರ ಕೋಟಿ ರೂಪಾಯಿ ಏನೇನೂ ಸಾಲದು. ಹೀಗಾಗಿ ಕೇಂದ್ರ ಸರ್ಕಾರ 2ನೇ ಕಂತನ್ನೂ ವಿಳಂಬ ಮಾಡದೇ ಬಿಡುಗಡೆ ಮಾಡುವುದು ಅತ್ಯಗತ್ಯ.

ಕೆಲವರಿಗೆ ಮಾತ್ರ ಕೆಲಸ

ಈ ತಿಂಗಳುಗಳಲ್ಲಿ ಕೆಲಸ ಪಡೆದ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಸ್ವಾಗತಾರ್ಹವಾದರೂ ಕೆಲಸ ಕೇಳಿದ 1.82 ಕೋಟಿ ಕಾರ್ಮಿಕರಿಗೆ ಕೆಲಸ ನಿರಾಕರಿಸಿದ್ದು ತೀವ್ರ ಕಳವಳಕಾರಿಯಾಗಿದೆ. ಸಚಿವಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಈ ವರ್ಷ 8.07 ಕೋಟಿ ಕಾರ್ಮಿಕರು ಕೆಲಸ ಕೇಳಿದ್ದರು. ಆದರೆ 6.25 ಕೋಟಿ ಜನರಿಗೆ ಮಾತ್ರ ಕೆಲಸವನ್ನು ಒದಗಿಸಲಾಯಿತು. ಇತ್ತೀಚೆಗೆ ದೇಶದ ಪ್ರಧಾನಮಂತ್ರಿ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಆ ರಾಜ್ಯದಲ್ಲಿ ಒಂದೇ ದಿನದಲ್ಲಿ 1 ಕೋಟಿ ಉದ್ಯೋಗಗಳನ್ನು ಒದಗಿಸಲಾಗಿದೆ ಎಂದು ಇದು ರಾಜ್ಯದ ಉದ್ಯೋಗ ನಿರ್ಮಾಣ ಸಾಧನೆ ಎಂದು ಹೇಳಿಕೊಳ್ಳಲು ಪ್ರಯತ್ನಿಸಿದರು. ಇದು ನಿಜವಾಗಿಯೂ ಅಂಕಿ – ಸಂಖ್ಯೆಗಳಿಗೆ ಒಂದು ನವೀನ ವ್ಯಾಖ್ಯೆಯಾಗಿದೆ. ಈ ಉದ್ಯೋಗದ ಸ್ವರೂಪ ಏನು? ಅವೇನು ಶಾಶ್ವತ ಉದ್ಯೋಗಗಳೇ? ಮನರೇಗ ಕೆಲಸದ ಸ್ಥಳಗಳಲ್ಲಿರುವಂತೆ ಒಂದು ದಿನದ ಉದ್ಯೋಗವೇ? ಉತ್ತರ ಪ್ರದೇಶದಲ್ಲಿ ಮನರೇಗ ಯೋಜನೆಯ ಅಡಿಯಲ್ಲಿ ಒಂದು ಕೋಟಿಗೂ ಹೆಚ್ಚು ಕಾರ್ಮಿಕರು ಕೆಲಸ ಕೇಳಿದ್ದರು. ಅದರಲ್ಲಿ 3ನೇ ಒಂದು ಭಾಗದಷ್ಟು ಜನರಿಗೆ ಕೆಲಸವನ್ನು ನಿರಾಕರಿಸಲಾಯಿತು.

ಅದೇ ರೀತಿ ಅಧಿಕ ಸಂಖ್ಯೆಯಲ್ಲಿ ಹಿಂದಿರುಗಿರುವ ವಲಸೆ ಕಾರ್ಮಿಕರನ್ನು ಹೊಂದಿರುವ ಬಿಹಾರ್ ರಾಜ್ಯದಲ್ಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 41 ಲಕ್ಷ ಕಾರ್ಮಿಕರಲ್ಲಿ 12 ಲಕ್ಷ ಜನಕ್ಕೆ ಕೆಲಸ ನೀಡಲಾಗಿಲ್ಲ. ನಿರುದ್ಯೋಗ ಭತ್ಯೆಯನ್ನು ನೀಡಬೇಕೆನ್ನುವ ಕಾನೂನು ನಿಬಂಧನೆಯ ಹೊರತಾಗಿಯೂ ಪರಿಹಾರದ ರೂಪದಲ್ಲಿ ಒಂದೇ ಒಂದು ರೂಪಾಯಿಯೂ ಪಾವತಿಯಾಗಿಲ್ಲ. ಈಗ ಮಳೆಗಾಲವೂ ಪ್ರಾರಂಭವಾಗಿದ್ದು ಈ ವಿಷಯವು ಹೆಚ್ಚು ಪ್ರಸ್ತುತವಾಗಿದೆ. ಮಳೆಗಾಲದಲ್ಲಿ ಕೆಲಸದ ಬೇಡಿಕೆ ಹೆಚ್ಚಿದ್ದರೂ ಅವಕಾಶಗಳು ಕಡಿಮೆ. ಹೀಗಾಗಿ ಕೆಲಸ ಕೇಳುವ ಎಲ್ಲಾ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿಸಲು ರಾಜ್ಯಗಳಿಗೆ ಹಣ ಪಾವತಿಸಲಾಗಿದೆಯೇ ಎನ್ನುವುದನ್ನು ಕೇಂದ್ರ ಸರ್ಕಾರವು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯವಾಗಿವೆ.

‘ಹೊಸ’ ಯೋಜನೆ ಏಕೆ?

ಈ ಸಂದರ್ಭದಲ್ಲಿ ಮನರೇಗವನ್ನು ಬಲಪಡಿಸುವ ಅಗತ್ಯತೆಯ ಹಿನ್ನೆಲೆಯಲ್ಲಿ, ಆಯ್ದ 20116 ಜಿಲ್ಲೆಗಳಲ್ಲಿ ವಲಸೆ ಕಾರ್ಮಿಕರಿಗೆ ಕೆಲಸ ಒದಗಿಸುವ ಕೇಂದ್ರ ಸರ್ಕಾರದ “ಹೊಸ” ಯೋಜನೆಯಾದ ‘ಗರೀಬ್ ಕಲ್ಯಾಣ್ ರೋಜಗಾರ್ ಅಭಿಯಾನ್’ ಹಲವಾರು ಪ್ರಶ್ನೆಗಳನ್ನೂ ಹುಟ್ಟುಹಾಕಿದೆ. ಮೊದಲಿಗೆ ಆಯ್ಕೆಯ ಮಾನದಂಡವೇನು? ಉದಾಹರಣೆಗೆ ಹಿಮ್ಮುಖ ವಲಸೆ ಹೆಚ್ಚಾಗಿರುವ ಪಶ್ಚಿಮ ಬಂಗಾಳ ಮತ್ತು ಛತ್ತೀಸ್‌ಗಢ ರಾಜ್ಯಗಳನ್ನು ಏಕೆ ಹೊರಗಿಡಲಾಗಿದೆ ಎನ್ನುವುದು. ಜೂನ್ 20 ಮತ್ತು ಜೂನ್ 28 ರ ಮಧ್ಯೆ ಖರ್ಚು ಮಾಡಿದ 4794 ಕೋಟಿ ರೂಪಾಯಿಗಳಲ್ಲಿ ಬಿಹಾರವು 50% ಕಿಂತ ಹೆಚ್ಚು ಹಣವನ್ನು ಪಡೆದುಕೊಂಡಿದೆ. ಮೊದಲೇ ಗಮನಿಸಿದಂತೆ ಮನರೇಗ ಅನುಷ್ಟಾನದಲ್ಲಿ ಬಿಹಾರವು ಕಳಪೆ ದಾಖಲೆಯನ್ನು ಹೊಂದಿದೆ. ಈ ವರ್ಷಾಂತ್ಯಕ್ಕೆ ಬಿಹಾರದಲ್ಲಿ ಚುನಾವಣೆಗಳು ನಡೆಯಲಿವೆ. ತನ್ನ ಸಂಕುಚಿತ ರಾಜಕೀಯ ಉದ್ದೇಶವನ್ನು ಪೂರೈಸಲು ಈ ಯೋಜನೆಯನ್ನು ವಿನ್ಯಾಸಗೊಳಿಸಿದ್ದೇ ಆಗಿದ್ದರೆ ಅದು ನ್ಯಾಯಕ್ಕೆ ಬಗೆದಿರುವ ಒಂದು ಭೀಷಣ ಅಪಚಾರವಾಗುತ್ತದೆ. ಎರಡನೆಯದಾಗಿ, ಈ ರೋಜಗಾರ್ ಅಭಿಯಾನದ ಅಡಿಯಲ್ಲಿ ನಮೂದಿಸಲಾದ 25 ಕೆಲಸಗಳು ಈಗಾಗಲೇ ಮನರೇಗ ಕಾರ್ಯಕ್ರಮದಲ್ಲಿ ಒಳಪಟ್ಟಿವೆ. ಈ ಕೆಲಸಗಳು ಮನರೇಗ ಕಾರ್ಯಕ್ರಮದ ಅಡಿಯಲ್ಲಿ ಒಳಗೊಂಡಿರುವುದರಿಂದ ಮತ್ತೆ ಹೊಸದಾದ “ಕೌಶಲ್ಯ ನಕ್ಷೆ” ತಯಾರಿಕೆ ಎನ್ನುವುದೇನು? ಕೆಲಸದ ಸ್ವರೂಪವು ಮಾನವ ಶ್ರಮ ಆಧಾರಿತವಾಗಿದ್ದು ಮುಖ್ಯವಾಗಿ ಕಟ್ಟಡ ನಿರ್ಮಾಣ ಮತ್ತು ಭೂಮಿಗೆ ಸಂಬಂಧಿಸಿದ ಕೆಲಸವಾಗಿದೆ. ಇದರಲ್ಲಿ ಗ್ರಾಮೀಣ ಪ್ರದೇಶಗಳಿಗೆ ಅಂತರ್ಜಾಲ ಸಂಪರ್ಕವನ್ನು ಕೊಡಲು ಎಂದು ಕೇಬಲಗಳನ್ನು ಹಾಕುವ ಕೆಲಸವೂ ಸೇರಿದೆ.

ಇದರಿಂದ ಖಾಸಗಿ ಟೆಲಿಕಾಂ ಕಂಪನಿಗಳಿಗೆ ಪ್ರಯೋಜನವಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿಲ್ಲವಾದರೂ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಹೊಸ ಯೋಜನೆಯು ಈ ಆಯ್ದ ಜಿಲ್ಲೆಗಳಲ್ಲಿ ಮನರೇಗ ಕೆಲಸದ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಈ ಯೋಜನೆಗಾಗಿ ಅನುಷ್ಟಾನ ಸಚಿವಾಲಯವಾಗಿರುವ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಹೊರಡಿಸಿರುವ ಮಾರ್ಗದರ್ಶಿ ಸೂತ್ರಗಳಲ್ಲಿ ಈ ವಿಷಯದ ಕುರಿತು ಸ್ಪಷ್ಟತೆಯಿಲ್ಲ. ಕಳೆದ ವರ್ಷ ಮನರೇಗ ಯೋಜನೆಯ ಅಡಿಯಲ್ಲಿ ಈ 116 ಜಿಲ್ಲೆಗಳನ್ನು ಒಟ್ಟಾರೆಯಾಗಿ ಸಮೀಕ್ಷಿಸಿದಾಗ ಸರಾಸರಿ ಕೇವಲ 43.7 ಕೆಲಸದ ದಿನಗಳನ್ನು ಸೃಷ್ಟಿಸಲಾಗಿದೆ. ಇದು ರಾಷ್ಟ್ರೀಯ ಸರಾಸರಿ 50 ದಿನಗಳಿಗಿಂತ ಕಡಿಮೆಯಾಗಿದೆ. ಈ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ವಲಸೆ ಹೋಗುತ್ತಿರುವುದಕ್ಕೆ ಈ ಕಳಪೆ ದಾಖಲೆಯೂ ಒಂದು ಕಾರಣವಾಗಿರಬಹುದು. ಹೊಸ ಯೋಜನೆಗಳ ಬದಲಿಗೆ ಮನರೇಗವನ್ನೇ ಏಕೆ ವಿಸ್ತರಿಸಬಾರದು? ಇದು ಕಾನೂನುಬದ್ಧ ಅಧಿಕಾರ. ಆದರೆ ಗರೀಬ್ ರೋಜಗಾರ್ ಕಲ್ಯಾಣ ಅಭಿಯಾನ ಯೋಜನೆಯಲ್ಲಿ ಆಡಳಿತದ ಮೇಲೆ ಅಂತಹ ಯಾವುದೇ ಕಾನೂನಾತ್ಮಕ ಕಟ್ಟುಪಾಡುಗಳಿಲ್ಲ. ಈ ಯೋಜನೆಯೂ ಪ್ರಾಥಮಿಕವಾಗಿ 25 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ವಲಸೆ ಕಾರ್ಮಿಕರು ಇರುವ ಜಿಲ್ಲೆಗಳಿಗೆ ಉದ್ದೇಶಿತವಾಗಿದೆ. ಈ ಜಿಲ್ಲೆಗಳಲ್ಲಿ ಮಹಿಳಾ ವಲಸಿಗರ ಪ್ರಮಾಣ ಕಡಿಮೆ ಇದೆ. ಹೀಗಾಗಿ ಹೆಚ್ಚಿನ ಮಹಿಳೆಯರನ್ನು ಈ ಯೋಜನೆಯಿಂದ ಹೊರಗಿಡಲಾಗುತ್ತದೆ. ಈ ಜಿಲ್ಲೆಗಳಲ್ಲಿ ಮಹಿಳೆಯರಿಂದ ಹೆಚ್ಚಿನ ಕೆಲಸದ ಬೇಡಿಕೆಯಿದ್ದು ಕಳೆದ ವರ್ಷ ಮನರೇಗಾದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರ ಪ್ರಮಾಣ 53% ರಷ್ಟಿತ್ತು. ಇದು ದೇಶದ ಉಳಿದ ಭಾಗಗಳ ಸರಾಸರಿಗಿಂತ ಹೆಚ್ಚಾಗಿದೆ. ಆದುದರಿಂದ ಈ ಅಭಿಯಾನವು ಆಯ್ದ 116 ಜಿಲ್ಲೆಗಳಲ್ಲಿ ಮನರೇಗಗೆ ಹೆಚ್ಚುವರಿಯಾಗಿ ಜೊತೆಗೂಡದಿದ್ದರೆ ಮಹಿಳೆಯರು ತೀವ್ರ ತೊಂದರೆಯನ್ನು ಅನುಭವಿಸುತ್ತಾರೆ.

ಮನರೇಗಗಿರುವ ಸಾಮರ್ಥ್ಯ

ಗರೀಬ ಕಲ್ಯಾಣ ರೋಜಗಾರ್ ಅಭಿಯಾನದ ಹೆಸರಿನಲ್ಲಿ ಮನರೇಗಾವನ್ನು ದುರ್ಬಲಗೊಳಿಸಬಾರದು. ಮನರೇಗದ ಗ್ರಾಮೀಣ ಭಾರತದ ಸಂಕಷ್ಟಗಳಿಗೆ ಪರಿಹಾರ ನೀಡುವ ಗರಿಷ್ಟ ಸಂಭಾವ್ಯ, ಸಾಮರ್ಥ್ಯಗಳ ಧಾರಣಾ ಶಕ್ತಿಯನ್ನು ಬಳಸಿಕೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನು ಈ ಯೋಜನೆಯ ಅಡಿಯಲ್ಲಿ ಅರ್ಹನನ್ನಾಗಿಸಲು ಕುಟುಂಬಕ್ಕೊಂದೇ ಉದ್ಯೋಗ ಎನ್ನುವ ನಿರ್ಬಂಧವನ್ನು ತೆಗೆದುಹಾಕುವ ಅವಶ್ಯಕತೆ ಇದೆ. ನೂರು ದಿನಗಳಿಗೆ ಮಿತಿಗೊಳಿಸಿರುವುದನ್ನು ಕನಿಷ್ಟ 200 ದಿನಗಳಿಗೆ ವಿಸ್ತರಿಸುವಂತೆ ತೆಗೆದುಹಾಕಬೇಕು. ಕೆಲಸ ನಿರಾಕರಿಸಲಾದ ಎಲ್ಲರಿಗೂ ನಿರುದ್ಯೋಗ ಭತ್ಯೆಯನ್ನು ಖಾತರಿಪಡಿಸಬೇಕು. ಮತ್ತು ಮುಖ್ಯವಾಗಿ, ತುರ್ತು ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುವುದನ್ನು ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು.. ●

ಕೊವಿಡ್–19 ಉದ್ಯೋಗ ಬಿಕ್ಕಟ್ಟಿಗೆ ಪೂರ್ಣ ಉದ್ಯೋಗವೇ ಸಂಜೀವಿನಿ

ಪುಟ 13 ರಿಂದ

ಹಾದಿಯೆಂದರೆ, ನಿಮ್ಮ ಪ್ರಕಾರ, ಹಣದುಬ್ಬರಕ್ಕೆ ಕಾರ್ಮಿಕರನ್ನು ದೂಷಿಸುವ ನವ–ಉದಾರವಾದಿ ಧೋರಣೆಗಳ ಬದಲು ಪೂರ್ಣ ಉದ್ಯೋಗದೊಂದಿಗೆ ಶಿಷ್ಟ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಪೋಷಿಸಲು ಒಟ್ಟಾರೆಯಾಗಿ ಆರ್ಥಿಕ ಧೋರಣೆಗಳನ್ನು ಬಳಸಬೇಕು ಮತ್ತು ಈ ಮೂಲಕ ಎಲ್ಲ ದೇಶಗಳಲ್ಲೂ ಶಿಷ್ಟ ಉದ್ಯೋಗಗಳನ್ನು ನಿರ್ಮಿಸಲು ಸಾಧ್ಯವಿದೆ.

ಪೊಲಿನ್: ಹೌದು. ಕಳೆದ 40 ವರ್ಷಗಳಲ್ಲಿ ಬಂಡವಾಳಶಾಹಿ ವರ್ಗವು ತನ್ನ ಆಳ್ವಿಕೆ ನಡೆಸಿದೆ. 1928ರ ಮಹಾ ಆರ್ಥಿಕ ಕುಸಿತ ಮತ್ತು ವಾಲ್ ಸ್ಟ್ರೀಟ್ ಕುಸಿತಕ್ಕೆ ಮುನ್ನ, ತುದಿಯಲ್ಲಿರುವ 1% ಮಂದಿ ರಾಷ್ಟ್ರೀಯ ಆದಾಯದ 25%ನಷ್ಟು ಪಾಲು ಹೊಂದಿದ್ದ ಮಟ್ಟದ ಅಸಮಾನತೆಗಳಿದ್ದವು. ಮಹಾ ಆರ್ಥಿಕ ಕುಸಿತ ನಂತರ ಆ ಸಂಖ್ಯೆ ಇಳಿಮುಖವಾಯಿತು. ತುದಿಯಲ್ಲಿರುವ 1% ಮಂದಿಯ ಆದಾಯವು ರಾಷ್ಟ್ರೀಯ ಆದಾಯದ 10% ಮಟ್ಟಕ್ಕೆ ಇಳಿಯಿತು. ಆದರೆ, 1980ರ ದಶಕದಲ್ಲಿ ನವ ಉದಾರವಾದದ ಆಗಮನದೊಂದಿಗೆ ಅಸಮಾನತೆಗಳು ಮತ್ತೊಮ್ಮೆ ಏರಲಾರಂಭಿಸಿದವು. ಈಗ, ತುದಿಯಲ್ಲಿರುವ 1% ಮಂದಿಯ ಆದಾಯವು ರಾಷ್ಟ್ರೀಯ ಆದಾಯದ 25%ನಷ್ಟು ಮಟ್ಟಕ್ಕೆ ಮರಳಿದೆ. ಹಾಗಾಗಿ, ನವ ಉದಾರವಾದದ ಅಡಿಯಲ್ಲಿ ಬಂಡವಾಳದ ಶಕ್ತಿ ಅಸಾಧಾರಣವಾಗೇ ಬೆಳೆದಿದೆ. ಇದು ಐತಿಹಾಸಿಕವಾಗಿ ಅಭೂತಪೂರ್ವ. ಆದ್ದರಿಂದ, ನಾವು ರೂಸ್‌ವೆಲ್ಟ್ ಅವರು ಅಮೇರಿಕಾದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜಾರಿಗೊಳಿಸಿದ ‘ನ್ಯೂಡೀಲ್’ (New Deal) ನಂತಹ ಸಂಗತಿಗೆ ಮರಳಬೇಕು. ಇತ್ತೀಚೆಗೆ ಅಮೇರಿಕಾದ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿಯಾಗಿ ಬೆರ್ನಿ ಸ್ಯಾಂಡರ್ಸ್ ತನ್ನ ಚುನಾವಣಾ ಅಭಿಯಾನದಲ್ಲಿ ಏನು ಹೇಳುತ್ತಿದ್ದರೋ, ಅದು ಹೆಚ್ಚು ಕಡಿಮೆ ನ್ಯೂ ಡೀಲ್ ಮಾದರಿಯಲ್ಲೇ ಇತ್ತು. ಅಸಮಾನತೆಯ ಸಮಸ್ಯೆಗಳ ಜೊತೆಗೆ ಹವಾಮಾನ ಬದಲಾವಣೆಯ ಬಗ್ಗೆಯೂ ಗಮನ ಹರಿಸಬೇಕು. ಒಂದು ಸಮಾನತಾ ಕಾರ್ಯಸೂಚಿ ಮತ್ತು ಪರಿಸರ ಕಾರ್ಯಸೂಚಿ ಇವುಗಳ ಸಂಯೋಜನೆಯೇ ಮುಂದಿನ ಮಾರ್ಗ.

ರಶ್ಯ ಸಂವಿಧಾನ ತಿದ್ದುಪಡಿ ಜನಮತ ಸಂಗ್ರಹ

2036 ರ ವರೆಗೆ ಪುತಿನ್ ಮುಂದುವರಿಕೆಗೆ ಶೇ 78 ರಷ್ಟು ಬೆಂಬಲ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

1993 ರ ರಶ್ಯಾದ ಯೆಲ್ಟ್‌ಸಿನ್ ರೂಪಿಸಿದ್ದ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಾರ್ಚ್‌ನಲ್ಲಿ ಪುತಿನ್ ರಶ್ಯಾದ ಸಂಸತ್ ನಲ್ಲಿ ಮಂಡಿಸಿದ್ದರು. ಅದನ್ನು ಸಂಸತ್ ಹೆಚ್ಚಿನ ಚರ್ಚೆ ಇಲ್ಲದೆ ಮಂಜೂರು ಮಾಡಿದ ನಂತರ ಜನಮತ ಸಂಗ್ರಹಕ್ಕೆ ಹಾಕಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್–19 ರ ಹಿನ್ನೆಲೆಯಲ್ಲಿ ಜನಮತ ಸಂಗ್ರಹವನ್ನು ಮುಂದೂಡಲಾಗಿತ್ತು.

ಮತದಾನ ಕೇಂದ್ರಗಳಲ್ಲಿ, ಜನಸಂದಣಿಯನ್ನು ತಪ್ಪಿಸಲು ಮತ್ತು ಕೋವಿಡ್–19 ಹರಡುವಿಕೆಯನ್ನು ತಡೆಗಟ್ಟಲು ವೈಯಕ್ತಿಕ ಅಂತರವನ್ನು ಕಾಪಾಡಿಕೊಳ್ಳಲು ಮತದಾನದ ಅವಧಿಯನ್ನು ಒಂದೇ ದಿನದಿಂದ, ಒಂದು ವಾರಕ್ಕೆ ವಿಸ್ತರಿಸಿ, ಜೂನ್ 25 ರಿಂದ ಜುಲೈ 1 ರ ವರೆಗೆ ಜನಮತ ಸಂಗ್ರಹವನ್ನು ನಡೆಸಲಾಗಿದೆ. ರಶ್ಯಾದ ಚುನಾವಣಾ ಆಯೋಗ (ಸಿಇಸಿ), ಈ ಒಂದು ವಾರದ ಕಾಲ ನಡೆದ ಜನಮತದ ಫಲಿತಾಂಶವನ್ನು ಪ್ರಕಟಿಸಿದೆ. ಇದರಲ್ಲಿ ಸುಮಾರು ಶೇ.78 ಜನರು ಪುತ್ತಿನ್ ಮಂಡಿಸಿದ್ದ ತಿದ್ದುಪಡಿಗಳನ್ನು ಬೆಂಬಲಿಸಿದ್ದಾರೆ. ಶೇ.21 ರಷ್ಟು ಜನರು ವಿರೋಧಿಸಿದ್ದಾರೆ. ಒಟ್ಟು ಮತದಾರರಲ್ಲಿ ಶೇ.65 ರಷ್ಟು ಜನರು ಮತಗಳನ್ನು ಚಲಾಯಿಸಿದ್ದರು ಎಂದು ಸಿಇಸಿ ಘೋಷಣೆ ಮಾಡಿದೆ.

ರಶ್ಯಾ ವು, ಪ್ರಸ್ತುತ ಸುಮಾರು 7 ಲಕ್ಷಕ್ಕೂ ಹೆಚ್ಚು ಕೋವಿಡ್ ಸೋಂಕಿತ ಪ್ರಕರಣಗಳನ್ನು ಹೊಂದಿದ್ದು, 11 ಸಾವಿರಕ್ಕೂ ಹೆಚ್ಚು ಸಾವುಗಳು ಉಂಟಾಗಿ, ಜಗತ್ತಿನ ಪಟ್ಟಿಯಲ್ಲಿ ನಾಲ್ಕನೇ ಅತಿ ಹೆಚ್ಚಿನ ಸೋಂಕು ಪೀಡಿತ ದೇಶದ ಸ್ಥಾನದಲ್ಲಿದೆ. ಜುಲೈ 5ರವರೆಗೆ 3ನೇ ಸ್ಥಾನದಲ್ಲಿತ್ತು. ಮೊದಲ ಮೂರು ಸ್ಥಾನಗಳಲ್ಲಿ ಯು.ಎಸ್, ಬ್ರೆಜಿಲ್ ಮತ್ತು ಭಾರತ ಇವೆ.

ಇಂತಹ ಸಂದರ್ಭದಲ್ಲಿ, ಮತದಾರರಿಗೆ, ವಿಶೇಷವಾಗಿ ಸಂಘಟಿತ ಮತದಾನದ ಪ್ರದೇಶಗಳಲ್ಲಿ, ತಮ್ಮ ಮೊಬೈಲ್ ಪೋನ್ ಮತ್ತು ಆನ್ ಲೈನ್ ಗಳ ಮೂಲಕವು ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು. ಮಾರ್ಚ್‌ನಲ್ಲಿ ರಶ್ಯಾದ ಸಂಸತ್ತು ಮತು ಹೆಚ್ಚಿನ ರಾಜ್ಯಗಳ ಸಂಸತ್ತುಗಳು ಅಂಗೀಕರಿಸಿದ ತಿದ್ದುಪಡಿಗಳು, ನಂತರ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಅಗತ್ಯ ವಿರುವ ಕನಿಷ್ಠ ಶೇ.50 ಕ್ಕಿಂತ ಹೆಚ್ಚಿನ ಜನಪ್ರಿಯ ಬೆಂಬಲ ಪಡೆದಿವೆ ಎಂದು ಸಿಇಸಿ ವರದಿ ಮಾಡಿದೆ.



ತಿದ್ದುಪಡಿಗಳಲ್ಲಿ ಒಂದು ಅಧ್ಯಕ್ಷ ವ್ಲಾದಿಮಿರ್ ಪುತಿನ್ ರವರು ಮಾರ್ಚ್ 2024 ರಲ್ಲಿ ನಡೆಯಲಿರುವ ಮುಂದಿನ ಮತ್ತು ಅದರ ಮುಂದಿನ ಚುನಾವಣೆಗಳಲ್ಲಿ, ಮತ್ತೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶವನ್ನು ಕೊಡುತ್ತದೆ. ಈಗಿನ ರಶ್ಯನ್ ಸಂವಿಧಾನದ ಪ್ರಕಾರ ಅಧ್ಯಕ್ಷ ಪದವಿಗೆ ಚುನಾವಣೆಗೆ ಸ್ಪರ್ಧಿಸಲು ಒಬ್ಬ ವ್ಯಕಿಗ್ತೆ ಎರಡು ಸತತ ಅವಧಿಗಳ ಕಾಲದ ಮಿತಿಯಿದೆ. ಆದರೆ ಒಟ್ಟು ಎಷ್ಟು ಬಾರಿ ಬೇಕಾದರೂ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಹುದು. ಪುತಿನ್ ರವರು ಮೊದಲು ಅಧ್ಯಕ್ಷರಾಗಿದ್ದು 2000 ಇಸವಿಯಲ್ಲಿ. ಅವರು ಆನಂತರ 4–ವರ್ಷಗಳ ಎರಡು ಅವಧಿಗಳ ಕಾಲ 2008ರ ವರೆಗೆ ಅಧ್ಯಕ್ಷರಾಗಿದ್ದರು. 2008 ರಿಂದ 2012 ರವರೆಗೆ ಅವರು ಪ್ರಧಾನಿಯಾಗಿದ್ದರು. ಅಧ್ಯಕ್ಷೀಯ ಅವಧಿಯನ್ನು 6 ವರ್ಷಗಳಿಗೆ ಏರಿಸಿದ ಮೇಲೆ 2012–18 ಅವಧಿಯಲ್ಲಿ ಮತ್ತೆ ಅಧ್ಯಕ್ಷರಾಗಿದ್ದ್ರು. 2018ರಲ್ಲಿ ಮತ್ತೆ ಆಯ್ಕೆಯಾಗಿದ್ದಾರೆ. ಈಗಿನ ಸಂವಿಧಾನದ ಪ್ರಕಾರ 2024ರಲ್ಲಿ ಅವರ ಈಗಿನ ಅವಧಿ ಮುಗಿದಾಗ ಅವರು ಸ್ಪರ್ಧಿಸುವಂತಿಲ್ಲ. ಆದರೆ ಈಗಿನ ತಿದ್ದುಪಡಿ ಈ ಹೊಸ ಸಂವಿಧಾನದ ಜಾರಿಯ ನಂತರ (ಹಿಂದಿನ ಅವಧಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ) ಇನ್ನೆರಡು 6–ವರ್ಷಗಳ ಅವಧಿಗೆ ಅಂದರೆ 2036ರ ವರೆಗೆ ಪುಟಿನ್ ಅವರಿಗೆ ಸ್ಪರ್ಧಿಸಲು ಅವಕಾಶ ಕೊಡುತ್ತದೆ. ಇದು ನಿರಂಕುಶ ಪ್ರಭುತ್ವಕ್ಕೆ ಹಾದಿ ಮಾಡಿಕೊಡುತ್ತದೆ ಎಂದು ವ್ಯಾಪಕ ಟೀಕೆಗಳು ಕೇಳಿ ಬಂದಿವೆ. ಇದೇ 'ಹೊಸ ಸಂವಿಧಾನ'ದ ಮುಖ್ಯ ಉದ್ದೇಶ. ಅದನ್ನು ಮರೆಮಾಚಲು ಇನ್ನೂ ಹಲವು ತಿದ್ದುಪಡಿಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಹೆಚ್ಚಿನವು ಸಹ ನಿರಕುಂಶ ಪ್ರಭುತ್ವದ ನಿಟ್ಟಿನಲ್ಲಿ ಇವೆ ಎಂದು ಟೀಕೆಗೆ ಒಳಗಾಗಿದೆ.

ಇನ್ನಷ್ಟು ತಿದ್ದುಪಡಿಗಳಲ್ಲಿ, ಪ್ರಧಾನ ಮಂತ್ರಿ ಮತ್ತು ಕ್ಯಾಬಿನೆಟ್ ಅನ್ನು ನೇಮಕ ಮಾಡಲು 'ರಾಜ್ಯ ಡುಮಾ' ಕ್ಕೆ ಅಧಿಕಾರ ನೀಡುವುದು, ರಶ್ಯಾದ ಕಾನೂನುಗಳಿಗೆ ಅಂತರಾಷ್ಟೀಯ ಕಾನೂನಿನ ಮೇಲೆ ಆದ್ಯತೆ ನೀಡುವುದು, ಮತ್ತು ಫೆಡರೇಷನ್ ಕೌನ್ಸಿಲ್ ಗೆ (ಅಂದರೆ ಸಂಸತ್ತಿನ ಮೇಲುಮನೆ' ಯು ಸಾಂವಿಧಾನಿಕ ಮತ್ತು ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ತೆಗೆದು ಹಾಕುವ ಅಧಿಕಾರ ಕೊಡುವುದು, ಸೇರಿವೆ. ಇವೆಲ್ಲದರ ಜೊತೆಗೆ ರಾಜ್ಯ ಪರಿಷತ್ತಿನ ಸ್ಥಾನಮಾನ ಮತ್ತು ಇದರ ಪಾತ್ರವನ್ನು ಬಲಪಡಿಸುವುದನ್ನು ಒಳಗೊಂಡಿದೆ. ಸಾಂವಿಧಾನಿಕ ನ್ಯಾಯಾಲಯಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ. ಜೊತೆಗೆ, ಇದು ಕನಿಷ್ಟ ವೇತನ ಮತ್ತು ಪಿಂಚಣಿದಾರರ ಬಗ್ಗೆ ತಿದ್ದುಪಡಿಗಳನ್ನು ಸಹ ಒಳಗೊಂಡಿದೆ. ಜನಮತ ಸಂಗ್ರಹದಲ್ಲಿ ಈ ಎಲ್ಲಾ ತಿದ್ದುಪಡಿಗಳಿಗೆ ಪ್ರತ್ಯೇಕವಾಗಿ ಅಂಗೀಕರಿಸುವ ಅಥವಾ ನಿರಾಕರಿಸಲು ಅವಕಾಶಗಳಿಲ್ಲ. ಎಲ್ಲಾ ತಿದ್ದುಪಡಿಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸಲು ಅವಕಾಶ ಮಾತ್ರವಿದೆ, ಎಂಬುದ್ನು ಸಹ ವಾಪ್ಯಕ ಟೀಕೆಗೊಳಗಾಗಿದೆ.

ಬಹುತೇಕ ಎಲ್ಲಾ ತಿದ್ದುಪಡಿಗಳನ್ನು, ರಶ್ಯಾದ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷ ಮತ್ತು ಇತರೆ ಎಡ ಪಕ್ಷಗಳು ವಿರೋಧಿಸಿವೆ. ಕಾರ್ಮಿಕ ವರ್ಗದ ಏಳಿಗೆಗೆ ಯಾವುದೇ ಸೌಲಭ್ಯಗಳನ್ನು ಈ ತಿದ್ದುಪಡಿಗಳು ಒಳಗೊಂಡಿಲ್ಲ. ಇದು ಬೂರ್ಜ್ವಾ ಪ್ರಜಾಪ್ರಭುತ್ವ ಮತ್ತು ನಿರಕುಂಶ ಆಡಳಿತವನ್ನು ಮುಂದುವರೆಸುವ ತಿದ್ದುಪಡಿಗಳಾಗಿವೆ. ತಿದ್ದುಪಡಿಗಳ ಕುರಿತಂತೆ ವ್ಯಾಪಕ ಚರ್ಚೆ ನಡೆಸುವಲ್ಲಿ ಮತ್ತು ಒಮ್ಮತ ಮೂಡಿಸುವಲ್ಲಿ ಪುತಿನ್ ರ ಆಡಳಿತ ಸಂಪೂರ್ಣ ವಿಫಲವಾಗಿದೆ ಎಂದು ಟೀಕಿಸಿವೆ.

'ಜನಮತಸಂಗ್ರಹ ರಶ್ಯದ ಪೊಳ್ಳು ಬೂರ್ಜ್ವಾ ಪ್ರಜಾಪ್ರಭುತ್ವವವನ್ನು ಬಯಲುಪಡಿಸಿದೆ'

ಪುತಿನ್ ರು ಪ್ರಸ್ತಾಪಿಸಿರುವ ಸಂವಿಧಾನ ತಿದ್ದುಪಡಿಗಳು ರಶ್ಯಾದ ಬೂರ್ಜ್ವಾ ಪ್ರಜಾಪ್ರಭುತ್ವದ ವೇಷವನ್ನು ಬಯಲುಗೊಳಿಸಿದೆ ಎಂದು ರಷ್ಯನ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ (ಸಿ.ಪಿ.ಆರ್.ಎಫ್) ನಾಯಕ ಕಾಮ್ರೇಡ್ ರೋಮನ್ ಕೊನೊನೆನ್ಕೊ ಫ್ರೋಮ್ ರವರು (ಜನಮತಸಂಗ್ರಹದ ಮೊದಲು) 'ಪೀಪಲ್ಸ್ ಡಿಸ್ಪ್ಯಾಚ್' ಗೆ ನೀಡಿದ ಸಂದರ್ಶನದಲ್ಲಿ ಕಮ್ಯೂನಿಸ್ಟ್ ಪಕ್ಷದ ಸ್ಪಷ್ಟವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಂದರ್ಶನದ ಒಂದು ಭಾಗದ ಅನುವಾದವನ್ನು ಇಲ್ಲಿ ನೀಡಲಾಗಿದೆ.

ಪ್ರಶ್ನೆ: ವ್ಲಾದಿಮಿರ್ ಪುತಿನ್ ಪ್ರಸ್ತಾವಿಸಿರುವ ಸಾಂವಿಧಾನಿಕ ಸುಧಾರಣೆಗಳ ಬಗ್ಗೆ ನಿಮ್ಮ ಪಕ್ಷದ ಅಭಿಪ್ರಾಯ ವೇನು?.

ಉತ್ತರ: ಸಂವಿಧಾನಕ್ಕೆ ಪ್ರಸ್ತಾವಿತ ತಿದ್ದುಪಡಿಗಳು ಈಗಿರುವ ಅಧ್ಯಕ್ಷೀಯ ನಿರಂಕುಶ ಅಧಿಕಾರ ಶಾಹಿ ಮತ್ತು ಒಲಿಗಾರ್ಕಿಕ್ ಆಡಳಿತವನ್ನು ಬದಲಾಯಿಸುವುದಿಲ್ಲ ಮತ್ತು ರಷ್ಯಾವನ್ನು ಸಾಮಾಜಿಕ ಪ್ರಭುತ್ವವನ್ನಾಗಿ ಪರಿವರ್ತಿಸಲು ನಿರಾಕರಿಸಿವೆ. ಇದು ರಾಷ್ಟೀಯ ಭದ್ರತೆ ಮತ್ತು ವಾಸ್ತವಿಕ ಸಾರ್ವಭೌಮತ್ವ ವನ್ನು ಖಚಿತ ಪಡಿಸುತ್ತಿಲ್ಲ. ಹೀಗಿರುವಾಗ, ಜನಮತಸಂಗ್ರಹದಲ್ಲಿ ಕಮ್ಯೂನಿಸ್ಟ್ ರ ನಿಲುವುಗಳು, ಈ ವಿಚಾರಗಳಲ್ಲಿ ನಿರ್ದಿಷ್ಟ ತೀರ್ಮಾನಗಳು ಮತ್ತು ದೃಢವಾದ ತತ್ವಗಳನ್ನು ಆಧರಿಸಿರುತ್ತದೆ ಎಂದಿದ್ದಾರೆ.

ಈಗ ಜಾರಿಯಲ್ಲಿರುವ 1993ರಲ್ಲಿ ಆಗಿನ ಅಧ್ಯಕ್ಷ ಯೆಲ್ಟ್‌ಸಿನ್ ಹೇರಿದ ಸಂವಿಧಾನದ ಪರವಾಗಿ ನಾವು ಮತ ಚಲಾಯಿಸಲಿಲ್ಲ. ಆ ಸಂದರ್ಭದಲ್ಲಿ ಹೌಸ್ ಆಫ್ ಸೋವಿಯೆತ್ ನ ರಕ್ಷಣೆಗೆ ನಿಂತವರ ರಕ್ತ, ಚೆಚೆನ್ಯಾದ ಯುದ್ಧದ ಸುಟ್ಟಗಾಯಗಳು, ದರೋಡೆ ಅವಮಾನಗಳಿಗೆ ಒಳಗಾದವರ ಕಣ್ಣೀರಿನಿಂದ ಈ ಸಂವಿಧಾನ ತೊಯ್ದಿದೆ. ಇದು ಬೂರ್ಜ್ವಾ ಪರಭಕ್ಷಕ ಖಾಸಗೀಕರಣವನ್ನು ನ್ಯಾಯ ಸಮ್ಮತಗೊಳಿಸಿತು. ಅರ್ಥಶಾಸ್ತ್ರ ಮತ್ತು ಔಷಧ, ವಿಜ್ಞಾನ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹತ್ಯಾಕಾಂಡಗಳಿಗೆ ಹೆಬ್ಬಾಗಿಲು ತೆರೆಯಿತು. ಅಂದಿನಿಂದ ಇಲ್ಲಿಯವರೆಗೂ ಕಮ್ಯೂನಿಸ್ಟು ಮಾತ್ರ, ತತ್ವಾಧಾರಿತ ಅಧಿಕಾರ, ಮತ್ತು ಆಸ್ತಿ ಸಮಪಾಲಿಗಾಗಿ, ರಷ್ಯನ್ನ್ ಜನರಿಗಾಗಿ, ಸಂವಿಧಾನದ ಪರಿಷ್ಕರಣೆಗೆ ನಿರಂತರವಾಗಿ ಹೋರಾಡುತ್ತಿದ್ದಾರೆ.



ಪ್ರಸ್ತುತ ಈ ಸಾಂವಿಧಾನಿಕ ಸುಧಾರಣೆಗಳು ಪ್ರಾರಂಭವಾದಾಗ, ನಾವು ತಕ್ಷಣ ಜಾಗೃತರಾಗಿ ತೊಡಗಿಸಿಕೊಂಡಿದ್ದೇವೆ. ಕಮ್ಯೂನಿಸ್ಟ್ ಪಕ್ಷವು ಮೂಲಭೂತ ಕಾನೂನಿಗೆ 108 ತಿದ್ದುಪಡಿಗಳನ್ನು ನೀಡಿ, ಇದರ ಮೇಲೆ ಚರ್ಚೆ ನಡೆಸಲು ಸಲಹೆ ನೀಡಿದ್ದೇವೆ. ವಾಸ್ತವವಾಗಿ, ಕೆಟ್ಟ ಸಾಮಾಜಿಕ–ಆರ್ಥಿಕ ದಾರಿಗಳನ್ನು ನಿರ್ಣಾಯಕವಾಗಿ ಬದಲಾಯಿಸುವ ಗುರಿಯನ್ನು ಹೊಂದಿರುವ ನಮ್ಮ 15 ಪ್ರಸ್ತಾವನೆಗಳನ್ನು ಪುತಿನ್ ಸರ್ಕಾರ ನಿರ್ಲಕ್ಷ್ಯ ಮಾಡಿದೆ. ಅದರಲ್ಲೂ ಪ್ರಮುಖವಾಗಿ, ಕಾರ್ಮಿಕರ–ಪರ ಪರಿಸ್ಥಿತಿಯನ್ನು ಸುಧಾರಿಸುವ ನಮ್ಮ ಎಲ್ಲಾ ಕಾನೂನುಗಳನ್ನು, ಸಂಸದೀಯ ಬಹುಮತ ಹೊಂದಿರುವ ಪುತಿನ್ ಬೆಂಬಲದ 'ಯುನೈಟೆಡ್ ರಷ್ಯಾ'ದ ಪಕ್ಷ ಮಂಜೂರು ಮಾಡಲು ನಿರಾಕರಿಸಿದೆ.

ಮೂಲಭೂತ ಕಾನೂನಿನ ತಿದ್ದುಪಡಿಗಳನ್ನು ತರಾತುರಿಯಲ್ಲಿ ಅಳವಡಿಸಲು ಸಾಧ್ಯವಿಲ್ಲ. ಆದ್ದರಿಂದ, ನಾವೀಗಾಗಲೇ, ಸಾಂವಿಧಾನಿಕ ಸಭೆಯನ್ನು ಕರೆಯಬೇಕೆಂದು ಒತ್ತಾಯಿಸಿದ್ದೇವೆ. ಅದರ, ರಚನೆಯ ಕುರಿತು ನಾವು ಕರಡು ಕಾನೂನನ್ನು ಮಂಡಿಸಿದ್ದೇವೆ. ಆದರೆ, 'ಯುನೈಟೆಡ್ ರಷ್ಯಾ' ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಡುಮಾ ಮೂಲಕ ಆತುರದಿಂದ ಮಂಡಿಸಿದೆ. ಫೆಡರೇಶನ್ ಕೌನ್ಸಿಲ್ ಚರ್ಚೆಗೆ ಅನುವು ಮಾಡದೆ ತಕ್ಷಣ ಅನುಮೋದಿಸಿದೆ. ಈ ಅನುಮೋದನೆ ಯನ್ನು ಅಧ್ಯಕ್ಷ ಪುತಿನ್ ತರಾತುರಿಯಿಂದಲೇ ಘೋಷಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಜುಲೈ 1ರ ಮತದಾನವು ಬರಿಯ ಕಾಟಾಚಾರದ್ದಾಗಿರುತ್ತದೆ. ಇದು ಜನಾಭಿಪ್ರಾಯದ ಸ್ಥಾನಮಾನವನ್ನು ಕಸಿದುಕೊಳ್ಳುತ್ತದೆ ಮಾತ್ರವಲ್ಲದೇ, ಚುನಾವಣಾ ಕಾನೂನುಗಳನ್ನು ದಿಕ್ಕರಿಸಿದಂತಾಗುತ್ತದೆ. ಇದೆಲ್ಲವೂ, ಮತ್ತೊಮ್ಮೆ "ಬೂರ್ಜ್ವಾ ನಿರಂಕುಶ ಪ್ರಜಾಪ್ರಭುತ್ವ"ವನ್ನು ಬಯಲುಪಡಿಸಿವೆ.

ಜನಮತಸಂಗ್ರಹದಿಂದ ತಾಂತ್ರಿಕವಾಗಿ ಭಿನ್ನವಾದ ಮತ್ತು "ಆಲ್–ರಷ್ಯನ್–ಮತ ಎಂದು ಕರೆಯಲಾಗುವ ಈ ಮತವನ್ನು ಕೇಂದ್ರೀಯ ಚುನಾವಣಾ ಆಯೋಗವು, ಸಂಶಯಾಸ್ಪದ ಕಾರ್ಯ ವಿಧಾನದ ಪ್ರಕಾರ ಆಯೋಜಿಸುತ್ತಿದೆ. ಪ್ರತಿಯೊಂದು, ನಿರ್ದಿಷ್ಟ ತಿದ್ದುಪಡಿಗೆ ಪ್ರತ್ಯೇಕವಾಗಿ ಮತ ಚಲಾಯಿಸಲು ಅವಕಾಶವಿಲ್ಲ. ಬದಲಾವಣೆಗಳನ್ನು "ಪರ" ಅಥವಾ "ವಿರುದ್ಧ" ಮತಗಳನ್ನು ಮಾತ್ರ ಎಲ್ಲಾ ತಿದ್ದುಪಡಿಗಳಿಗೆ ಒಗಿ ಮಾತ್ರ ವ್ಯಕ್ತಪಡಿಸಬಹುದು. ಇದರಿಂದ ಮತಗಳನ್ನು ವಂಚಿಸಲು ಸಾಕಷ್ಟು ಸಾಧ್ಯತೆಗಳಿವೆ. ಮತದಾನ ಬಹು–ದಿನಗಳನ್ನು ತೆಗೆದು ಕೊಳ್ಳಬಹುದು. ಎಲೆಕ್ಟ್ರಾನಿಕ್ ಮತ್ತು ಅಂಚೆ ಮೂಲಕ ಮತದಾನಕ್ಕಾಗಿ ಅಧಿಕಾರಿಗಳು ತೀವ್ರವಾಗಿ ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ಯಾವುದೇ ರೀತಿಯ ಸಾರ್ವಜನಿಕ ನಿಯಂತ್ರಣವಿಲ್ಲ. ಭವಿಷ್ಯದ ಚುನಾವಣೆಯಲ್ಲಿ ಸುಳ್ಳಿನ ಹೊಸ ವಿಧಾನಗಳನ್ನು ಅಭಿವೃದ್ಧಿ ಪಡಿಸುವ ಪರೀಕ್ಷಾ ನೆಲೆಯಾಗಿ ಇದು ಕಾರ್ಯನಿರ್ವಹಿಸುತ್ತದೆ.

ಪ್ರತಿಯೊಬ್ಬರೂ, ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ವಹಿಸಿ ತಮ್ಮ ಪ್ರಜ್ಞಾಪೂರ್ವಕವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ ಎಂಬ ವಿಶ್ವಾಸ ಹೊಂದಿದ್ದೇವೆ. ಇಲ್ಲಿ ಪ್ರತಿಯೊಬ್ಬರಿಗೂ ನಿರ್ಧರಿಸಲು ಅವಕಾಶಗಳಿವೆ. ಹಾಗೆಂದು, ಯೆಲ್ಟ್ ಸಿನ್ ನ ಸಂವಿಧಾನದ "ಹೊಸ ಆವೃತ್ತಿ ಗೆ" ಮತ ಚಲಾಯಿಸಲು ಸಾಧ್ಯವೇ? ಅದಕ್ಕೆ ನಮ್ಮ ಉತ್ತರ "ಇಲ್ಲ" (ನೋ). ಅಂತಹ ಡಾಕ್ಯುಮೆಂಟ್ ಅನ್ನು ನಾವು ಬೆಂಬಲಿಸಲು ಸಾಧ್ಯವೇ ಇಲ್ಲ.

ನಮ್ಮ ಪರ್ಯಾಯವು, ಕ್ರಿಯಾತ್ಮಕ ಚಲನೆಗಾಗಿ, ರಷ್ಯಾ ವನ್ನು ಸಜ್ಜುಗೊಳಿಸಿವ ಕಾರ್ಯ ಕ್ರಮವಾಗಿದೆ. ಇದು ಪ್ರಮುಖ ಕೈಗಾರಿಕೆಗಳ ರಾಷ್ಟೀಕರಣ, ದೂರಗಾಮಿ ಮತ್ತು ತಕ್ಷಣದ ಯೋಜನೆ, ಅಭಿವೃದ್ಧಿ ಬಜೆಟ್, ವಿಜ್ಞಾನ ಮತ್ತು ಸಂಸ್ಕೃತಿಯ ಪುನರುಜ್ಜೀವನ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ, ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ನಿರಾಕರಣೆ, ರಾಷ್ಟೀಯ ಉದ್ಯಮ ಗಳಿಗೆ ಬೆಂಬಲ ಮತ್ತು ಹಲವಾರು ಇತರ ಕ್ರಮಗಳನ್ನು ಒಳಗೊಂಡಿರುತ್ತದೆ.

ಕೊರೋನಾ ವೈರಸ್ ಸಾಂಕ್ರಾಮಿಕ ಮತ್ತು ಭಯದ ಮನೋರೋಗವು ಜಾಗತಿಕ ಆರ್ಥಿಕ ತೆಯ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. ಜಾಗತಿಕ ಬಂಡವಾಳಶಾಹಿ ಗೆ ಅದು ಸೃಷ್ಟಿಸಿದ ಸಮಸ್ಯೆಗಳನ್ನು ಪರಿಹರಿಸಲು ಅಸಾಧ್ಯವಾಗಿದೆ. ವ್ಯವಸ್ಥೆಯ ಈ ಬಿಕ್ಕಟ್ಟು ಜಗತ್ತಿಗೆ ಮಾರಣಾಂತಿಕ ಬೆದರಿಕೆಯನ್ನು ಒಡ್ಡುತ್ತದೆ. ಇದನ್ನು ಸಮಾಜವಾದದ ತತ್ವಗಳ ಆಧಾರದಲ್ಲಿ ಮಾತ್ರ ಎದುರಿಸಬಹುದು. ಕಮ್ಯೂನಿಸ್ಟ್ ರು ಮಾತ್ರ ಮೂಲ ಕಾನೂನಿನ ಬಲವರ್ಧನೆಗಾಗಿ, ವಿಶ್ವಾಸ ಮತ್ತು ಕಠಿಣ ಅನುಷ್ಠಾನಕ್ಕೆ ಬದ್ಧರಾಗಿರುತ್ತಾರೆ.

JANASHAKTHI KANNADA VARA PATRIKE JULY 13-19, 2020 Price: Rs. 10/- Date of Publication: 10 JULY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಅಂಗವಿಕಲರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಪ್ರತಿಭಟನೆ

ಸನ್ಮಾನ್ಯ ಶ್ರೀ ಪ್ರಧಾನಮಂತ್ರಿಗಳು,

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿಂತೆ ಕೋವಿಡ್ –19 ಸಾಂಕ್ರಾಮಿಕ ಲಾಕ್ ಡೌನ್ ದಿಗಳಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಲ್ಲಿ ಬಹಳ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈ ದಿನಮಾನಗಳಲ್ಲಿ ತಮ್ಮ ಉದ್ಯೋಗ ಮತ್ತು ಜೀವನೋಪಾಯವನ್ನು ಕಳೆದು ಕೊಂಡಿದ್ದಾರೆ. ಈ ಸಂದರ್ಭದಲ್ಲಿ ಅಂಗವಿಕಲರಿಗೆ ಅವರ ಮಾಸಾಶ ಹೊರತು ಪಡಿಸಿದರೆಯಾವುದೇ ರೀತಿಯ ಸಹಾಯ ಸಿಗಲಿಲ್ಲ. ಕೇಂದ್ರ ಸರ್ಕಾರದ ಒಟ್ಟು ಮೊತ್ತ ರೂ. 1000/– ಸಹಾಯ ಘೋಷಿತವಾದರೂ ಯಾರು ಇವರ ಫಲಾನುಭವಿಗಳು ಆಗಲೇ ಇಲ್ಲ. ಇದು ಇಂದಿರಾಗಾಂಧಿ ರಾಷ್ಟ್ರೀಯಾ ಅಂಗವೈಕಲ್ಯ ಪಿಂಚಣಿ ಯೋಜನೆ ಫಲಾನುಭವಿಗಳಿಗೆ ಮಾತ್ರ, ಇದರಲ್ಲಿ ಶೇಕಡ 80 ರಷ್ಟು ಅಂಗವಿಕಲತೆ ಹೊಂದಿದವರಾಗಿರಬೇಕು. ಈ ವಿಭಾಗವು ಅಂಗಎಕಲರಲ್ಲೇ ಶೇಕಡ 7.6 ರಷ್ಟ ಸಣ್ಣ ಭಾಗ ಮಾತ್ರ ಇದ್ದಾರೆ. ಹೀಗಾಗಿ ಸರ್ಕಾರದಿಂದ ಸಹಾಯಗಳನ್ನು ಪಡೆದಿಲ್ಲ. ಸದರ ಮಾಸಾಸನವು ಸುಮಾರು 3 ತಿಂಗಳಿನಿಂದ ಮಂಜೂರಿಯಾಗಿರುವುದಿಲ್ಲ. ಹಾಗೂ ಕೋವಿಡ್ –19 ಲಾಕ್ ಡೌನ್‌ನಲ್ಲಿ ಸಂಷ್ಟಕ್ಕೀಡಾದ ಅಂಗವಿಕಲರಿಗೆ ಆಹಾರ ಕಿಟ್ ನಿಡಬೇಕು, ಮತ್ತು ಪ್ರತಿ ತಿಂಗಳು ರೂ. 5000–00 ಮಾಸಾಸನವನ್ನು ಬಿಡುಗಡೆ ಮಾಡಬೇಕು.



ಬೆಂಗಳೂರು

ಹೀಗಾಗಿದ್ದು ಕೋವಿಡ್ ಸಂದರ್ಭ ನಂತರ ಮುಂದುವರೆದ ದಿನಗಲ್ಲಿ ಇಲ್ಲಿಯ ವರೆಗೆ ಅಂಗವಿಲಕರಿಗೆ ವಿಶೇಷ ನೆರವುಗಳು ಸಿಗಲಿಲ್ಲ ಎಂಬುದನ್ನು ಗಮನಿಸಬೇಕು. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕರೋನ ಅವಧಿಯ ಪ್ರತಿ ತಿಂಗಳು ಅಂವಿಕಲರಿಗೆ ಕನಿಷ್ಟ ರೂ. 5000–00ಗಳನ್ನು ಜೀವನ ನಿರ್ವಹಣೆಗೆ ನೀಡಬೇಕು, ಉಚಿತವಾಗಿ ರೇಷನ್ ನೀಡಬೇಕು. ಇದರ ಜೊತೆಯಲ್ಲಿ ಉದ್ಯೋಗ ಖಾತ್ರಿ ಕೆಲಸದಲ್ಲಿ ಅಂಗವಿಕಲರನ್ನು ತೊಡಗಿಸಲು ವಿಶೇಷ ಗಮನ ನೀಡಬೇಕು. ಉದ್ಯೋಗ ಖಾತ್ರಿ ದಿನಗಳನ್ನು 200 ದಿನಗಳಿಗೆ ಏರಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರಗಳಿಗೂ ವಿಸ್ತರಿಸಬೇಕು. ನಿರುದ್ಯೋಗ ಭತ್ಯೆಯನ್ನು ನೀಡಬೇಕು.



ಕೊಪ್ಪಳ

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ ಸದರಿ 2016 ರ ಸೆಕ್ಷನ್ 25 ಆಂಗಲರ ಜೀವನ । ಆರೋಗ್ಯದ ಕುರಿತ ಬಾತ್ರಿ ಪಡಿಸುತ್ತದೆ ಇದನ್ನು ಸಹಿತ ಇಂದಿನ ವರೆಗೆ ಜಾರಿ ಮಾಡಿರುವುದಿಲ್ಲ, ಈಗಲಾದರು ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಮೂಲಕ ನಮ್ಮ ಸಂಘಟನೆಯಿಂದ ಒತ್ತಾಯಿಸಿದೆ.

ಬೇಡಿಕೆಗಳು:

1. ಕೋವಿಡ್ –19 ಪರಿಸ್ಥಿತಿಯನ್ನು ನಿವಾರಿಸುವ ತನಕ ಪ್ರತಿ ತಿಂಗಳು ರೂ. 5000–00 ನೀಡಬೇಕು..!
2. ರೇಷನ್ ಕಿಟ್‌ಗಳನ್ನು ನೀಡಬೇಕು. (ಬಿಪಿಎಲ್ ಆಲ್ಲದವರಿಗೂ ಸೇರಿ)
3, ನಿರುದ್ಯೋಗಿ ಭತ್ಯೆಯನ್ನು ನೀಡಬೇಕು.
4. ಉದ್ಯೋಗ ಖಾತ್ರಿಯಲ್ಲಿ ಅಂಗವಿಕಲರ ಕೆಲಸಕ್ಕಾಗಿ ವಿಶೇಷ ಗಮನ ಹರಿಸಬೇಕು.
5. ಉದ್ಯೋಗ ಖಾತ್ರಿಯಲ್ಲಿ 200 ಮಾನವ ದಿನಗಳ ಕೆಲಸವನ್ನು ನೀಡಬೇಕು ಮತ್ತು ನಗರ ಪ್ರದೇಶದಲ್ಲಿ – ವಿಸ್ತರಸಬೇಕು.
6, ಅಂಗವಿಕಲರ ಮಾಸಾಶನ ನಿಂತಿದ್ದು ಈ ಕೂಡಲೇ ಬಿಡುಗಡೆ ಮಾಡಬೇಕು.

(7–07–2020)

ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ **18 ವಿಡಿಯೊಗಳನ್ನು** ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :



* ಲಿಂಕ್ ಸೋರಬಹುದು ಎಂದು ವಿಕಾಸ ದುಬೆ ಎನ್‌ಕೌಂಟರ್ (ಜು.10)
* ಆನ್–ಲೈನ್‌ಶಿಕ್ಷಣ: ಖಾಸಗಿ ಲಾಬಿಗೆ ಜಯ (ಜು.9)
* ಗೀತಾ ನಾಗಭೂಷಣ ಅವರಿಗೆ ನುಡಿನಮನ– 'ನೀಲಗಂಗಾ' ಓದು (ಜು.8)
* ಕೊರೊನಾ ಉಪಕರಣ ಖರೀದಿಯಲ್ಲಿ ಲೂಟಿ (ಜು.6)
* ವಾರದಕವಿತೆ : 'ಸಂಗಾತ' – ಪ್ರತಿಭಾ ನಂದಕುಮಾರ್ (ಜು.5)
* ನಮೋ ವೈಫಲ್ಯಕ್ಕೆ ಕಾರ್ಮಿಕ ವರ್ಗದ ಆಕ್ರೋಶ (ಜು.4)
* ಆತ್ಮಹತ್ಯೆ ಮಾಡಿಕೊಂಡ ನೇಕಾರರ ಗೋಳು ಕೇಳುವವರು ಯಾರು? (ಜು.3)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'**ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ **'ಬೆಲ್ ಐ ಕಾನ್ ಬಟನ್'** ಒತ್ತಿ.
ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

ಸಂಗಾತ

Marriage is more lonely than solitude
- Adrienne Rich

ಕವನ

1

ಈ ಕೋಣೆಚಿಕ್ಕದು
ಇಬ್ಬರ ಕೋಪ ಹಿಡಿಸುವುದಿಲ್ಲ.
ಗಾಳಿ ಸಾಲದುಇಬ್ಬರ ಉಸಿರಾಟಕ್ಕೆ
ಗೋಡೆಗಳು ತಾಕುತ್ತವೆ ಕೈ ಬೀಸಿದರೆ
ಹಕ್ಕಿ ನುಂಗಿದ ಹುಳುಗಳೆಲ್ಲ
ಹಾಡಾಗಿ ಹೊರ ಹೊಮ್ಮುತ್ತವಂತೆ.
ಅವರ ಹೊರಗಣ ಸಿಪ್ಪೆ ಒಪ್ಪಗೆಡದೆ
ಒಳಗಣ ಹೂರಣ ಪಕ್ವವಾಗದೇ
ವನವಾಸದಲ್ಲೂ ವಾಯುಮಾಲಿನ್ಯ
ಲವ ಕುಶರ ಬಾಯಲ್ಲಿ ಸಂಪೂರ್ಣ
ರಾಮಾಯಣ.

2

ಅವರ ಮನೆಗಳಲ್ಲಿ ಹೊತ್ತು ಹೊತ್ತಿಗೆ
ಒಲೆ ಉರಿಯುತ್ತದೆ. ತರಕಾರಿ ಕಾಳು ಮಸಾಲೆ
ತರತರದ ವ್ರತ ನೇಮನಿಷ್ಠೆ
ಅವರರಾಘವನಲಿ ತಪ್ಪಿಲ್ಲ
ಸೂರ್ಯಾಸ್ತಕ್ಕೆ ಬೆರಗಾಗುವ ನಮ್ಮ
ಚಿತ್ರದಲ್ಲಿ
ಎಲ್ಲವೂ ನೀಲಿಮಯ
ನಮ್ಮ ಮನೆಯಲ್ಲಿಇಬ್ಬರಿದ್ದೆವು
ಎರಡು ಕಾಲಗಳಲ್ಲಿ ಬದುಕುತ್ತಿದ್ದೆವು.
ನಮ್ಮ ಕೊರಳುಗಳು ಒಂದು ನೊಗಕ್ಕೆ
ಕೂಡಲೇಇಲ್ಲ.

3

ಹೆದ್ದಾರಿಯಲ್ಲಿ ಮೂರುಕಲ್ಲಿಟ್ಟು
ಪುಳ್ಳೆಹಚ್ಚಿ
ಅನ್ನ ಮಾಡಬಹುದು.
ಮರದ ಕೆಳಗೆ ಮಲಗಿದರೂ
ಗರ್ಭ ನಿಲ್ಲುತ್ತದೆ.
ಹತ್ತೂ ಮನೆಯವರ ಮತಾಪು,
ಹೂಕುಂಡ ನಮ್ಮಕಣ್ಣಲ್ಲಿ ಬೆಳಕು.
ಬೆಕ್ಕು ಬೇಕೆಂದವರ ಮನೆಯಲ್ಲಿ
ನಾಯಿಯಾಗಿ ಕಂಬಕ್ಕೆ ಕಟ್ಟಿ ಹಾಕಿಸಿಕೊಂಡು...

ಎಲ್ಲ ಯಶಸ್ವಿ ಪುರುಷನ ಹಿಂದೆ
ಒಬ್ಬಳು ಮಹಿಳೆ
ಎಲ್ಲ ಯಶಸ್ವಿ ಮಹಿಳೆಯ ಹಿಂದೆ
ಒಬ್ಬಅತೃಪ್ತ ಪುರುಷ.

–ಪ್ರತಿಭಾ ನಂದಕುಮಾರ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**